ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಜುಲೈ 6 ಭಾನುವಾರ 2025

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 80 | ಪುಟಗಳು: 12

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

















ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸದೆ ಮಾತಿಗೆ ತಪ್ಪಿದ ಕೇಂದ್ರ ಸಚಿವ ಕುಮಾರಸ್ವಾಮಿ

ಮೈಸೂರು ಜಿಪಂ ಕಚೇರಿ ಮುಂದೆ ಕಾಂಗ್ರೆಸ್ ಪ್ರತಿಭಟನೆ



ಮೈಸೂರು ಜಿಪಂ ಕಚೇರಿ ಮುಂಭಾಗ ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ಮೈಸೂರು, ಜು.5(ಜಿಎ)–ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುವುದಾಗಿ ಹೇಳಿಕೆ ನೀಡಿದ್ದ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಅವರು ಮಾತಿಗೆ ತಪ್ಪಿದ್ದಾರೆ ಎಂದು ಆರೋಪಿಸಿ ನಗರ(ಜಿಲ್ಲಾ) ಕಾಂಗ್ರೆಸ್ ಸಮಿತಿ ವತಿಯಿಂದ ಶನಿವಾರ ಪ್ರತಿಭಟನೆ ನಡೆಸಲಾಯಿತು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ದಿಶಾ ಸಮಿತಿ ಸಭೆ ನಡೆಯುವ ವೇಳೆ ಜಿಲ್ಲಾ ಪಂಚಾಯಿತಿ ಕಚೇರಿಯ ಮುಂಭಾಗ ಜಮಾವಣೆಗೊಂಡ ಕಾಂಗ್ರೆಸ್ ಕಾರ್ಯಕರ್ತರು, ನಾನಾ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯ ಪ್ರಚಾರದ ವೇಳೆ ಲೋಕಸಭೆಗೆ ಆಯ್ಕೆಯಾದ ಮಾರನೇ ದಿನವೇ ಮೇಕೆದಾಟು ಯೋಜನೆಗೆ ಅನುಮತಿ ಕೊಡಿಸುವುದಾಗಿ ಮಾತು ನೀಡಿದ್ದರೂ ಅನುಮತಿ ಕೊಡಿಸುವಲ್ಲಿ ವಿಫಲರಾಗಿದ್ದಾರೆ. ಕೇಂದ್ರದ ಬೃಹತ್ ಕೈಗಾರಿಕ ಸಚಿವರಾಗಿ ವರ್ಷ ಕಳೆದರೂ ಹಾಸನ, ಮೈಸೂರು, ಮಂಡ್ಯ, ಚಾಮರಾಜನಗರ ಹಾಗೂ ಕರ್ನಾಟಕದ ಯಾವುದೇ ನೂತನ ಕೈಗಾರಿಕೆ ಸ್ಥಾಪನೆ ಮಾಡಲು ಕ್ರಮ ಕೈಗೊಂಡಿಲ್ಲ. ವಿದ್ಯಾವಂತ ನಿರುದ್ಯೋಗಿಗಳ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಸಚಿವರು ಮೃದು ಧೋರಣೆ ತೋರುತ್ತಿದ್ದಾರೆ ಎಂದು ಟೀಕಿಸಿದರು.

ಕರ್ನಾಟಕದ ಕಳಸ ಬಂಡೂರಿ, ಮಹಾದಾಯಿ ಯೋಜನೆ, ಭದ್ರ ಮೇಲ್ದಂಡೆ ಯೋಜನೆಗೆ 24ನೇ ಸಾಲಿನಲ್ಲಿ ಬಜೆಟ್‌ನಲ್ಲಿ 5000 ಕೋಟಿ ರೂ. ಬಿಜೆಪಿ ಕೇಂದ್ರ ಸರ್ಕಾರ ಘೋಷಣೆ ಮಾಡಿತ್ತು. ಆದರೆ ಇಲ್ಲಿವರೆವಿಗೂ ಈ ಹಣ ಬಿಡುಗಡೆಯಾಗಿಲ್ಲ. ಕರ್ನಾಟಕಕ್ಕೆ ಬರಬೇಕಾದ ಜಿ.ಎಸ್.ಟಿ ತೆರಿಗೆ ಪೂರ್ಣ ಪ್ರಮಾಣದಲ್ಲಿ ನೀಡಿಲ್ಲ. ಇದರ ಬಗ್ಗೆ ಸಚಿವರು ಕೇಂದ್ರ ಸರ್ಕಾರವನ್ನು ಪ್ರಶ್ನೆ ಮಾಡುತ್ತಿಲ್ಲ ಎಂದು ಆಕ್ರೋಶ ಹೊರಹಾಕಿದರು. ಪ್ರತಿಭಟನೆಯಲ್ಲಿ ಮೈಸೂರು ನಗರ ಕಾಂಗ್ರೆಸ್ ವಕ್ತಾರ ಎಸ್.ರಾಜೇಶ್, ರಾಜ್ಯ ಸಂಶೋಧಕರ ಸಂಘದ ಮರಿದೇವಯ್ಯ, ನಾಗೇಶ್, ಕೆಪಿಸಿಸಿ ಕಾರ್ಯದರ್ಶಿಗಳಾದ ನಟರಾಜ್, ಸಯ್ಯದ್ ಫಾರುಕ್, ಸುನಿಲ್, ನಾರಾಯಣ್, ಒಬಿಸಿ ಅಧ್ಯಕ್ಷ ಎನ್.ಆರ್.ನಾಗೇಶ್, ಕುರುಬರಹಳ್ಳಿ ಪ್ರಕಾಶ್ ಮಹದೇವಸ್ವಾಮಿ, ಲೋಕೇಶ್ ಮಾದಪುರ, ಕುಕ್ಕರಹಳ್ಳಿ ನಂಜುಂಡಸ್ವಾಮಿ ಪಾಲ್ಗೊಂಡಿದ್ದರು.

ಮಾಧ್ಯಮಗಳ ಪ್ರಯತ್ನದ ಫಲವಾಗಿ ಸಂತ್ರಸ್ತ ಮಹಿಳೆಯರಿಗೆ ನ್ಯಾಯ ಸಿಕ್ಕಿದೆ!



‘ಸಧೃಡ ಸುಸ್ಥಿರ ಸಮಾಜದಲ್ಲಿ ಸಮಾನತೆ ಮತ್ತು ಮಹಿಳಾ ಸಬಲೀಕರಣಗಳನ್ನು ಸಾಧಿಸುವಲ್ಲಿ ಮಾಧ್ಯಮಗಳ ಪಾತ್ರ’ ಕುರಿತು ಪತ್ರಕರ್ತ ಡಾ.ಅಮ್ಮಸಂದ್ರ ಸುರೇಶ್, ಹೋರಾಟಗಾರ್ತಿ ಜಯಲಕ್ಷ್ಮಿ, ಡಾ.ಶೋಭಾ ರಾಣಿ ಚರ್ಚಿಸಿದರು.

ಮೈಸೂರು, ಜು.5(ಎಂಕೆ)– ಸಮಾಜದಲ್ಲಿ ನೊಂದವರಿಗೆ, ಅದರಲ್ಲೂ ಅನ್ಯಾಯಕ್ಕೊಳಗಾದ ಮಹಿಳೆಯರಿಗೆ ನ್ಯಾಯ ದೊರಕಿಸಿಕೊಡುವಲ್ಲಿ ಮಾಧ್ಯಮಗಳ ಪಾತ್ರ ಮಹತ್ವದ್ದಾಗಿದೆ ಎಂದು ಪತ್ರಕರ್ತ, ಲೇಖಕ ಡಾ.ಅಮ್ಮಸಂದ್ರ ಸುರೇಶ್ ಅಭಿಪ್ರಾಯಿಸಿದರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ ‘ಸಧೃಡ ಸುಸ್ಥಿರ ಸಮಾಜದಲ್ಲಿ ಸಮಾನತೆ ಮತ್ತು ಮಹಿಳಾ ಸಬಲೀಕರಣಗಳನ್ನು ಸಾಧಿಸುವಲ್ಲಿ ಮಾಧ್ಯಮಗಳ ಪಾತ್ರ’ ಕುರಿತ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸಮಾಜದಲ್ಲಿ ಸಾಕಷ್ಟು ದೌರ್ಜನ್ಯಗಳು ನಡೆಯುತ್ತಿರುವುದನ್ನು ಪ್ರತಿನಿತ್ಯ ನೋಡುತ್ತಿದ್ದೇವೆ. ಅದರಲ್ಲೂ ಮಹಿಳೆಯರ ಮೇಲಿನ ದೌರ್ಜನ್ಯಗಳೇ ಹೆಚ್ಚಾಗಿದ್ದು, ಇಂತಹ ದೌರ್ಜನ್ಯ ಘಟನೆಗಳು ಸಂಭವಿಸಿದಾಗ ಸರ್ಕಾರದ ಗಮನ ಸೆಳೆದು ನೊಂದವರಿಗೆ ನ್ಯಾಯ ಕೊಡಿಸುವಲ್ಲಿ ಮಾಧ್ಯಮಗಳ ಪಾತ್ರ ಹಿರಿದಾಗಿದೆ ಎಂದರು.

ತಮ್ಮ ಪತಿಯಿಂದ ಆಸಿಡ್ ದಾಳಿಗೆ ಒಳಗಾದ ಹೋರಾಟಗಾರ್ತಿ ಜಯಲಕ್ಷ್ಮಿ ಅವರ ಬದುಕಿನ ಕುರಿತು ಪುಸ್ತಕವೊಂದನ್ನು ಬರೆದಿದ್ದು, ಆ ಪುಸ್ತಕದಲ್ಲಿ ಜಯಲಕ್ಷ್ಮಿ ಅವರು ಅನುಭವಿಸಿದ ಸಂಕಷ್ಟಗಳು, ಅವರಿಗಾದ ಅನ್ಯಾಯ, ನಂತರ ಎಲ್ಲಾ ಕಷ್ಟಗಳನ್ನು ಎದುರಿಸಿ ಅವರು ಸಮಾಜದ ಮುಖ್ಯ ವಾಹಿನಿಗೆ ಬಂದ ಬಗೆಯನ್ನು ತಿಳಿಸಲಾಗಿದೆ. 2003ರಲ್ಲಿ ಜಯಲಕ್ಷ್ಮಿ ಅವರಿಗೆ ಆಸಿಡ್ ದಾಳಿಯಾದಾಗ ಎಲ್ಲಾ ಮುದ್ರಣ ಹಾಗೂ ದೃಶ್ಯ ಮಾಧ್ಯಮಗಳು ವರದಿ ಮಾಡಿದ್ದರಿಂದಾಗಿ ಅವರು ಚಿಕಿತ್ಸೆ ಪಡೆದು ಚೇತರಿಸಿಕೊಳ್ಳಲು, ನ್ಯಾಯ ಪಡೆಯಲು ಸಾಧ್ಯವಾಯಿತು. ಮಾಧ್ಯಮಗಳಲ್ಲಿ ಅವರಿಗಾದ ಅನ್ಯಾಯ ತಿಳಿದ ಹಲವರು ಜಯಲಕ್ಷ್ಮಿ ಅವರ ನೆರವಿಗೆ ನಿಂತಿದ್ದರು ಎಂದು ಮಾಧ್ಯಮಗಳ ಮಹತ್ವ ತಿಳಿಸಿದರು.

70ಕ್ಕೂ ಅಧಿಕ ಮಹಿಳೆಯರಿಗೆ ಆಸಿಡ್ ದಾಳಿ: ಮಹಿಳಾ ಹೋರಾಟಗಾರ್ತಿ ಜಯಲಕ್ಷ್ಮಿ ಮಾತನಾಡಿ, ರಾಜ್ಯದಲ್ಲಿ ಆಸಿಡ್ ದಾಳಿಗೆ ಒಳಗಾದ 70 ಕ್ಕೂ ಹೆಚ್ಚು ಮಹಿಳೆಯರಿದ್ದು, ಅವರಲ್ಲಿ ಬಹುತೇಕರು ತಮ್ಮ ಗಂಡನಿಂದ ದಾಳಿಗೆ ಒಳಗಾಗಿದ್ದಾರೆ. ಮೊದಲು ಆಸಿಡ್ ದಾಳಿಗೆ ಒಳಗಾದವರಿಗೆ ಸರ್ಕಾರದಿಂದ ಯಾವುದೇ ಸಹಾಯ ಧನ ಇರಲಿಲ್ಲ. ನಿರಂತರ ಹೋರಾಟದಿಂದ ಇಂದು ಸರ್ಕಾರ ಸಂತ್ರಸ್ತರ ಪರ ಹಲವು ಕಾನೂನುಗಳನ್ನು ತಂದಿದ್ದು, ಚಿಕಿತ್ಸೆಗೆ ಆರ್ಥಿಕ ನೆರವು ನೀಡುತ್ತಿದ್ದೆ. ತಮ್ಮ ವೈಯಕ್ತಿಕ ಜೀವನದಲ್ಲಾದ ಕಹಿ ಘಟನೆಗಳನ್ನು ಮೆಲುಕು ಹಾಕುತ್ತಾ ಭಾವುಕರಾದರು.

ಸಂಘಟನೆ ಮತ್ತು ಹೋರಾಟಕ್ಕೆ ಜಯ: ನಾನು ಆಸಿಡ್ ದಾಳಿಗೆ ಒಳಗಾಗಿ ಅನುಭವಿಸಿದ ನೋವನ್ನು ಯಾರು ಅನುಭವಿಸಬಾರದು. ಇತ್ತೀಚೆಗೆ ಆಸಿಡ್ ದಾಳಿ ಪ್ರಕರಣಗಳು ಕಡಿಮೆಯಾಗಿರುವುದು ಸಮಾದಾನ ತರುವ ವಿಷಯವಾಗಿದ್ದು, ಈಗಾಗಲೇ ಆಸಿಡ್ ದಾಳಿಗೆ ಒಳಗಾದವರನ್ನು ಸಂಘಟಿಸಿ ‘ಗೆಳತಿ’ ಹೆಸರಿನ ಸಂಘಟನೆ ಕಟ್ಟಿ ನಡೆಸಿದ ಹೋರಾಟ ಫಲದಿಂದಾಗಿ ಸರ್ಕಾರ ನೊಂದವರ ಪರವಾಗಿ ನಿಲ್ಲುವಂತಾಗಿದೆ. ಇದಕ್ಕೆಲ್ಲಾ ಮಾಧ್ಯಮಗಳು ಸಹಕಾರ ಸ್ಮರಣಿಯ ಎಂದು ತಿಳಿಸಿದರು. ಪಂಚಾಯತ್ ಅಭಿವೃದ್ಧಿ ಅಧಿಕಾರಿಯೂ ಆದ ಮೈಸೂರು ಬುಕ್ ಕ್ಲಬ್ ಸದಸ್ಯೆ ಡಾ.ಶೋಭರಾಣಿ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು.

ಹರೀಶ್‌ಗೌಡರಿಗೆ ಸನ್ಮಾನ...



ಎಂಸಿಡಿಸಿಸಿ ಬ್ಯಾಂಕಿನ ಚುನಾವಣೆಯಲ್ಲಿ ಜಯಗಳಿಸಿದ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಮಹದೇಶ್ವರ ವಿವಿಧೋದ್ದೇಶ ಸಹಕಾರ ಸಂಘ, ಕುಂಬಾರಕೊಪ್ಪಲ್, ಮೈಸೂರು ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಲಾಯಿತು. ಈ ವೇಳೆ ಅಧ್ಯಕ್ಷ ಕೆ.ವಿ.ಸೀತಾರಾಮು, ಉಪಾಧ್ಯಕ್ಷರಾದ ಶ್ರೀಮತಿ ಪಂಚಮಿ, ನಿರ್ದೇಶಕರಾದ ಕೆ.ವಿ.ಚೇತನ್, ಸತೀಶ್, ಶಿವಕುಮಾರ್, ಮಹೇಶ್ ಸಿ, ಲೋಕೇಶ್ ಎಂ, ಚಂದ್ರಶೇಖರ್, ರಮೇಶ್‌ನಾಯಕ, ಕಾರ್ಯದರ್ಶಿ ಚಂದ್ರಕುಮಾರಿ ಇತರರಿದ್ದರು.


ಕೆಂಪೇಗೌಡ ಜಯಂತಿ...



ಬಂಡಿಪಾಳ್ಯ ಗ್ರಾಮದಲ್ಲಿ ಕೆಂಪೇಗೌಡರ ವಿಗ್ರಹವನ್ನು ಬೆಳ್ಳಿ ರಥದಲ್ಲಿ ಪ್ರತಿಷ್ಠಾಪಿಸಿ ಬೀದಿಗಳಲ್ಲಿ ಮೆರವಣಿಗೆ ಮಾಡುವ ಮೂಲಕ ವಿಜೃಂಭಣೆಯಿಂದ ಕೆಂಪೇಗೌಡರ ಜಯಂತಿ ಆಚರಿಸಲಾಯಿತು. ಈ ವೇಳೆ ಸಂಘದ ಕೇಬಲ್ ಕೃಷ್ಣ, ಉಪಾಧ್ಯಕ್ಷ ದಿನೇಶ್ ಶಿವಲಿಂಗೇಗೌಡ, ಕಾರ್ಯದರ್ಶಿ ವೇಣುಗೋಪಾಲ್, ಸಂಘಟನಾ ಕಾರ್ಯದರ್ಶಿ ಸಂತೋಷ, ಪದಾಧಿಕಾರಿಗಳಾದ ರಾಘವೇಂದ್ರ, ಪುಟ್ಟಸ್ವಾಮಿ, ರವಿಕುಮಾರ್, ಅಜಯ್‌ಕುಮಾರ್, ಪ್ರದೀಪ್, ನಾಗೇಶ, ಸುನಿಲ್‌ಕುಮಾರ್, ಚಂದ್ರ ಎಸ್ ಗೌಡ, ಪಟೇಲ್ ರಮೇಶ್‌ಗೌಡ, ಪ್ರದೀಪ್, ರಾಮಕೃಷ್ಣ, ಯಜಮಾನರಾದ ಸೋಮಣ್ಣ, ಸಂಜೀವ್‌ಕುಮಾರ್, ಲೋಕೇಶ್, ನಾಗೇಶ್, ಹಾಗೂ ಯುವಕರು ಉಪಸ್ಥಿತರಿದ್ದರು.

ಆರ್‌ಎಸ್‌ಎಸ್ ನಿಷೇಧ ಹೇಳಿಕೆ ಹುಚ್ಚುತನದ್ದು

ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆಗೆ ಬಿಎಸ್‌ವೈ ಟೀಕೆ



ಬೆಂಗಳೂರು, ಜು. 5(ಕೆಎಂಶಿ) –ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ನಿಷೇಧ ಕುರಿತು ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ಹುಚ್ಚುತನದ್ದು ಎಂದು ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಟೀಕಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ರಾಷ್ಟ್ರೀಯ ಸ್ವಯಂಸೇವಕ ಸಂಘ ನಿಷೇಧಿಸುವುದಾಗಿ ಹೇಳಿರುವುದು ಹಾಸ್ಯಾಸ್ಪದ, ಇಂತಹ ಹೇಳಿಕೆಗೆ ಪ್ರಿಯಾಂಕ್ ಖರ್ಗೆ ದೇಶದ ಜನರ ಕ್ಷಮಾಪಣೆ ಕೋರಬೇಕು ಎಂದು ಒತ್ತಾಯಿಸಿದ್ದಾರೆ. ಮೊದಲನೆಯದಾಗಿ, ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವುದು ಕನಸಿನ ಮಾತು, ಮುಂದಿನ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದು ನರೇಂದ್ರ ಮೋದಿ ಮತ್ತೊಮ್ಮೆ ಪ್ರಧಾನಿ ಆಗುವುದು ನಿಶ್ಚಿತ.

ಹುಚ್ಚುತನದ ಹೇಳಿಕೆಗಳಿಂದ ದೇಶದ ಜನರ ಮುಂದೆ ಹಗುರ ಆಗಬೇಡಿ ಎಂಬ ಸಲಹೆ ನೀಡುತ್ತೇನೆ. ದೇಶದ ಉದ್ದಗಲಕ್ಕೆ ರಾಷ್ಟ್ರೀಯ ಸ್ವಯಂಸೇವಕ ಸಂಘದ ಗರಡಿಯಲ್ಲಿ ಪಳಗಿದವರಲ್ಲಿ ಪ್ರಧಾನಿ ಮೋದಿ ಜೊತೆ ನಾವೆಲ್ಲರೂ ಇದ್ದೇವೆ ಎಂದರು.

ಇತಿಹಾಸ ಬರೀ ಯುದ್ಧ ಕುರಿತದ್ದಲ್ಲ; ಜನಜೀವನ ಅಧ್ಯಯನವೂ ಹೌದು

ಇತಿಹಾಸ ಅಂಕಣಕಾರ ಅನಿರುದ್ಧ್ ಕನಿಸೆಟ್ಟಿ ಅಭಿಮತ



‘ಯುದ್ಧ, ರಕ್ತಪಾತ ಮತ್ತು ಐತಿಹಾಸಿಕ ಇತಿಹಾಸ’ ಕುರಿತು ಇತಿಹಾಸ ಅಂಕಣಕಾರ ಅನಿರುದ್ಧ್ ಕನಿಸೆಟ್ಟಿ ಮಾತನಾಡಿದರು. ಅರುಣ್ ಕೃಷ್ಣನ್ ಉಪಸ್ಥಿತರಿದ್ದರು.

ಮೈಸೂರು, ಜು.5(ಎಂಕೆ)– ಇತಿಹಾಸವೆಂದರೆ ಬರೀ ಯುದ್ಧ ಮತ್ತು ಸಾಮ್ರಾಜ್ಯ ವಿಸ್ತರಣೆ ಮಾತ್ರವಲ್ಲ. ಸ್ಥಳೀಯ ಸಾಂಸ್ಕೃತಿಕ ಪರಂಪರೆಯೊಂದಿಗೆ ಕೃಷಿ, ವ್ಯಾಪಾರ, ಜನಜೀವನವದ ಅಧ್ಯಯನವೂ ಆಗಿದೆ ಎಂದು ಇತಿಹಾಸ ಅಂಕಣಕಾರ ಅನಿರುದ್ಧ್ ಕನಿಸೆಟ್ಟಿ ಹೇಳಿದರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ ‘ಯುದ್ಧ, ರಕ್ತಪಾತ ಮತ್ತು ಐತಿಹಾಸಿಕ ಇತಿಹಾಸ’ ಕುರಿತು ಮಾತನಾಡಿದ ಅವರು, ಇತಿಹಾಸ ಎಂದರೆ ಕೇವಲ ಯೋಚಿಸುವುದಲ್ಲ. ಅಧ್ಯಯನ ಮತ್ತು ಪರಾಮರ್ಶನದಿಂದ ಕೂಡಿರುವಂತಹದ್ದಾಗಿದೆ. ಚೋಳರ ಇತಿಹಾಸವನ್ನು ಅಧ್ಯಯನ ಮಾಡುವುದಾದರೆ, ರಾಜನ ಅಧಿಕಾರ, ಸಾಮ್ರಾಜ್ಯ ವಿಸ್ತರಣೆಗೆ ಸೀಮಿತವಾಗಿದೆ ಅಂದಿನ ಬೌಗೋಳಿಕ ಹಿನ್ನಲೆಯನ್ನು ತಿಳಿಸಿದರಷ್ಟೇ ಇತಿಹಾಸ ಅಧ್ಯಯನವೆಂಬುದು ಪೂರ್ಣವಾಗಲಿದೆ ಎಂದು ತಿಳಿಸಿದರು.

ಆಧುನಿಕ ರಾಜಕಾರಣಿಗಳು ಕೆಲವೊಮ್ಮೆ ಹೇಳುವ ಇತಿಹಾಸವನ್ನು ಬಹಳ ಎಚ್ಚರಿಕೆಯಿಂದ ಅರ್ಥೈಸಿಕೊಳ್ಳಬೇಕು. ನಂಬುವುದಕ್ಕಿಂತ ಮುಖ್ಯವಾಗಿ ರಾಜಕಾರಿಣಿಗಳು ಏನೂ ಹೇಳುತ್ತಾರೆ. ಅವರ ಹೇಳಿಕೆಯಲ್ಲಿ ಸತ್ಯಾಂಶ ಎಷ್ಟಿದೆ ಎಂಬುದನ್ನು ಅರಿಯುವುದು ಅವಶ್ಯವಾಗಿದೆ. ಹಾಗೆಯೇ ಇತಿಹಾಸವನ್ನು ಬರೆಯುವಾಗಲೂ ಪರಾಮರ್ಶನೆ ನಡೆಸುವುದು ಅಗತ್ಯವಾಗಿರಲಿದೆ ಎಂದು ಹೇಳಿದರು.

ದಕ್ಷಿಣ ಭಾರತದಲ್ಲಿ ಪ್ರಜಾಪ್ರಭುತ್ವದ ಬೇರು ವಿಸ್ತಾರವಾಗಿದ್ದು, ಉತ್ತರ ಭಾರತದ ಜನರು ದಕ್ಷಿಣ ಭಾರತದ ಇತಿಹಾಸವನ್ನು ಅಧ್ಯಯನ ನಡೆಸಲು ಉತ್ಸುಕರಾಗಿದ್ದಾರೆ. ಕರ್ನಾಟಕದಲ್ಲಿ ಆಳ್ವಿಕೆ ನಡೆಸಿದ ಬಹುತೇಕ ರಾಜಮನೆತನಗಳು ರಾಜಪ್ರಭುತ್ವದ ಜೊತೆಗೆ ಪ್ರಜಾಪ್ರಭುತದ ಅಂಶಗಳನ್ನು ಅಳವಡಿಸಿಕೊಂಡಿದ್ದರು. ಕೃಷಿ, ವ್ಯಾಪಾರ, ವಹಿವಾಟಿಗೆ ಅವಕಾಶ ನೀಡಿದ್ದರು ಎಂದು ವಿವರಿಸಿದರು.

ರಾಜಮನೆತನಗಳ ಆಳ್ವಿಕೆ ಅವಧಿಯಲ್ಲಿ ಗ್ರಾಮ–ಗ್ರಾಮಗಳ ನಡುವೆಯೂ ಹಾಗಾಗ ಸಂಘರ್ಷಗಳು ನಡೆಯುತ್ತಿದ್ದು, ರಾಜರು ಸಮಸ್ಯೆಗಳನ್ನು ಇತ್ಯರ್ಥಗೊಳಿಸುವ ಪದ್ಧತಿ ಇತ್ತು. ಅಲ್ಲದೆ ಮಾನವ ಇತಿಹಾಸ ಮತ್ತು ಪೂರ್ವ ಇತಿಹಾಸದ ವಸ್ತು ಅವಶೇಷಗಳನ್ನು ಅಧ್ಯಯನ ಮಾಡುವ ಮೂಲಕ ಆಳ್ವಿಕೆ ನಡೆಸಲಾಗುತ್ತಿತ್ತು. ಆದ್ದರಿಂದ ಇತಿಹಾಸವನ್ನು ಪ್ರತಿಯೊಬ್ಬರು ಅಧ್ಯಯನ ನಡೆಸಬೇಕು. ಇತಿಹಾಸದಲ್ಲಿ ಘಟನಾವಳಿಗಳನ್ನು ತಿಳಿದುಕೊಳ್ಳಬೇಕು ಎಂದು ಸಲಹೆ ನೀಡಿದರು. ಅರುಣ್ ಕೃಷ್ಣನ್ ನಿರೂಪಣೆ ನಡೆಸಿಕೊಟ್ಟರು.

ಮದುವೆಗೆ ಒಲ್ಲೆ ಎಂದ ಗೆಳತಿ ಹತ್ಯೆಗೈದ ಗೆಳೆಯನ ಬಂಧನ


ಮೈಸೂರು, ಜು.5– ಪರಿಚಿತನಿಂದಲೇ ಹಲ್ಲೆಗೊಳಗಾಗಿದ್ದ ಪೂರ್ಣಿಮಾ ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟಿದ್ದು, ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಕೃಷ್ಣಮೂರ್ತಿಪುರಂನ ವನಿತಾ ಸದನ ಶಾಲೆಯಲ್ಲಿ ಡಿಸೈನರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದ ಪಾಂಡವಪುರ ತಾಲೂಕು, ಎಲೆಕೆರೆ ಗ್ರಾಮದ ಪೂರ್ಣಿಮಾಗೆ ಅದೇ ಗ್ರಾಮದ ಅಭಿಷೇಕ್(37) ನಿನ್ನೆ ಚಾಕು ಹಾಗೂ ಕುಡುಗೋಲಿನಿಂದ ಮಾರಣಾಂತಿಕ ಹಲ್ಲೆ ನಡೆಸಿ, ತಾನೇ ಖಾಸಗಿ ಆಸ್ಪತ್ರೆಗೆ ದಾಖಲಿಸಿ ಪರಾರಿಯಾಗಿದ್ದ. ಆದರೆ ಚಿಕಿತ್ಸೆ ಫಲಕಾರಿಯಾಗದೆ ಪೂರ್ಣಿಮಾ ಇಂದು ಮೃತಪಟ್ಟಿದ್ದಾರೆ.

ಈ ಸಂಬಂಧ ಪ್ರಕರಣ ದಾಖಲಾದ ನಾಲ್ಕು ಗಂಟೆಗಳಲ್ಲೇ ಆರೋಪಿಯನ್ನು ಬಂಧಿಸಲಾಗಿದೆ. ಮೇಲಧಿಕಾರಿಗಳ ಮಾರ್ಗದರ್ಶನದಲ್ಲಿ ಲಕ್ಷ್ಮೀಪುರಂ ಇನ್ಸ್‌ಪೆಕ್ಟರ್ ಬಿ.ಎಸ್.ರವಿಶಂಕರ್, ಸಬ್‌ಇನ್ಸ್‌ಪೆಕ್ಟರ್‌ಗಳಾದ ಸಿ.ಇರ್ಷಾದ್, ಅಜಯ್, ಸಿಬ್ಬಂದಿ ಸಿ.ಎಲ್.ಮಧುಸೂದನ್, ರಾಜು ಮಾಳಗಿ ಹಾಗೂ ಸಿಡಿಆರ್ ವಿಭಾಗದ ಕುಮಾರ್ ತಂಡ, ಆರೋಪಿ ಅಭಿಷೇಕ್‌ನನ್ನು ಬಂಧಿಸಿ, ನ್ಯಾಯಾಧೀಶರ ಆದೇಶದಂತೆ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಒಂದೇ ಗ್ರಾಮದ ಪೂರ್ಣಿಮಾ ಹಾಗೂ ಅಭಿಷೇಕ್ ಬಾಲ್ಯದಿಂದಲೂ ಸಹಪಾಠಿಗಳಾಗಿದ್ದರು. ಅಭಿಷೇಕ್ ಇತ್ತೀಚೆಗೆ ವಿವಾಹವಾಗುವಂತೆ ಪೂರ್ಣಿಮಾಳನ್ನು ಪೀಡಿಸುತ್ತಿದ್ದ. ಆಕೆಯ ಮನೆಯವರಿಗೂ ವಿವಾಹ ಮಾಡಿಕೊಡುವಂತೆ ಒತ್ತಾಯಿಸಿದ್ದ. ಆದರೆ ಅವರು ಒಪ್ಪಿರಲಿಲ್ಲ. ನಿನ್ನೆ ಮಧ್ಯಾಹ್ನ ಪೂರ್ಣಿಮಾ ಕೃಷ್ಣಮೂರ್ತಿಪುರಂನಿಂದ ಸಿಟಿ ಬಸ್ ನಿಲ್ದಾಣಕ್ಕೆ ಬಸ್ ಹತ್ತಲು ಹೋಗುವಾಗ ಅಭಿಷೇಕ್ ಎದುರಾಗಿದ್ದ. ಆ ವೇಳೆ ಇಬ್ಬರಿಗೂ ಜಗಳವಾಗಿದ್ದು, ಅಭಿಷೇಕ್ ಮಾರಣಾಂತಿಕ ಹಲ್ಲೆ ನಡೆಸಿದ ಎಂದು ತಿಳಿದುಬಂದಿದೆ.

ಪಿಎಚ್.ಡಿ ಪದವಿ



ಮೈಸೂರು: ಡಾ.ಜಿ.ಕರಿಯಪ್ಪ ಅವರ ಮಾರ್ಗದರ್ಶನದಲ್ಲಿ ಸುನೀಲ್ ಚೌಧರಿ ಎ. ಅವರು ಪ್ರಾಚೀನ ಇತಿಹಾಸ–ಪುರಾತತ್ವ ಅಧ್ಯಯನ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್‌ನಿಂದ ಶಿಕ್ಷಣ ತಜ್ಞರಿಂದ ಮಾರ್ಗದರ್ಶನ ಕಾರ್ಯಕ್ರಮ

ಮೈಸೂರು,ಜು.5–ನವಭಾರತ್ ನಿರ್ಮಾಣ್ ಸೇವಾ ಟ್ರಸ್ಟ್ ವತಿಯಿಂದ ಜುಲೈ 6ರಂದು ‘ಮಕ್ಕಳಲ್ಲಿ ಜ್ಞಾನದೊಂದಿಗೆ ಪ್ರಬುದ್ಧತೆ’ ಆಶಯದೊಂದಿಗೆ ‘ಶಿಕ್ಷಣ ತಜ್ಞರಿಂದ ಮಾರ್ಗದರ್ಶನ’ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಪ್ರತಿಭಾ ಪುರಸ್ಕಾರದ ಪೂರ್ವಭಾವಿಯಾಗಿ ವಿಜಯನಗರ 1ನೇ ಹಂತದ ಕೊಡಗು ಗೌಡ ಸಮುದಾಯ ಭವನದಲ್ಲಿ ಬೆಳಗ್ಗೆ 9.30ಕ್ಕೆ ಶಿಕ್ಷಣ ತಜ್ಞರಿಂದ ಮಾರ್ಗದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಮೈಸೂರು ವಿವಿ ನಿವೃತ್ತ ಪ್ರಾಧ್ಯಾಪಕ, ಶಿಕ್ಷಣ ತಜ್ಞ ಡಾ.ಪ್ರಧಾನ್ ಗುರುದತ್ತ, ಹಿರಿಯ ರಂಗ ಕಲಾವಿದೆ ಗೀತಾ ಮೋಂಟಡ್ಕ ಮಾರ್ಗದರ್ಶನ ನೀಡಲಿದ್ದಾರೆ.

ನಿಧನ

ಎನ್.ಸುರೇಶ್



ಮೈಸೂರು, ಜು. 5–ಮೈಸೂರಿನ ರಾಮಕೃಷ್ಣನಗರದ ಇ ಅಂಡ್ ಎಫ್ ಬ್ಲಾಕ್ ನಿವಾಸಿ ಎನ್.ಸುರೇಶ್ (48) ಗುರುವಾರ ಹೃದಯಾಘಾತದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಅಶೋಕಪುರಂ ರುದ್ರಭೂಮಿಯಲ್ಲಿ ಶುಕ್ರವಾರ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ವಿಜಿಯಾ



ಮೈಸೂರಿನ ಎನ್.ಆರ್.ಮೊಹಲ್ಲಾದ ಶಿವಾಜಿ ರಸ್ತೆ, 2ನೇ ಕ್ರಾಸ್ ನಿವಾಸಿ ಶಿವನಂಜನಾಯಕ ಅವರ ಪತ್ನಿ ವಿಜಿಯಾ (60) ಶನಿವಾರ ನಿಧನರಾದರು. ಮೃತರು ಪುತ್ರ, ಪುತ್ರಿ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಎನ್.ಆರ್.ಮೊಹಲ್ಲಾದಲ್ಲಿರುವ ರುದ್ರಭೂಮಿಯಲ್ಲಿ ನಾಳೆ (ಜು.6) ಮಧ್ಯಾಹ್ನ 1.30ಕ್ಕೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

6.07.2025 ಭಾನುವಾರ, ಮಳೆ ನಕ್ಷತ್ರ: ಪುನರ್ವಸು 6.7.2025 ರಿಂದ 19.7.2025
ವಿಶ್ವವಸು ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಶುಕ್ಲ ಪಕ್ಷ,
ತಿಥಿ: ಏಕಾದಶಿ, ನಕ್ಷತ್ರ: ವಿಶಾಖ, ರಾಹುಕಾಲ: ಸಂಜೆ 4.30 ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ದೇಹ ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 6.30 ರಿಂದ.

■ **ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನಂ ಚಾರಿಟಬಲ್ ಟ್ರಸ್ಟ್ :** 83ನೇ ಜಯಂತ್ಯುತ್ಸವ–2025, ಬೆಳಗ್ಗೆ 8ಕ್ಕೆ ಅವಭೃತ ಸ್ನಾನ, ವಸಂತೋತ್ಸವ, ಬೆಳಗ್ಗೆ 9ಕ್ಕೆ ಪವಮಾನ ಹೋಮ, ಸ್ಥಳ: ಶ್ರೀ ಚಂದ್ರಮೌಳೀಶ್ವರ ಸ್ವಾಮಿ ದೇವಸ್ಥಾನ, ದೇವಸ್ಥಾನದ ರಸ್ತೆ, ವಾಣಿವಿಲಾಸ ಮೊಹಲ್ಲಾ.

■ **ರಾಮಕೃಷ್ಣ ವಿದ್ಯಾಕೇಂದ್ರ :** ಬೋಧಕೇತರ ಸಿಬ್ಬಂದಿಗೆ ಕಾರ್ಯಾಗಾರ, ಸಾನ್ನಿಧ್ಯ : ಸ್ವಾಮಿ ಮಹಾಮೇದಾನಂದಜೀ ಮಹಾರಾಜ್, ಉಪಸ್ಥಿತರು : ಬಾಲಕೃಷ್ಣಯ್ಯ, ಡಾ. ಷಣ್ಮುಖ, ಡಾ. ಪಾಂಡುರಂಗ, ಪ್ರೊ. ಸತ್ಯನಾರಾಯಣ, ಶ್ರೀ ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ. ಪಾಪೇಗೌಡ, ಸ್ಥಳ: ಸ್ವಾಮಿ ಸೋಮನಾಥಾನಂದಜೀ ಸಭಾಂಗಣ, ಬೆಳಗ್ಗೆ 9 ರಿಂದ.

■ **ಶ್ರೀ ಶಿವಯೋಗಿಸ್ವಾಮಿ ಗದ್ದುಗೆ ಮತ್ತು ಶ್ರೀ ಮನೆ ಮಂಚಮ್ಮ ದೇವಸ್ಥಾನ :** ಶ್ರೀ ಶಿವಯೋಗಿ ಸ್ವಾಮಿಗಳವರ 78ನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮದ ಅಂಗವಾಗಿ ಶ್ರೀ ಶಿವಯೋಗಿ ಸ್ವಾಮಿಗಳವರ ರಥೋತ್ಸವ, ಸ್ಥಳ: ಶ್ರೀ ಮನೆ ಮಂಚಮ್ಮ ದೇವಸ್ಥಾನ, ಬೆಳಗ್ಗೆ 10ಕ್ಕೆ.

■ **ಶ್ರೀ ಸತ್ಯಸಾಯಿ ಸೇವಾ ಸಂಘಟನೆಗಳು, ಮೈಸೂರು ಜಿಲ್ಲೆ :** ವಾಹಿನಿ ಮಹೋತ್ಸವ, ಭಗವದ್ಗೀತಾ ಪ್ರದರ್ಶನ, ಸ್ಥಳ: ಶ್ರೀ ಸತ್ಯಸಾಯಿ ಬಾಬಾ ಶಾಲೆ, ಬೃಂದಾವನ ಆಸ್ಪತ್ರೆ ರಸ್ತೆ, ಜಯಲಕ್ಷ್ಮಿಪುರಂ, ಬೆಳಗ್ಗೆ 10 ರಿಂದ.

■ **ವಿವೇಕಾನಂದ ಕೇಂದ್ರ ಕನ್ಯಾಕುಮಾರಿ, ಉತ್ತಿಷ್ಠ ಭಾರತ ಪ್ರತಿಷ್ಠಾನ :** ಸ್ವಾಮಿ ವಿವೇಕಾನಂದರ 122ನೇ ಮಹಾ ನಿರ್ವಾಣ ದಿನ, ಪ್ರಾಸ್ತಾವಿಕ ನುಡಿ : ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ.ಡಿ. ತಿಮ್ಮಯ್ಯ, ವಿವೇಕಾನಂದರ ಭಾವಚಿತ್ರಕ್ಕೆ ಪುಷ್ಪಾರ್ಚನೆ: ಸುಯೋಗ್ ಆಸ್ಪತ್ರೆ ಅಧ್ಯಕ್ಷ ಡಾ. ಎಸ್.ಪಿ. ಯೋಗಣ್ಣ, ಅಧ್ಯಕ್ಷತೆ : ಹಿರಿಯ ಸಮಾಜ ಸೇವಕ ಡಾ.ಕೆ. ರಘುರಾಂ ವಾಜಪೇಯಿ, ಮುಖ್ಯ ಅತಿಥಿಗಳು : ಹಿರಿಯ ಸಂಸ್ಕೃತ ವಿದುಷಿ ಡಾ. ಕೆ. ಲೀಲಾಪ್ರಕಾಶ್, ಸ್ಥಳ: ವಿವೇಕಾನಂದ ಕೇಂದ್ರ, ಕನ್ಯಾಕುಮಾರಿ, ಜೆ.ಪಿ.ನಗರ, ಬೆಳಗ್ಗೆ 10.30ಕ್ಕೆ.

■ **ಬಸವ ಸಮಿತಿ :** ಶರಣ ಸಂಗಮ–307 ಹಾಗೂ ಡಾ. ಎನ್.ಎಂ. ಗಿರಿಜಾಪತಿ ಅವರ ಬಸವಣ್ಣ : ಭಕ್ತಿ ಮತ್ತು ಸಮಾಜ ಕೃತಿ ಬಿಡುಗಡೆ ಸಮಾರಂಭ, ಸಾನ್ನಿಧ್ಯ : ಶ್ರೀ ಸಾಂಬಸದಾಶಿವ ಸ್ವಾಮೀಜಿ, ಕೃತಿ ಕುರಿತು ; ಜೆಎಸ್‌ಎಸ್ ಮಹಾವಿದ್ಯಾಪೀಠ ಕಾಲೇಜು ಶಿಕ್ಷಣ ಇಲಾಖೆ ನಿರ್ದೇಶಕ ಪ್ರೊ. ಮೊರಬದ ಮಲ್ಲಿಕಾರ್ಜುನ, ಅಧ್ಯಕ್ಷತೆ : ಬಸವ ಸಮಿತಿ ಅಧ್ಯಕ್ಷ ಹೆಚ್.ವಿ. ಬಸವರಾಜು, ಸ್ಥಳ: ಬಸವ ಭವನ, ವಿಜಯನಗರ 1ನೇ ಹಂತ, ಬೆಳಗ್ಗೆ 10.30ಕ್ಕೆ

■ **ಅನ್ವೇಷಣಾ ಸೇವಾ ಟ್ರಸ್ಟ್ :** ವಿಶ್ವ ವೈದ್ಯರ ದಿನಾಚರಣೆ, ಸಾಧಕ ವೈದ್ಯರಿಗೆ ವೈದ್ಯಶ್ರೀ ಪ್ರಶಸ್ತಿ ಪ್ರದಾನ ಸಮಾರಂಭ, ಉದ್ಘಾಟನೆ : ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಡಾ. ಕೆ.ಎಸ್. ರವೀಂದ್ರನಾಥ್, ಡಾ. ಬಿ.ಜಿ. ರಾಯ್ ಚಿತ್ರ ಅನಾವರಣ : ವಿಧಾನ ಪರಿಷತ್ ಸದಸ್ಯ ಡಾ. ಡಿ. ತಿಮ್ಮಯ್ಯ, ಅಧ್ಯಕ್ಷತೆ: ಜಯದೇವ ಹೃದ್ರೋಗ ಸಂಸ್ಥೆ ವೈದ್ಯಕೀಯ ಅಧೀಕ್ಷಕ ಕೆ.ಎಸ್. ಸದಾನಂದ, ಉಪಸ್ಥಿತರು : ಡಾ. ಸಿ.ಎಸ್.ಕೆ., ಚುಟುಕು ಯುಗಾಚಾರ್ಯ ಡಾ. ಎಂ.ಜಿ.ಆರ್. ಅರಸ್, ಸರ್ಕಾರಿ ಆಯುರ್ವೇದ ಕಾಲೇಜು ಪ್ರಾಚಾರ್ಯ ಡಾ.ಕೆ.ಎಸ್. ರಾಧಾಕೃಷ್ಣ ರಾಮರಾವ್, ಟ್ರಸ್ಟ್ ಸ್ಥಾಪಕ ಅಧ್ಯಕ್ಷ ಆರ್ಯ ಅಮರ್‌ನಾಥ್ ರಾಜೇ ಅರಸ್, ಸ್ಥಳ: ಇನ್ಸ್‌ಟಿಟ್ಯೂಷನ್ ಆಫ್ ಇಂಜಿನಿಯರ್ಸ್, ಜೆಎಲ್‌ಬಿ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್, ಮೈಸೂರು ಬುಕ್ ಕ್ಲಬ್ಸ್ ಚಾರಿಟಬಲ್ ಟ್ರಸ್ಟ್‌ಗಳು** : ಮೈಸೂರು ಸಾಹಿತ್ಯ ಸಂಭ್ರಮ, ಸ್ಥಳ: ಹೋಟೆಲ್ ಸದರನ್ ಸ್ಟಾರ್, ವಿನೋಬಾ ರಸ್ತೆ, ಬೆಳಗ್ಗೆ 10.30 ರಿಂದ.

■ **ರಾಜರಾಜೇಶ್ವರಿನಗರ ನಾಗರಿಕ ವೇದಿಕೆ :** ವೇದಿಕೆ ಉದ್ಘಾಟನಾ ಸಮಾರಂಭ, ಉಪಸ್ಥಿತರು : ಶಾಸಕ ಜಿ.ಟಿ. ದೇವೇಗೌಡ, ಪತ್ರಕರ್ತೆ ಶ್ರೀಮತಿ ರಶ್ಮಿ ಕೋಟಿ, ಗೆಳತಿ ಮಹಿಳಾ ಮಂಡಳಿ ರಾಜರಾಜೇಶ್ವರಿನಗರ ಗೌರವಾಧ್ಯಕ್ಷೆ ಶ್ರೀಮತಿ ವಿಜಯಲಕ್ಷ್ಮಿ, ಅಧ್ಯಕ್ಷತೆ : ವೇದಿಕೆ ಅಧ್ಯಕ್ಷ ಎಸ್.ಕೆ. ಗೋಪಾಲಯ್ಯ, ಸ್ಥಳ: ರಾಜರಾಜೇಶ್ವರಿನಗರ, ಬೆಳಗ್ಗೆ 11ಕ್ಕೆ.

■ **ಶ್ರೀ ಸಿದ್ಧಲಿಂಗೇಶ್ವರಸ್ವಾಮಿ ಸಮಿತಿ ಟ್ರಸ್ಟ್ :** ಶ್ರೀ ಸಿದ್ಧಲಿಂಗೇಶ್ವರ ದೇವಾಲಯ ಶಿಲಾನ್ಯಾಸ ಕಾರ್ಯಕ್ರಮ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಮ್ಮುಖ : ಶ್ರೀ ತ್ರಿನೇತ್ರ ಮಹಂತ ಶಿವಯೋಗಿ ಸ್ವಾಮೀಜಿ, ಉದ್ಘಾಟನೆ : ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, ಮುಖ್ಯ ಅತಿಥಿಗಳು: ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಅರಣ್ಯ ಸಚಿವ ಈಶ್ವರ ಖಂಡ್ರೆ, ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ, ಟ್ರಸ್ಟ್ ಅಧ್ಯಕ್ಷ ಚಂದ್ರಶೇಖರ ಶೆಟ್ಟಿ, ಶಾಸಕರಾದ ಟಿ.ಎಸ್.ಶ್ರೀವತ್ಸ, ಜಿ.ಟಿ. ದೇವೇಗೌಡ, ಕೆ. ಹರೀಶ್‌ಗೌಡ, ಹೆಚ್.ಎಂ.ಗಣೇಶ್‌ಪ್ರಸಾದ್, ಸಿ.ಎನ್. ಮಂಜೇಗೌಡ, ಹೆಚ್.ವಿ. ರಾಜೀವ್, ಎಂ.ಕೆ. ಸೋಮಶೇಖರ್, ಪಿ. ಶಿವರಾಜು, ಹೆಚ್.ವಿ. ಬಸವರಾಜು, ಅಧ್ಯಕ್ಷತೆ : ಟ್ರಸ್ಟ್ ಗೌರವಾಧ್ಯಕ್ಷ ಎಸ್.ಸಿ. ಅಶೋಕ್, ಸ್ಥಳ: ಜೆ.ಪಿ.ನಗರ ಪೊಲೀಸ್ ಠಾಣೆ ಹಿಂಭಾಗ, ಬೆಳಗ್ಗೆ 11ಕ್ಕೆ.

■ **ಮೈಸೂರು ವೀರಶೈವ ಸಜ್ಜನ ಸಂಘ :** 27ನೇ ವರ್ಷದ ಗಾಳಿಪಟ ಹಾರಿಸುವ ಸ್ಪರ್ಧೆ, ಮುಖ್ಯ ಅತಿಥಿಗಳು : ವಿದುಷಿ ಕೆ.ಎಸ್. ಸುಪ್ರೀತಾ ಸಚ್ಚಿದಾನಂದ, ಅಧ್ಯಕ್ಷತೆ : ಸಂಘದ ಅಧ್ಯಕ್ಷ ಎಂ.ಟಿ. ಮಲ್ಲಿಕಾರ್ಜುನ್, ಸ್ಥಳ: ಉತ್ತನಹಳ್ಳಿ ಮಾರಮ್ಮ ದೇವಸ್ಥಾನದ ಮುಂಭಾಗದ ಮೈದಾನ, ರಿಂಗ್ ರಸ್ತೆ, ಮಧ್ಯಾಹ್ನ 2 ರಿಂದ.

■ **ಶ್ರೀ ದಿಗಂಬರ ಜೈನ ಸಮಾಜ :** 108 ಆಚಾರ್ಯ ಶ್ರೀ ಪುಣ್ಯಸಾಗರ ಮುನಿ ಮಹಾರಾಜರ ಮೈಸೂರು ಮಹಾನಗರ ಪುರ ಪ್ರವೇಶ, ಸ್ಥಳ: ಶ್ರೀ ಶಾಂತಿನಾಥ ಬಸದಿ, ಮಧ್ಯಾಹ್ನ 3ಕ್ಕೆ.

■ **ಸ್ವರಾಂಜಲಿ :** ಅಂತರರಾಷ್ಟ್ರೀಯ ಖ್ಯಾತ ಸಂಗೀತ ನಿರ್ದೇಶಕ ಮೈಸೂರು ಮೋಹನ್ ಅವರ ಸಾರಥ್ಯದಲ್ಲಿ ಮೈಸೂರು ಕಲಾವಿದರ ಸಹಾಯಾರ್ಥ ಸಂಗೀತ ರಸಸಂಜೆ ಕಾರ್ಯಕ್ರಮ, ಉಪಸ್ಥಿತರು: ಚಲನಚಿತ್ರ ನಿರ್ಮಾಪಕ ಡಿ.ಟಿ. ಪ್ರಕಾಶ್, ಸ್ಥಳ: ಮೈಸೂರು ವೈದ್ಯಕೀಯ ಕಾಲೇಜು ಅಮೃತ ಮಹೋತ್ಸವ ಭವನ, ಜೆ.ಕೆ. ಮೈದಾನ, ಸಂಜೆ 5ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ :** ಸ್ವಾಮಿ ಯುಕ್ತೇಶಾನಂದ ಅವರಿಂದ ಶ್ರೀಮಾತೆ ಶಾರದಾದೇವಿ ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.


■ **ರಂಗಾಯಣ :** ಸಿಜಿಕೆ ನೆನಪಿನ ಗ್ರೀಷ್ಮ ರಂಗೋತ್ಸವ–2025, ಜಿಪಿಐಇಆರ್ ತಂಡದಿಂದ ವಾರ್ಡ್ ನಂ. 06 ನಾಟಕ ಪ್ರದರ್ಶನ, ಮೂಲ : ಆಂಟನ್ ಚೆಕಾವ್, ಕನ್ನಡಕ್ಕೆ : ಡಿ.ಆರ್. ನಾಗರಾಜ್, ನಿರ್ದೇಶನ : ಮೈಮ್ ರಮೇಶ್, ಸ್ಥಳ: ಭೂಮಿಗೀತ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಷಹಸೀನಾ ಬೇಗಂ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಸಿನೆಮಾಯಾನ–ಕನ್ನಡ ಕಲಾತ್ಮಕ ಚಿತ್ರಗಳ ಪರಿಚಯ ಮಾಲಿಕೆ, ಪ್ರಸ್ತುತಿ: ಶ್ರೀನಿವಾಸ್ ಪ್ರಸಾದ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ನಿತಿನ್ ರಾಜಾರಾಂ ಶಾಸ್ತ್ರೀ, ಎಂ. ಕುಮಾರಸ್ವಾಮಿ ಹಾಗೂ ಜಿ. ಪುಷ್ಪಲತಾ, ವ್ಯಾಖ್ಯಾನ–ಡಾ. ಜಿ.ಆರ್. ತಿಪ್ಪೇಸ್ವಾಮಿ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ–ಮಳೆಗಾಲದಲ್ಲಿ ಕಂಡುಬರುವ ಆರೋಗ್ಯ ಸಮಸ್ಯೆಗಳು ಮತ್ತು ತೆಗೆದುಕೊಳ್ಳಬೇಕಾದ ಆರೋಗ್ಯ ಕಾಳಜಿ ಕುರಿತು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಇಲಾಖೆಯ ಮೈಸೂರು ವಿಭಾಗೀಯ ಕಚೇರಿಯ ಸಹನಿರ್ದೇಶಕರಾದ ಡಾ.ಮಲ್ಲಿಕಾ.ಬಿ ಅವರೊಂದಿಗೆ ಮಾತುಕತೆ, ಇವರೊಂದಿಗೆ ಭಾಗವಹಿಸುತ್ತಾರೆ–ಬೇದ್ರೆ ಮಂಜುನಾಥ, 10.00 ಕೇಳಿಗಿಳಿಗಳೇ–ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ–ನೇರ ಫೋನ್ ಇನ್ ಕಾರ್ಯಕ್ರಮ, 10.30 KRISH-TRISH and Balty boy ನಾವು ಭಾರತೀಯರು, ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ತೆರೆಮರೆಯ ನಾಯಕರ ಬಗ್ಗೆ ಬೆಳಕ ಚೆಲ್ಲುವ ಬಾನುಲಿ ಸರಣಿ, 10.45 ಮಕ್ಕಳ ಮಂಟಪ : ಕೇತುಪುರ ಸರ್ಕಾರಿ ಪ್ರೌಢಶಾಲಾ ಮಕ್ಕಳಿಂದ ಕಾರ್ಯಕ್ರಮ ವೈವಿಧ್ಯ

ಮಧ್ಯಾಹ್ನ: 12.00 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ–ಚಾಮಮ್ಮ ಮತ್ತು ಸಂಗಡಿಗರಿಂದ ಅಣ್ಣತಂಗಿ ಹಾಡು, 1.00 ಪ್ರಗತಿಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು–ಎ.ಜೆ. ದಿವ್ಯ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ಕನ್ನಡ ಚಲನಚಿತ್ರ ಧ್ವನಿ ವಾಹಿನಿ ಆರ್ಯಭಟ, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ–ತಾಳಮದ್ದಲೆ, ಪ್ರಸಂಗ–ಸಮುದ್ರ ಮಂಥನ, ಪ್ರಸ್ತುತಿ–ಚೊಕ್ಕಾಡಿಯ ದೇರಾಜೆ ಸೀತಾರಾಮಯ್ಯ ಸಂಸ್ಕೃತಿರಂಗದ ಕಲಾವಿದರು, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.51 ಕೃಷಿರಂಗ: ತೋರಣ ಹೂರಣ–ಸಾಪ್ತಾಹಿಕ ಸರಣಿ ಕಾರ್ಯಕ್ರಮ, ಪ್ರಸ್ತುತಿ–ಎನ್. ಕೇಶವಮೂರ್ತಿ, ಆರ್. ಲೋಕೇಶ್ವರಿ, ಡಾ. ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ– ವಾರದ ಕೃಷಿರಂಗ–ಕಿಸಾನ್‌ವಾಣಿ ಕಾರ್ಯಕ್ರಮಗಳ ಮುನ್ನೋಟ ಪ್ರಸ್ತುತಿ: ಆರ್.ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ನಾದಮೀಮಾಸೆ–ಕರ್ನಾಟಕ ಶಾಸ್ತ್ರೀಯ ಸಂಗೀತದ ರೂಪು ರೇಷೆ ಕುರಿತ ಸರಣಿ ಸಂಶೋಧನೆ ಹಾಗೂ ಸಾಹಿತ್ಯ–ಡಾ.ಸಿ.ಎ.ಶ್ರೀಧರ್, ಪ್ರಸ್ತುತಿ : ಜಿ.ಕೆ.ರವೀಂದ್ರಕುಮಾರ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು–ಬಿ.ಎಸ್. ಸ್ವಾಮಿಗೌಡ, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತ ಸಂಗೀತ ಸಭಾ, ಪ್ರಿಯಾಂಕ್ ಕೃಷ್ಣ–ಸ್ಯಾಕ್ಸೋಫೋನ್ ವಾದನ, (ಆಕಾಶವಾಣಿ ಪ್ರಯಾಗ್ ರಾಜ್ ಕೇಂದ್ರದ ಕೊಡುಗೆ)



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

46

ಜುಲೈ 6 ಭಾನುವಾರ 2025

ಸಂಪುಟ: 46 | ಸಂಚಿಕೆ: 80 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com



ಕಾಂಗ್ರೆಸ್ ವರಿಷ್ಠರ ಮಹತ್ವದ ನಿರ್ಧಾರ

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ

ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ರಚನೆ

●ಹಿಂದುಳಿದ ವರ್ಗಗಳ ಕಾಂಗ್ರೆಸ್ ತೆಕ್ಕೆಗೆ ಸೆಳೆಯುವ ಮಹಾತಂತ್ರ ●ಕರ್ನಾಟಕದಲ್ಲಿ ನಾಯಕತ್ವ ವಿವಾದಕ್ಕೆ ಸುಲಭ ಪರಿಹಾರೋಪಾಯ ಕಂಡುಕೊಳ್ಳುವ ಜಾಣ್ಮೆ ನಡೆ

ಬೆಂಗಳೂರು,ಜು.5(ಕೆಎಂಶಿ)–ರಾಷ್ಟ್ರಾದ್ಯಂತ ಹಿಂದುಳಿದ ಸಮುದಾಯಗಳನ್ನು ಪಕ್ಷಕ್ಕೆ ಸೆಳೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.



ಸಿದ್ದರಾಮಯ್ಯ ಅವರಿಗೆ ರಾಷ್ಟ್ರಮಟ್ಟದಲ್ಲಿ ಅಧಿಕಾರ ದೊರಕಿಸಿಕೊಡುವ ಮೂಲಕ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಂದಿನ ದಿನಗಳಲ್ಲಿ ರಾಜ್ಯ ನಾಯಕತ್ವ ವಹಿಸಿಕೊಳ್ಳಲು ಎಐಸಿಸಿ ದಾರಿ ಸುಗಮಗೊಳಿಸಿದೆ.

ಮುಖ್ಯಮಂತ್ರಿ ಮತ್ತು ಅವರ ಆಪ್ತ ಸಚಿವರು ಇತ್ತೀಚೆಗೆ ದೆಹಲಿಗೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ರಾಷ್ಟ್ರಮಟ್ಟದಲ್ಲಿ ಪಕ್ಷದ ಸೇವೆಗೆ ಬನ್ನಿ ಎಂದು ಆಹ್ವಾನ ನೀಡಿದ್ದರು. ಅಷ್ಟೇ ಅಲ್ಲ, ಸೆಪ್ಟೆಂಬರ್–ಅಕ್ಟೋಬರ್ ವೇಳೆಗೆ ನೀವು ದೆಹಲಿ ರಾಜಕಾರಣಕ್ಕೆ ಪ್ರವೇಶ ಮಾಡಿ ಎಂದ ಬೆನ್ನಲ್ಲೇ ಅವರಿಗೆ ಎಐಸಿಸಿ ಮಟ್ಟದ ಉನ್ನತ ಹುದ್ದೆ ದೊರಕಿಸಿಕೊಟ್ಟಿದ್ದಾರೆ.

ಎಐಸಿಸಿ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿಗೆ ಸಿದ್ದರಾಮಯ್ಯ ಅಧ್ಯಕ್ಷರಾದರೆ ಉಳಿದ 23 ಮಂದಿ ಸದಸ್ಯರಿದ್ದು, ಅದರಲ್ಲಿ ಕೇಂದ್ರದ ಮಾಜಿ ಸಚಿವರು, ನಾಲ್ವರು ಮಾಜಿ ಮುಖ್ಯಮಂತ್ರಿಗಳು, ಎಐಸಿಸಿ ಮಟ್ಟದಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದವರು ಹಾಗೂ ಉತ್ತರಭಾರತದ ವರ್ಚಸ್ವಿ ಮುಖಂಡರಿದ್ದಾರೆ.



ಬಿಹಾರ ಸೇರಿದಂತೆ ಈ ವರ್ಷ ಎದುರಾಗಲಿರುವ ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಕಾಂಗ್ರೆಸ್ ಅಧಿನಾಯಕ ರಾಹುಲ್ ಗಾಂಧಿ ಈ ಸಲಹಾ ಮಂಡಳಿ ರಚಿಸಿದ್ದಾರೆ. ಪರಿಶಿಷ್ಟ ಜಾತಿಗೆ ಸೇರಿದ ಮಲ್ಲಿಕಾರ್ಜುನ ಖರ್ಗೆ ರಾಷ್ಟ್ರಮಟ್ಟದಲ್ಲಿ ಪಕ್ಷದ ಚುಕ್ಕಾಣಿ ಹಿಡಿದಿದ್ದರೆ, ಸಿದ್ದರಾಮಯ್ಯ ವರ್ಚಸ್ಸು ಬಳಸಿಕೊಂಡು ದೇಶಾದ್ಯಂತ ಹಿಂದುಳಿದ ಸಮುದಾಯದ ಮತಗಳನ್ನು ಸೆಳೆಯಲು ರಾಹುಲ್ ಹೊಸ ಪ್ರಯತ್ನಕ್ಕೆ ಮುಂದಾಗಿದ್ದಾರೆ. ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆ ವಿಚಾರ ಮುಂಚೂಣಿಗೆ ಬಂದು ರಾಷ್ಟ್ರಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದ್ದು, ಎಐಸಿಸಿ ನಾಯಕರಿಗೆ ದೊಡ್ಡ ತಲೆನೋವಾಗಿತ್ತು.

ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಜೊತೆಯಲ್ಲಿಟ್ಟುಕೊಂಡು ಕರ್ನಾಟಕದಲ್ಲಿ ಸರ್ಕಾರ ಉಳಿಸಿಕೊಳ್ಳಲು ಒಂದೇ ಕಲ್ಲಿಗೆ ಎರಡು ಹಣ್ಣು ಉದುರಿಸಿದ್ದಾರೆ. ಎಐಸಿಸಿ ಆದೇಶದಂತೆ ಸಿದ್ದರಾಮಯ್ಯ, ಸಲಹಾ ಮಂಡಳಿ ನಾಯಕತ್ವ ವಹಿಸಿಕೊಂಡಿರುವುದಲ್ಲದೆ, ಮೊದಲ ಸಭೆಯನ್ನೂ ಕರೆದಿದ್ದಾರೆ. ಸಿದ್ದರಾಮಯ್ಯ ಅವರೇ ಸ್ವತಃ ಮಂಡಳಿ ಇತರ ಸದಸ್ಯರಿಗೆ ಖುದ್ದು ಪತ್ರ ಬರೆದು ಆಹ್ವಾನ ನೀಡಿದ್ದು, ಬೆಂಗಳೂರಿನ ಕೆಪಿಸಿಸಿ ಕಚೇರಿ ಆವರಣದಲ್ಲಿನ ಭಾರತ್ ಜೋಡೊ ಭವನದಲ್ಲಿ ಸಭೆ ನಡೆಯಲಿದೆ.

ಎಐಸಿಸಿ ರಚಿಸಿರುವ ಹಿಂದುಳಿದ ವರ್ಗಗಳ ರಾಷ್ಟ್ರೀಯ ಸಲಹಾ ಮಂಡಳಿ ನೇತೃತ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರದಾಗಿದ್ದು, ಮಂಡಳಿಯಲ್ಲಿ ಮಾಜಿ ಮುಖ್ಯಮಂತ್ರಿಗಳಾದ ಡಾ.ಎಂ.ವೀರಪ್ಪ ಮೊಯಿಲಿ, ಅಶೋಕ್ ಗೆಹ್ಲೋಟ್, ಭೂಪೇಶ್ ಬಘೇಲ್, ಸಂಚಾಲಕ ಡಾ.ಅನಿಲ್ ಜೈಹಿಂದ್, ಕಾರ್ಯದರ್ಶಿ ಜಿತೇಂದರ್ ಬಘೇಲ್ ಹಾಗೂ ಸದಸ್ಯರಾಗಿ ಬಿ.ಕೆ.ಹರಿಪ್ರಸಾದ್, ವಿ.ನಾರಾಯಣಸ್ವಾಮಿ, ಸಚಿನ್ ಪೈಲಟ್, ಗುರುದೀಪ್‌ಸಿಂಗ್ ಸಪ್ಪಲ್, ಅರುಣ್ ಯಾದವ್, ವಿಜಯ್ ನಾಮ್‌ದೇವ್ ರಾವ್ ವಡೆಟ್ಟಿವಾರ್, ವಿ.ಹನುಮಂತರಾವ್, ಅಮಿತ್ ಚಾವ್ಡಾ, ಬಿ.ಮಹೇಶ್‌ಕುಮಾರ್ ಗೌಡ್, ಪೊನ್ನಮ್ ಪ್ರಭಾಕರ್, ಎಸ್.ಜೋತಿಮಣಿ (ಸಂಸದೆ), ಶ್ರೀಕಾಂತ್ ಜೇನಾ, ಕಮಲೇಶ್ವರ್ ಪಟೇಲ್, ಅಜಯ್‌ಕುಮಾರ್ ಲಲ್ಲು, ಸುಭಾಷಿಣಿ ಯಾದವ್, ಅಡೂರು ಪ್ರಕಾಶ್ (ಸಂಸದ), ಧನೇಂದ್ರ ಸಾಹು, ಹೀನಾ ಕಾವ್ರೆ ಇರುತ್ತಾರೆ ಎಂದು ಪಕ್ಷದ ಪ್ರಕಟಣೆ ತಿಳಿಸಿದೆ.

ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಜು.8ಕ್ಕೆ ಮೈಸೂರು ಸೇರಿ

ರಾಜ್ಯದ 10 ಪಾಲಿಕೆ ನೌಕರರ ಪ್ರತಿಭಟನೆ

ಸಾಮೂಹಿಕ ರಜೆ ಹಾಕಿ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಧರಣಿ

ಮೈಸೂರು,ಜು.5–ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಮೈಸೂರು ಮಹಾನಗರಪಾಲಿಕೆ ಸೇರಿದಂತೆ ರಾಜ್ಯದ ಎಲ್ಲಾ 10 ಮಹಾ ನಗರ ಪಾಲಿಕೆಗಳ ನೌಕರರು ಜು.8ರಂದು ಸಾಮೂಹಿಕ ರಜೆ ಹಾಕಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲಿದ್ದಾರೆ. ಈ ಪ್ರತಿಭಟನೆಗೆ ಕರ್ನಾಟಕ ರಾಜ್ಯ ಮಹಾನಗರಪಾಲಿಕೆ ನೌಕರರ ಸಂಘಗಳ ಪರಿಷತ್ತು ಕರೆ ನೀಡಿದೆ. ಮೈಸೂರು ಮಹಾನಗರ ಪಾಲಿಕೆ ಮಾತ್ರವಲ್ಲದೇ ಬಿಬಿಎಂಪಿ, ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ, ತುಮಕೂರು ಮಹಾನಗರಪಾಲಿಕೆ, ಮಂಗಳೂರು ಮಹಾನಗರಪಾಲಿಕೆ, ಶಿವಮೊಗ್ಗ ಮಹಾನಗರಪಾಲಿಕೆ, ದಾವಣಗೆರೆ ಮಹಾನಗರಪಾಲಿಕೆ, ಬೆಳಗಾವಿ ಮಹಾನಗರಪಾಲಿಕೆ ಸೇರಿದಂತೆ 10 ಪಾಲಿಕೆಯ ನೌಕರರು ಪ್ರತಿಭಟನೆ ನಡೆಸಲಿದ್ದಾರೆ.



ಅಂದು ಪಾಲಿಕೆಗಳ ಎಲ್ಲಾ ನೌಕರರು ಸಾಮೂಹಿಕ ರಜೆ ಹಾಕಿ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ನಡೆಸಲು ನಿರ್ಧರಿಸಿದ್ದಾರೆ. ಮೈಸೂರು ಮಹಾನಗರಪಾಲಿಕೆಯ ಇಂಜಿನಿಯರ್‌ಗಳು, ಕಂದಾಯ ಪರಿವೀಕ್ಷಕರು, ಆರೋಗ್ಯಾಧಿಕಾರಿಗಳು ಸೇರಿದಂತೆ 600ರಿಂದ 800 ನೌಕರರು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ನಡೆಸಲಿದ್ದು, ಇವರಿಗೆ ಪೌರ ಕಾರ್ಮಿಕರ ಸಂಘದವರು ಕೂಡ ಬೆಂಬಲ ವ್ಯಕ್ತಪಡಿಸಿದ್ದು, ಪ್ರತಿಭಟನೆಯಲ್ಲಿ ನೌಕರರೊಂದಿಗೆ ಸುಮಾರು 1500 ಪೌರ ಕಾರ್ಮಿಕರು ಭಾಗವಹಿಸಲಿದ್ದಾರೆ ಎಂದು ಮೈಸೂರು ಮಹಾನಗರ ಪಾಲಿಕೆ ನೌಕರರ ಸಂಘದ ಕಾರ್ಯದರ್ಶಿ ಬಸವಣ್ಣ ಅವರು 'ಮೈಸೂರು ಮಿತ್ರ'ನಿಗೆ ತಿಳಿಸಿದ್ದಾರೆ.

ಎಲ್ಲಾ ನೌಕರರು ಸಾಮೂಹಿಕ ರಜೆ ಹಾಕಿ ಕಚೇರಿಗೆ ಗೈರು ಹಾಜರಾದರೂ, ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ನಡೆಯಲಿರುವ ಪ್ರತಿಭಟನೆಗೆ ಮೈಸೂರಿನ ಎಲ್ಲಾ ನೌಕರರು ತೆರಳುವುದಿಲ್ಲ. ಕೆಲವರು ಮಾತ್ರ ಬೆಂಗಳೂರಿನ ಪ್ರತಿಭಟನೆಯಲ್ಲಿ ಭಾಗವಹಿಸಲಿದ್ದು, ಇನ್ನುಳಿದ ನೌಕರರು ಜು.8ರಂದು ಬೆಳಗ್ಗೆ 10.30ರಿಂದ ಸಂಜೆ 5 ಗಂಟೆವರೆಗೆ ನಗರಪಾಲಿಕೆಯ ಕೇಂದ್ರ ಕಚೇರಿ ಮುಂದೆ ಪ್ರತಿಭಟನೆ ನಡೆಸಲಿದ್ದಾರೆ ಎಂದರು. ಮಹಾನಗರಪಾಲಿಕೆ ನೌಕರರ ಪ್ರತಿಭಟನೆಯಿಂದಾಗಿ ಅಂದು ಪಾಲಿಕೆ ಎಲ್ಲಾ ಕೆಲಸ ಕಾರ್ಯಗಳು ಸ್ಥಗಿತಗೊಳ್ಳುವ ಸಾಧ್ಯತೆ ಇದೆ.

ಬೇಡಿಕೆಗಳು

- ಏಳನೇ ವೇತನ ಆಯೋಗದ ಸೌಲಭ್ಯವನ್ನು ರಾಜ್ಯ ಸರ್ಕಾರಿ ನೌಕರರಿಗೆ ವಿಸ್ತರಿಸಿರುವಂತೆ ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರಿಗೆ ಸರ್ಕಾರದ ಆರ್ಥಿಕ ಇಲಾಖೆಯಿಂದಲೇ ಅನುದಾನ ಬಿಡುಗಡೆ ಮಾಡುವ ಮೂಲಕ ಸೌಲಭ್ಯ ನೀಡಬೇಕು.
- ಕರ್ನಾಟಕ ರಾಜ್ಯ ಮಹಾನಗರಪಾಲಿಕೆ ವೃಂದ ಮತ್ತು ನೇಮಕಾತಿ ನಿಯಮಾವಳಿಗಳ ತಿದ್ದುಪಡಿ ಮಾಡಿ ಕರಡು ಅಧಿಸೂಚನೆ ಪ್ರಕಟಿಸಬೇಕು.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿ ಮಾಡಿರುವ ಕೆಜಿಐಡಿ, ಜಿಪಿಎಫ್ ಸೌಲಭ್ಯವನ್ನು ಮಹಾನಗರ ಪಾಲಿಕೆ ಅಧಿಕಾರಿ, ನೌಕರರಿಗೂ ಜಾರಿಗೊಳಿಸಬೇಕು.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಜಾರಿಗೊಳಿಸಿರುವ ಆರೋಗ್ಯ ಸೌಲಭ್ಯದ ಜ್ಯೋತಿ/ಆರೋಗ್ಯ ಸಂಜೀವಿನಿಯನ್ನು ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರಿಗೂ ಜಾರಿಗೊಳಿಸಬೇಕು.
- ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಪ್ರತಿವರ್ಷ ಆಯೋಜಿಸುವ ಕ್ರೀಡೆಯಂತೆ ಮಹಾನಗರ ಪಾಲಿಕೆ ಅಧಿಕಾರಿ ಹಾಗೂ ನೌಕರರಿಗೂ ಆಯೋಜಿಸಬೇಕು.
- ಮಹಾನಗರ ಪಾಲಿಕೆ ಅಧಿಕಾರಿಗಳು ಹಾಗೂ ನೌಕರರು ಹಲವಾರು ವರ್ಷಗಳಿಂದ ವಿವಿಧ ವೃಂದದ ಹುದ್ದೆಗಳಲ್ಲಿ ಮುಂಬಡ್ತಿ ಪಡೆಯಲು ವಂಚಿತರಾಗಿರುವುದರಿಂದ ಕೂಡಲೇ ವೃಂದವಾರು ಮುಂಬಡ್ತಿ ನೀಡಬೇಕು.

ಎಲ್ಲಾ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಹಲವಾರು ಮನವಿ ಪತ್ರಗಳನ್ನು ನಗರಾಭಿವೃದ್ಧಿ ಸಚಿವರು ಹಾಗೂ ನಗರಾಭಿವೃದ್ಧಿ ಇಲಾಖೆ ಕಾರ್ಯದರ್ಶಿಗಳಿಗೆ ನೀಡಿದರೂ ಸಕಾರಾತ್ಮಕವಾಗಿ ಸ್ಪಂದಿಸದ ಕಾರಣ ಅನ್ಯ ಮಾರ್ಗವಿಲ್ಲದೇ, ರಾಜ್ಯದ ಎಲ್ಲಾ ಮಹಾನಗರ ಪಾಲಿಕೆಗಳ ನೌಕರರು ಸಾಮೂಹಿಕ ರಜೆ ಹಾಕಿ ಪ್ರತಿಭಟನೆ ನಡೆಸುತ್ತಿರುವುದಾಗಿ ಸಂಘದ ಪ್ರಕಟಣೆ ತಿಳಿಸಿದೆ.

ದ್ವಿಭಾಷಾ ಸೂತ್ರ ಜಾರಿಗೆ ಯತ್ನ

ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಮತ



ಬರಗೂರು ರಾಮಚಂದ್ರಪ್ಪರ 'ಕುವೆಂಪು ವಿಚಾರ ಕ್ರಾಂತಿ' ಕೃತಿ ಬಿಡುಗಡೆ ಸಂದರ್ಭ.

ಬೆಂಗಳೂರು: ರಾಜ್ಯಕ್ಕೆ ದ್ವಿಭಾಷಾ ಸೂತ್ರ ಇರಬೇಕು ಎಂಬುದು ನನ್ನ ವೈಯಕ್ತಿಕ ಅಭಿಪ್ರಾಯ. ಇದನ್ನೇ ಸರ್ಕಾರದ ಅಭಿಪ್ರಾಯವನ್ನಾಗಿ ಮಾಡಲು ಪ್ರಯತ್ನಿಸುತ್ತೇನೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು.

ಜನ ಪ್ರಕಾಶನ ಆಯೋಜಿಸಿದ್ದ ಬರಗೂರು ರಾಮಚಂದ್ರಪ್ಪ ಸಂಪಾದಕತ್ವದ 'ಕುವೆಂಪು ವಿಚಾರ ಕ್ರಾಂತಿ' ಕೃತಿ ಜನಾರ್ಪಣೆ, 'ಜನರ ಕಡೆಗೆ ವೈಚಾರಿಕ ನಡಿಗೆ' ಮೂಲಕ ಕುವೆಂಪು ವಿಚಾರಾಂದೋಲನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು. ಸಾಹಿತಿ ಹಂ.ಪ. ನಾಗರಾಜಯ್ಯ ಅವರು ▶ 6ನೇ ಪುಟಕ್ಕೆ

ಮೇಕೆದಾಟು ಯೋಜನೆಗೆ ಐದೇ ನಿಮಿಷದಲ್ಲಿ ಒಪ್ಪಿಗೆ ಕೊಡಿಸುತ್ತೇನೆ!

ಕಾಂಗ್ರೆಸ್‌ನವರಿಗೆ ತಮಿಳುನಾಡಿನ ಮೈತ್ರಿ ಸರ್ಕಾರ ಒಪ್ಪಿಸುವ ಶಕ್ತಿ ಇದೆಯೆ?: ಹೆಚ್.ಡಿ.ಕುಮಾರಸ್ವಾಮಿ

ಮೈಸೂರು, ಜು.5(ಆರ್‌ಕೆ)–ನಾನು ಐದೇ ನಿಮಿಷದಲ್ಲಿ ಮೇಕೆದಾಟು ಯೋಜನೆಗೆ ಪ್ರಧಾನ ಮಂತ್ರಿಗಳ ಒಪ್ಪಿಗೆ ಕೊಡಿಸುತ್ತೇನೆ. ಕಾಂಗ್ರೆಸ್‌ನವರಿಗೆ ತಮಿಳುನಾಡಿನ ತಮ್ಮ ಮೈತ್ರಿ ಸರ್ಕಾರ ಒಪ್ಪಿಸುವ ಶಕ್ತಿ ಇದೆಯೇ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಮೈಸೂರಲ್ಲಿ ಸುದ್ದಿಗಾರರೊಂದಿಗೆ ಮಾತನಾಡುತ್ತಿದ್ದ ಅವರು, ಕಾಂಗ್ರೆಸ್ ಸರ್ಕಾರಕ್ಕೆ ಶಕ್ತಿ ಇದ್ದರೆ ತಮಿಳುನಾಡಿನ ತಮ್ಮ ಮೈತ್ರಿ ಸರ್ಕಾರವನ್ನು ಮೇಕೆದಾಟು ಯೋಜನೆಗೆ ಒಪ್ಪಿಸಲಿ. ಈ ಹಿಂದಿನ ಹೇಳಿಕೆಗೆ ನಾನು ಈಗಲೂ ಬದ್ಧನಾಗಿದ್ದೇನೆ. ಕಾಂಗ್ರೆಸ್‌ನವರಿಗೆ ತಮಿಳುನಾಡು ಸರ್ಕಾರವನ್ನು ಒಪ್ಪಿಸುವ ಶಕ್ತಿ ಇಲ್ಲ.



ಹೆಚ್.ಡಿ.ಕುಮಾರಸ್ವಾಮಿ

ಧಿಕ್ಕರಿಸುವ ಧೈರ್ಯವೂ ಇಲ್ಲ ಎಂದರು.

ತಮಿಳುನಾಡು ಸರ್ಕಾರವನ್ನು ಒಪ್ಪಿಸದೆ ಮೇಕೆದಾಟು ಯೋಜನೆ ಕಚೇರಿ ತೆರೆದರೆ ಏನು ಪ್ರಯೋಜನ. ಈ ಯೋಜನೆ ಮಾಡುತ್ತೇವೆ ಎಂದವರು ಕಾಂಗ್ರೆಸ್‌ನವರೇ, ನಾನಲ್ಲ. ಎರಡೂವರೆ ವರ್ಷದಿಂದ ಸುಮ್ಮನೆ ಸಮಯ ಹಾಳು ಮಾಡುತ್ತಿದ್ದಾರೆ. ಈಗ ಸುಮ್ಮನೆ ನನ್ನ ಮೇಲೆ ಜವಾಬ್ದಾರಿ ಹೊರಿಸಿದರೆ ಏನು ಮಾಡಲು ಸಾಧ್ಯ ಎಂದು ಪ್ರಶ್ನೆಯೊಂದಕ್ಕೆ ಹೆಚ್.ಡಿ.ಕುಮಾರಸ್ವಾಮಿ ಪ್ರತಿಕ್ರಿಯಿಸಿದರು.

ನನ್ನನ್ನು ಕಂಡರೆ ಭಯ ಇರುವುದರಿಂದ ಕಾಂಗ್ರೆಸ್‌ನವರು ನನ್ನ ಹೆಸರನ್ನು ಜಪಿಸುತ್ತಿರುತ್ತಾರೆ. ಬಿಜೆಪಿ–ಜೆಡಿಎಸ್ ಮೈತ್ರಿಯಾದ ಮೇಲಂತೂ ಅವರಿಗೆ ನಿದ್ರೆ ಬರುತ್ತಿಲ್ಲ. ಆದ್ದರಿಂದ ಪದೇ ಪದೆ ನನ್ನನ್ನ ಟಾರ್ಗೆಟ್ ಮಾಡುತ್ತಿದ್ದಾರೆ. ಮುಂದಿನದ್ದೂ ನಮ್ಮದೇ ಸರ್ಕಾರ ಎನ್ನುತ್ತಿರುವ ಕಾಂಗ್ರೆಸ್‌ನವರು ಇನ್ನು 20 ವರ್ಷ ಇದ್ದರೂ ಮೊದಲು ಹೇಳಿದ ಕೆಲಸ ಮಾಡಲಿ ಎಂದು ಟಾಂಗ್ ಕೊಟ್ಟರು. ಮುಂದೆ ಯಾವ ಸರ್ಕಾರ ಬರಬೇಕೆಂಬುದನ್ನು ಜನ ತೀರ್ಮಾನ ಮಾಡುತ್ತಾರೆ. ಕಾಂಗ್ರೆಸ್‌ನಲ್ಲಿ ಸಿಎಂ ಕುರ್ಚಿಗಾಗಿ ಗಲಾಟೆಯಲ್ಲಿ ಮುಳುಗಿರುವಾಗ ಅವರನ್ನು ಜನ ಹೇಗೆ ಒಪ್ಪುತ್ತಾರೆ? ▶ 6ನೇ ಪುಟಕ್ಕೆ

ಮೈಸೂರು ಸಾಹಿತ್ಯ ಸಂಭ್ರಮ ಕಲರವ

- **ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರಿಂದ ಚಾಲನೆ**
- **ನೂರಾರು ಪುಸ್ತಕ ಪ್ರೇಮಿಗಳ ಜಾತ್ರೆ**
- **ಆಧುನಿಕ ಮನೋರಂಜನೆಗೆ ಸವಾಲೊಡ್ಡಿದ ಪುಸ್ತಕ ಪ್ರಪಂಚ**
- **'ಹಾಟ್‌ಕೇಕ್'ನಂತೆ ಪುಸ್ತಕಗಳು ಮಾರಾಟ**
- **ಹಲವು ಗೋಷ್ಠಿ, ನಾನಾ ವಿಚಾರ ಚರ್ಚೆ**



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಆರಂಭವಾದ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಎರಡು ದಿನಗಳ ಕಾರ್ಯಕ್ರಮವನ್ನು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಉದ್ಘಾಟಿಸಿದರು.

ಮೈಸೂರು,ಜು.5(ಬಿಎಲ್‌ಯು)–ಕಲೆ, ಸಂಸ್ಕೃತಿಯ ಕಲರವ ಮೇಳೈಸುವ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಎರಡು ದಿನಗಳ ಕಾರ್ಯಕ್ರಮ ಮೈಸೂರಿನಲ್ಲಿ ಶನಿವಾರ ಆರಂಭವಾಯಿತು.

ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಮೈಸೂರು ರಾಜವಂಶಸ್ಥರಾದ ಪ್ರಮೋದಾದೇವಿ ಒಡೆಯರ್ ಅವರು ಮೈಸೂರು ಸಾಹಿತ್ಯ ಸಂಭ್ರಮಕ್ಕೆ ಚಾಲನೆ ನೀಡಿದರು. ಈ ವೇಳೆ ಮಾತನಾಡಿದ ಅವರು, ಪ್ರತಿಯೊಬ್ಬರು ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು. ಪುಸ್ತಕ ಓದುವುದರಿಂದ ಸೃಜನಶೀಲತೆ, ತೀಕ್ಷ್ಣತೆ, ಬುದ್ಧಿ ಶಕ್ತಿ ಹೆಚ್ಚಾಗುತ್ತದೆ ಎಂದು ಸಲಹೆ ನೀಡಿದರು.

ಪ್ರಮುಖವಾಗಿ ಯುವಕರು ಪುಸ್ತಕ ಓದುವುದನ್ನು ರೂಢಿಸಿಕೊಳ್ಳಬೇಕು. ಪುಸ್ತಕದಲ್ಲಿರುವ ವಿಚಾರ ವಸ್ತುಗಳು ಜ್ಞಾನ ವೃದ್ಧಿಗೆ ಕಾರಣವಾಗುತ್ತದೆ ಎಂದರು.

ಈಗ ನಡೆಯುತ್ತಿರುವ ಮೈಸೂರು ಸಾಹಿತ್ಯ ಸಂಭ್ರಮ 9ನೇ ಆವೃತ್ತಿಯಾಗಿದ್ದು, ಪ್ರತಿ ವರ್ಷ ನಾನು ಈ ಕಾರ್ಯಕ್ರಮದಲ್ಲಿ ಭಾಗಿಯಾಗುತ್ತಿದ್ದೇನೆ. ಈ ಮೂಲಕ ಇಲ್ಲಿ ಶಾಶ್ವತ ಸ್ಥಾನ ಪಡೆದುಕೊಂಡಿದ್ದೇನೆ. ಮೈಸೂರು ಸಾಹಿತ್ಯ ▶ 6ನೇ ಪುಟಕ್ಕೆ

ಬದುಕಿನಲ್ಲಿ ಸಮಸ್ಯೆಗಳು ಎದುರಾದಾಗ ವಿಚಲಿತರಾಗಬಾರದು

ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್ ಕಿವಿಮಾತು

●ಸಮಸ್ಯೆಗೆ ಪರಿಹಾರ ರೂಪಿಸುವುದು ನನ್ನ ಜವಾಬ್ದಾರಿಯಲ್ಲ ●ಬಡತನ ಇದೆಯೆಂದು ನಿತ್ಯ ಕಣ್ಣೀರಿಡಲಾದಿತೇ ಹೇಳಿ? ●ಬಂಡಾಯ ಸಾಹಿತ್ಯ ನನ್ನ ಮೇಲೆ ಪರಿಣಾಮ ಬೀರಿತು ●ನನ್ನ ಹೊಸ ಪ್ರಯೋಗವನ್ನು ಓದುಗರು ಅಪ್ಪಿ, ಒಪ್ಪಬೇಕು



ಬಾನು ಮುಷ್ತಾಕ್

ಮೈಸೂರು, ಜು.5(ಬಿಎಲ್‌ಯು)– ಬದುಕಿನಲ್ಲಿ ಸಮಸ್ಯೆಗಳು ಎದುರಾದಾಗ ಅದರಿಂದ ವಿಚಲಿತರಾಗಬಾರದು. ಸದಾ ನಗು ಹಾಗೂ ಸಂತೋಷದ ಕ್ಷಣಗಳನ್ನು ಅನುಭವಿಸುತ್ತಾ ಬದುಕಿನಲ್ಲಿ ಎದುರಾಗುವ ಸಮಸ್ಯೆಗಳನ್ನು ಸಮರ್ಥವಾಗಿ ಎದುರಿಸಬೇಕು ಎಂದು ಬೂಕರ್ ಪ್ರಶಸ್ತಿ ಪುರಸ್ಕೃತ ಹಿರಿಯ ಸಾಹಿತಿ ಬಾನು ಮುಷ್ತಾಕ್ ಸಲಹೆ ನೀಡಿದರು. ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಕಾರ್ಯಕ್ರಮದಲ್ಲಿ ಏರ್ಪಡಿಸಿದ್ದ ಸಂವಾದದಲ್ಲಿ ಮಾತನಾಡಿದ ಅವರು, ಬದುಕಿನ ಹೋರಾಟದಲ್ಲಿ ನಗು, ಸಂತೋಷ, ವ್ಯಂಗ್ಯ ಎಲ್ಲವೂ ಇರುತ್ತದೆ. ಆದರೆ ಇದನ್ನು ಸಮರ್ಥವಾಗಿ ನಿರ್ವಹಿಸಿಕೊಂಡು ಬದುಕಿನ ಹಾದಿಯಲ್ಲಿ ಯಶಸ್ವಿಯಾಗಿ ಸಾಗಬೇಕು ಎಂದು ಉತ್ತೇಜಿಸಿದರು.

ಬಡವರು ಹಣವಿಲ್ಲವೆಂದು ದಿನನಿತ್ಯ ಕಣ್ಣೀರಿಡುತ್ತಾ ಕೂರಲು ಸಾಧ್ಯವಿಲ್ಲ. ಮನುಷ್ಯ ಎಂದ ಮೇಲೆ ಒಂದಲ್ಲ ಒಂದು ನೋವು, ಯಾತನೆ ಇದ್ದೇ ಇರುತ್ತದೆ. ಯಾವುದಕ್ಕೂ ಹಿಂಜರಿಯದೆ ಜೀವನದಲ್ಲಿನ ಸವಾಲುಗಳನ್ನು ಸಮರ್ಥವಾಗಿ ಎದುರಿಸಿ ನಾವು ಸೇರಬೇಕಾದ ಗುರಿ ತಲುಪಬೇಕು ಎಂದು ಬಾನು ಮುಷ್ತಾಕ್ ಸಲಹೆಯಿತ್ತರು.

ಒಬ್ಬ ಲೇಖಕಿಯಾಗಿ ನಾನು ಸಮಾಜದ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ರೂಪಿಸಲು ಸಾಧ್ಯವಿಲ್ಲ. ಇದು ನನ್ನ ಜವಾಬ್ದಾರಿಯೂ ಅಲ್ಲ. ಆದರೆ ಬರಹದ ಮೂಲಕ ಸಂಬಂಧಿಸಿದವರಿಂದ ಪರಿಹಾರ ▶ 6ನೇ ಪುಟಕ್ಕೆ

'ದಿ ಹಿಡನ್ ಲೈಫ್ ಆಫ್ ಎ ಯೋಗಿ'

ಡಾ.ಕೆ.ಬಿ.ಗಣಪತಿಯವರ ಪುಸ್ತಕ ಬಿಡುಗಡೆ



ಡಾ.ಕೆ.ಬಿ.ಗಣಪತಿ



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಶನಿವಾರ ಆರಂಭವಾದ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ.ಕೆ.ಬಿ.ಗಣಪತಿ ಅವರ "ದಿ ಹಿಡನ್ ಲೈಫ್ ಆಫ್ ಎ ಯೋಗಿ" ಕೃತಿಯನ್ನು ಪ್ರಮೋದಾದೇವಿ ಒಡೆಯರ್ ಶನಿವಾರ ಲೋಕಾರ್ಪಣೆ ಮಾಡಿದರು. ಚಿತ್ರದಲ್ಲಿ (ಎಡದಿಂದ) ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಉಪಾಧ್ಯಕ್ಷ ಸ್ಯಾಮ್ ಚೆರಿಯನ್, ಡಿಆರ್‌ಡಿಓ ನಿವೃತ್ತ ವಿಜ್ಞಾನಿ ಡಾ.ಪ್ರಹ್ಲಾದ ರಾಮರಾವ್, ಲೇಖಕಿ ದೀಪಾ ಬಸ್ತಿ, ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್, 'ಮೈಸೂರು ಮಿತ್ರ' ಹಾಗೂ 'ಸ್ಟಾರ್ ಆಫ್ ಮೈಸೂರ್' ವ್ಯವಸ್ಥಾಪಕ ಸಂಪಾದಕ ಕೆ.ಜಿ.ವಿಕ್ರಂ ಮುತ್ತಣ್ಣ, ಟ್ರಸ್ಟ್‌ನ ದೀಪಿಕಾ ಮಯ್ಯ, ಟ್ರಸ್ಟ್ ಅಧ್ಯಕ್ಷೆ ಶುಭಾ ಸಂಜಯ್ ಅರಸ್ ಅವರನ್ನು ಕಾಣಬಹುದು.

ಮೈಸೂರು, ಜು.5(ಬಿಎಲ್‌ಯು)– ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಆರಂಭವಾದ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಕಾರ್ಯಕ್ರಮದಲ್ಲಿ 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ಸಂಸ್ಥಾಪಕ ಸಂಪಾದಕರಾದ ಡಾ. ಕೆ.ಬಿ.ಗಣಪತಿ (ಕೆಬಿಜಿ) ಅವರ **"ದಿ ಹಿಡನ್ ಲೈಫ್ ಆಫ್ ಎ ಯೋಗಿ"** ಕೃತಿಯನ್ನು ಮೈಸೂರು ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಲೋಕಾರ್ಪಣೆ ಮಾಡಿದರು.

ನಗರದ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿಶಿಷ್ಟ ರೀತಿಯಲ್ಲಿ ಕಾರ್ಡ್‌ಬೋರ್ಡ್‌ನಲ್ಲಿ ಮಾಡಿರುವ ಪುಸ್ತಕದ ಮೊದಲ ಪುಟವನ್ನು ತಿರುವಿ ಹಾಕುವ ಮೂಲಕ ಪ್ರಮೋದಾದೇವಿ ಒಡೆಯರ್, ಪುಸ್ತಕ ಬಿಡುಗಡೆ ಮಾಡಿದರು.

ಈ ಸಂದರ್ಭದಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತರಾದ ಬಾನು ಮುಷ್ತಾಕ್, ಹಾರ್ಟ್ ಲ್ಯಾಂಪ್ ಪುಸ್ತಕ ಅನುವಾದಕಿ ದೀಪಾ ಬಸ್ತಿ, ನಿವೃತ್ತ ವಿಜ್ಞಾನಿ ಪ್ರಹ್ಲಾದ ರಾಮರಾವ್, 'ಮೈಸೂರು ಮಿತ್ರ' ಮತ್ತು 'ಸ್ಟಾರ್ ಆಫ್ ಮೈಸೂರ್' ಪತ್ರಿಕೆಗಳ ವ್ಯವಸ್ಥಾಪಕ ಸಂಪಾದಕ ಕೆ.ಜಿ.ವಿಕ್ರಂ ಮುತ್ತಣ್ಣ, ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಅಧ್ಯಕ್ಷೆ ಶುಭಾ ಅರಸ್, ಉಪಾಧ್ಯಕ್ಷ ಸ್ಯಾಮ್ ಚೆರಿಯನ್, ಕಾರ್ಯದರ್ಶಿ ತಂಗಂ ಪನಕಲ್ ಅವರಿಗೆ ಪ್ರಮೋದಾದೇವಿ ಒಡೆಯರ್ ಅವರು ಕೆಬಿಜಿ ಅವರ ಪುಸ್ತಕದ ಪ್ರತಿ ನೀಡಿದರು.

ನಕ್ಕರೆ ಅದೇ ಸ್ವರ್ಗ

ರೋಗಿ : ಡಾಕ್ಟರ್ ಒಂದು ಇಂಜೆಕ್ಷನ್ ಕೊಟ್ಟು ಎರಡು ಡಜನ್ ಮಾತ್ರೆ ಕೊಟ್ರಲ್ಲ ಯಾಕೆ?

ಡಾಕ್ಟರ್ : ಇಂಜೆಕ್ಷನ್ ನೀವು ಬದ್ಕೋಕೆ, ಮಾತ್ರೆ ಕೊಟ್ಟಿದ್ದು ನಾನು ಬದ್ಕೋಕೆ!

ಮೈಸೂರು ಮಿತ್ರ

ಭಾನುವಾರ, 6 ಜುಲೈ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ.........

ಕೆಲವು ಜನರು ನಿಮ್ಮ ಜೀವನದಿಂದ ಬಿಟ್ಟು ಹೊರಟಿದ್ದಾರೆ. ಅಂದರೆ ಅದು ನಿಮ್ಮ ಕಥೆಯ ಅಂತ್ಯವಲ್ಲ. ಅದು ನಿಮ್ಮ ಕಥೆಯಲ್ಲಿ ಅವರ ಭಾಗದ ಅಂತ್ಯವಾಗಿದೆ ಎಂದರ್ಥ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದೇಹಕ್ಕೆ ಮುಪ್ಪಾದರೇನಾಯ್ತು, ಅಧ್ಯಯನಕ್ಕೆ ಮುಪ್ಪಿದೆಯೇ?

ನಿಮ್ಮ ಪತ್ರಗಳು

ಇಲವಾಲ ಗ್ರಾಮ ಪಂಚಾಯಿತಿ ಕಾರ್ಯ ಮೆಚ್ಚುವಂತಹದ್ದು

ಮಾನ್ಯರೆ,

ಸರ್ಕಾರಿ ಕೆಲಸ ದೇವರ ಕೆಲಸವೆಂದು ತಿಳಿದು ಕೆಲಸ ಮಾಡುವ ಕಚೇರಿಗಳು ಇಂದಿನ ವ್ಯವಸ್ಥೆಯಲ್ಲಿ ಇಲ್ಲವೇ ಇಲ್ಲ ಎಂಬುದು ಸಾರ್ವಜನಿಕರ ಆರೋಪ. ಇದಕ್ಕೆ ಅಪವಾದ ಎನ್ನುವಂತೆ ನನ್ನ ಸ್ವಂತ ಅನುಭವಕ್ಕೆ ಬಂದ ಇಲವಾಲ ಗ್ರಾಮ ಪಂಚಾಯಿತಿಯ ಕಾರ್ಯವೈಖರಿಯನ್ನು ಸಾರ್ವಜನಿಕರಿಗೆ ಹಾಗೂ ವಿಶೇಷವಾಗಿ ಇತರೆ ಸರ್ಕಾರಿ ಕಚೇರಿಗಳ ಉದ್ಯೋಗಿಗಳಿಗೆ ತಿಳಿಸಲೇಬೇಕು. ನನ್ನದೇ ನಿವೇಶನದ ಇ-ಖಾತೆಗಾಗಿ ಅರ್ಜಿಯನ್ನು ಸಲ್ಲಿಸಲಾಗಿ, ನಿಗದಿತ ಸಮಯಕ್ಕೆ ಸರಿಯಾಗಿ ಎಲ್ಲಾ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿ ಇ-ಖಾತೆಯನ್ನು ನೀಡಿದರು. ಇಲ್ಲಿ ಖಾತೆ ನೀಡಿದ್ದು ಮಾತ್ರವಲ್ಲ ಕಚೇರಿಗೆ ಭೇಟಿ ನೀಡಿದಾಗ ಡಿ-ಗ್ರೂಪ್ ನೌಕರರಿಂದ ಹಿಡಿದು ಕಚೇರಿಯ ಎಲ್ಲಾ ಸಿಬ್ಬಂದಿಗಳು ಆತ್ಮೀಯವಾಗಿ ಬರಮಾಡಿಕೊಂಡು, ಕೇಳುವ ಸಂಶಯಗಳಿಗೆ ಪ್ರೀತಿಯಿಂದ ಉತ್ತರಿಸಿ ಕೆಲಸ ಮಾಡಿಕೊಟ್ಟಿದ್ದು, ನಾನೊಬ್ಬ ನಿವೃತ್ತ ಸರ್ಕಾರಿ ಅಧಿಕಾರಿಯಾಗಿದ್ದರೂ ನನಗೇ ಆಶ್ಚರ್ಯವಾಯಿತು. ಅಲ್ಲಿ ನನಗೆ ಯಾರೊಬ್ಬರೂ ಪರಿಚಯ ಇಲ್ಲವಾದರೂ ತ್ವರಿತವಾಗಿ ಲಂಚದ ಮಾತಿಲ್ಲದೆ ಕೆಲಸ ಮಾಡಿಕೊಟ್ಟರು. ಕಚೇರಿಗಳು ಹೀಗೂ ಇವೆಯಾ ಎನ್ನುವಂತಾಯಿತು. ಖಾತೆಗಾಗಿ ಪಟ್ಟಣ ಪಂಚಾಯಿತಿ, ನಗರಸಭೆ ಹಾಗೂ ಪಾಲಿಕೆಗಳಲ್ಲಿ ರೂ.ಹತ್ತು ಸಾವಿರ ಅಥವಾ ಅದಕ್ಕಿಂತಲೂ ಹೆಚ್ಚು ಹಣವನ್ನು ಪಡೆಯುತ್ತಾರೆ ಎನ್ನುವುದು ಸಾರ್ವಜನಿಕರ ಕೂಗು. ಜೊತೆಗೆ ಕಚೇರಿಗೆ ಭೇಟಿ ನೀಡಿದಾಗ ಹಿರಿಯ ನಾಗರಿಕರನ್ನೂ ಸಹ ಕೂರಿಸದೆ ಉಡಾಫೆ ಉತ್ತರಗಳನ್ನು ನೀಡುತ್ತಾರೆಂದು ಹಾಗೂ ಬ್ರೋಕರ್‌ಗಳು ಮಾಡಿಸಿಕೊಡುವುದಾಗಿ ಸುತ್ತುವರಿಯುತ್ತಾರೆಂದು ಸ್ನೇಹಿತರು ನೊಂದುಕೊಂಡಿರುವುದು ಇದೆ. ಸರ್ಕಾರಿ ಶುಲ್ಕವನ್ನು ಹೊರತುಪಡಿಸಿ ಲಂಚ ಕೇಳದೆ ಅಥವಾ ಅದಕ್ಕಾಗಿ ಸತಾಯಿಸದೆ ಇ-ಖಾತೆಯನ್ನು ಕರ್ತವ್ಯವೆಂದು ಮಾಡಿಕೊಡುತ್ತಿರುವ ಇಲವಾಲ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಧನ್ಯವಾದಗಳು. ವರ್ಷದ ಹಿಂದೆ ನಿವೇಶನವನ್ನು ಕೊಂಡಾಗಲೂ ಖಾತೆ ಬದಲಾವಣೆಯನ್ನು ಇದೇ ರೀತಿಯಾಗಿ ಮಾಡಿಕೊಟ್ಟಿದ್ದರು. ಈ ಕಚೇರಿಯು ನಮ್ಮ ಮೈಸೂರು ಜಿಲ್ಲೆಗೆ ಒಂದು ಮಾದರಿ ಕಚೇರಿ ಎಂದರೆ ಉತ್ಪ್ರೇಕ್ಷೆ ಆಗದು!

-ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಚಾಮುಂಡಿಬೆಟ್ಟದಲ್ಲಿ ವಸ್ತ್ರ ಸಂಹಿತೆ ಜಾರಿಯಾಗಲಿ

ಮಾನ್ಯರೆ,

ಧಾರ್ಮಿಕ ಕ್ಷೇತ್ರಗಳಿಗೆ ಬರುವ ಜನರು ಧಾರ್ಮಿಕ ನಂಬಿಕೆ, ಭಾವನೆಯಿಂದಲೇ ಬರುವುದು ನಮ್ಮ ಸಂಸ್ಕೃತಿಯ ಭಾಗವಾಗಿದೆ. ನಾನು ಯಾವಾಗಲೂ ಧಾರ್ಮಿಕ ಕ್ಷೇತ್ರದಲ್ಲಿ ವಸ್ತ್ರ ಸಂಹಿತೆ ಪರವಾಗಿದ್ದೇನೆ. ನಮ್ಮ ನಾಡದೇವತೆ ಚಾಮುಂಡೇಶ್ವರಿ ದೇವಿಯ ದರ್ಶನಕ್ಕೆ ಬರುವ ಭಕ್ತರಿಗೆ ವಸ್ತ್ರಸಂಹಿತೆ ಜಾರಿಯಾಗಬೇಕು ಹಾಗೂ ಇದರಿಂದ ಭಕ್ತರಿಗೂ ಸಮಸ್ಯೆಯಾಗಬಾರದು ಎಂದು ಸಂಸದ ಯದುವೀರ್ ಚಾಮರಾಜ ಒಡೆಯರ್ ಹೇಳಿರುವುದು ತುಂಬಾ ಶ್ಲಾಘನೀಯ.

ಚಾಮುಂಡೇಶ್ವರಿ ದೇವಿಯ ವಿಶೇಷ ದರ್ಶನಕ್ಕೆ 2000 ರೂ. ನಿಗದಿಪಡಿಸಿರುವ ಬಗ್ಗೆ ಸಾರ್ವಜನಿಕರಿಂದ ದೂರು ಬಂದ ಹಿನ್ನೆಲೆಯಲ್ಲಿ ಕಡಿಮೆ ದರ ನಿಗದಿ ಮಾಡುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿರುವುದಾಗಿ ಹೇಳಿರುವುದು ಸ್ವಾಗತಾರ್ಹ. ತಿರುಪತಿ ಮಾದರಿಯಲ್ಲಿ ನಮ್ಮ ಚಾಮುಂಡಿಬೆಟ್ಟದಲ್ಲಿಯೂ ಮೊಬೈಲ್ ಫೋನ್ ಹಾಗೂ ಇತರೆ ವಿದ್ಯುನ್ಮಾನ ಸಾಧನಗಳನ್ನು ನಿಷೇಧ ಮಾಡಬೇಕು. ಇತ್ತೀಚೆಗೆ ಕೆಲವರು ಗೊತ್ತಿದ್ದೋ, ಗೊತ್ತಿಲ್ಲದೆಯೋ ದೇವಿಯ ಮೂಲ ವಿಗ್ರಹದ ವಿಡಿಯೋ ಮಾಡುತ್ತಿರುವುದರಿಂದ ಧಾರ್ಮಿಕ ಕ್ಷೇತ್ರದ ಪಾವಿತ್ರ್ಯತೆಗೆ ಧಕ್ಕೆ ಬರುವ ಸಾಧ್ಯತೆಯಿದೆ. ಆದ್ದರಿಂದ ಈ ನಿಟ್ಟಿನಲ್ಲಿ ಅತಿ ಶೀಘ್ರದಲ್ಲೇ ನಿಷೇಧದ ಬಗ್ಗೆ ನಿರ್ಧಾರ ಹೊರಬೀಳಲಿದೆ ಎಂದು ತಿಳಿಸಿರುವುದು ಪ್ರತಿಯೊಬ್ಬರೂ ಮೆಚ್ಚುವಂತದ್ದು.

-ಬೆಸಗರಹಳ್ಳಿ ರವಿ ಪ್ರಸಾದ್, ಮೈಸೂರು.

ಸರ್ಕಾರದ ನಿರ್ಧಾರ ಶರವೇಗದಲ್ಲಿ ಆಗಲಿ

ಮಾನ್ಯರೆ,

ಒಂದು ಒಳ್ಳೆಯ ಕೆಲಸ ಮಾಡಬೇಕಾದರೆ ನೂರಾರು ಕೆಟ್ಟ ಹುಳಗಳು ಅಡ್ಡಗಾಲು ಹಾಕುವುದು ಸಹಜ. ಆ ತರ ಇರುವ ಕೆಟ್ಟ ಹುಳಗಳಿಗೆ ಮನ್ನಣೆ ನೀಡಿದ್ದರೆ, ಸಮಾಜ ಸುಧಾರಣೆ ಮಾಡುವುದು ಕಷ್ಟವಾಗಲಿದೆ. ಕಾನೂನು ಪ್ರಕಾರ ಕ್ರಮ ಕೈಗೊಳ್ಳುವ ಆಲೋಚನೆಗೆ ಸರ್ಕಾರ ಹಿಂದೇಟು ಹಾಕುವುದು ಏಕೆ? ಸರ್ಕಾರ ಮಟ್ಟದಲ್ಲಿ ಕಾನೂನು ಪ್ರಕಾರ, ಕಾನೂನಿನ ಚೌಕಟ್ಟಿನಲ್ಲಿ ಕ್ರಮ ಕೈಗೊಳ್ಳಲು ಯಾವುದು ಸಾಧ್ಯತೆ ಇದೆ. ಆ ಎಲ್ಲಾ ಕೆಲಸ ಶರವೇಗದಲ್ಲಿ ಆಗಲು ರಾಜ್ಯ ಸರ್ಕಾರ ತನ್ನ ನಿರ್ಧಾರ ಪ್ರಕಟಿಸಲಿ. ಒಂದು ವೇಳೆ ಸರ್ಕಾರದ ನಿರ್ಧಾರದ ವಿರುದ್ಧ ನ್ಯಾಯಾಲಯದ ಮೆಟ್ಟಿಲೇರಿದ್ದರೂ ಕಾನೂನು ಪ್ರಕಾರವೇ ಜಾರಿಗೆ ತೆಗೆದುಕೊಂಡ ನಿರ್ಧಾರ ಯಾವುದಕ್ಕೂ ಸಮಸ್ಯೆಯಾಗುವುದಿಲ್ಲ. ಕೆಲವರಿಗೆ ಕಾಯ್ದೆ ಕಾನೂನಿನ ಬಗ್ಗೆ ತಿಳಿವಳಿಕೆ ಕಡಿಮೆ ಇರುತ್ತದೆ. ಒಮ್ಮೆ ಹೇಳಿದ್ದರು ತಿಳಿದುಕೊಳ್ಳುವುದಿಲ್ಲ. ಕಾಯ್ದೆಗಳನ್ನು ನಿವೃತ್ತ ನ್ಯಾಯಮೂರ್ತಿಗಳಿಂದ ವರ್ಷಾನುಗಟ್ಟಲೇ ಸಂಶೋಧಿಸಿ, ರಚನೆ ಮಾಡಿದ ಕಾಯ್ದೆಗಳು ಆಗಿರುತ್ತದೆ. ಕಾಯ್ದೆ ವಿರುದ್ಧ ನಡೆಯುವವರು ಜೈಲು ಊಟ ಸವಿಯಲು ಅರ್ಹರಾಗಿರುತ್ತಾರೆ. ಕೇಂದ್ರ ಸರ್ಕಾರದ ಸೂಚನೆಯಂತೆ ಡಿಸೆಂಬರ್ 31 ರೊಳಗೆ ಅಂತಿಮ ಗಡಿ ಗುರುತಿಸುವುದು, ಬೆಳಗಾವಿ ಜಿಲ್ಲೆಯನ್ನು ವಿಭಜಿಸಿ ಎರಡು ಹೊಸ ಜಿಲ್ಲೆ ರಚನೆ, ರಾಜ್ಯದಲ್ಲಿ ದ್ವಿಭಾಷಾ ನೀತಿ ಜಾರಿಗೊಳಿಸುವುದು ಸೇರಿದಂತೆ ಯಾವುದು ಸರ್ಕಾರದ ಮಟ್ಟದಲ್ಲಿ ಬಾಕಿ ಇದೆ. ಅವುಗಳೆಲ್ಲವೂ ಶೀಘ್ರ ಕ್ರಮ ಕೈಗೊಳ್ಳುವ ಕೆಲಸವಾಗಲಿ.


-ವೀರೇಶ ಧೂಪದಮಠ, ಮೈಸೂರು.

ಗೃಹಲಕ್ಷ್ಮಿಯೂ... ಚಾಮುಂಡೇಶ್ವರಿಯೂ..!

ಮಾನ್ಯರೆ,

ದಿನಾಂಕ 27.11.2023ರಂದು ಮೈಸೂರಿನ ಚಾಮುಂಡಿಬೆಟ್ಟದ ಶ್ರೀ ಚಾಮುಂಡೇಶ್ವರಿ ದೇವಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರು ಗೃಹಲಕ್ಷ್ಮಿ ಯೋಜನೆಯ 59 ತಿಂಗಳ ಹಣವನ್ನು ಅಂದರೆ ಮಾಸಿಕ 2 ಸಾವಿರದಂತೆ ರೂ.1.18 ಲಕ್ಷ ಹಣ ನೀಡಿ ರಶೀದಿ ಪಡೆದಿದ್ದರು. ಈಗ ಅದೇ ಶ್ರೀ ಚಾಮುಂಡೇಶ್ವರಿ ದೇವಾಲಯದ ಆಡಳಿತ ಮಂಡಳಿಯು ಶ್ರೀ ಚಾಮುಂಡೇಶ್ವರಿ ದೇವಿಯ ದರ್ಶನ ಪಡೆಯಲು ಆಷಾಢ ಶುಕ್ರವಾರದಂದು ಬರುವ ಭಕ್ತರಿಂದ ಎರಡು ಸಾವಿರ ರೂಪಾಯಿ ವಸೂಲಿ ಮಾಡಿ ಟಿಕೆಟ್ ನೀಡುತ್ತಿದೆ.

ತನ್ನ ಹೆಸರಿನಲ್ಲಿ ಸರಕಾರದ ಗೃಹಲಕ್ಷ್ಮಿ ಹಣವನ್ನು ಸ್ವೀಕರಿಸುವುದರ ಜೊತೆಗೆ ತನ್ನ ದರ್ಶನಕ್ಕೆಂದು ಬರುವ ಭಕ್ತರಿಂದ ಎರಡು ಸಾವಿರ ರೂಪಾಯಿ ಶುಲ್ಕ ಪಡೆಯುತ್ತಿರುವ ಆಡಳಿತ ಮಂಡಳಿಯ ವಿರುದ್ಧ ಶ್ರೀ ಚಾಮುಂಡೇಶ್ವರಿಯೇ ಶಿಸ್ತುಕ್ರಮ ಜರುಗಿಸಬೇಕಾಗಿದೆ. **-ಪಿ.ಜೆ.ರಾಘವೇಂದ್ರ, ನ್ಯಾಯವಾದಿ ಮೈಸೂರು**




ಅಡಗೂರು ಹೆಚ್.ವಿಶ್ವನಾಥ್
ಸಾಹಿತಿ-ರಾಜಕಾರಣಿ
ಮೊ: 96639 96390

ಹಳ್ಳಿ ಹಕ್ಕಿ ಹಾಡು



'ತುರ್ತು ಪರಿಸ್ಥಿತಿ' ಕರಾಳ ಕಾಲವೆಂದರೂ ಕರ್ನಾಟಕದ ಪಾಲಿಗೆ ಕರುಣಾಳು ಅಧ್ಯಾಯ!

ಅಂದು ಭಾರತದ ಪ್ರಧಾನಮಂತ್ರಿಯಾಗಿದ್ದ ಶ್ರೀಮತಿ ಇಂದಿರಾಗಾಂಧಿಯವರು ದೇಶದಲ್ಲಿ 'ತುರ್ತು ಪರಿಸ್ಥಿತಿ' ಘೋಷಿಸಿದ್ದು ಮಹಾ ಸುದ್ದಿಯಾಯಿತು. ದೇಶದೆಲ್ಲೆಡೆ ಆಕ್ರೋಶವೂ ವ್ಯಕ್ತವಾಯಿತು. ಆದರೆ, 'ತುರ್ತು ಪರಿಸ್ಥಿತಿ' ಬೆನ್ನ ಹಿಂದೆಯೇ ದೇಶದ ಬಡವರ ಬವಣೆ ನೀಗುವ, ಜೊತೆಗೆ ಅವರ ಸರ್ವಾಂಗೀಣ ಅಭಿವೃದ್ಧಿಗಾಗಿ ಅವರು 20 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಘೋಷಣೆ ಮಾಡಿದರು. ಆದರೆ, ಇದು ಮಾತ್ರ ಭಾರಿ ಸುದ್ದಿಯೇ ಆಗಲಿಲ್ಲ. ಜನರು ಇದರತ್ತ ಗಮನವನ್ನೇ ಹರಿಸಲಿಲ್ಲ. ಜನಸಂಖ್ಯಾ ನಿಯಂತ್ರಣ, ಸಸ್ಯ ಸಂವರ್ಧನೆ ಸೇರಿದಂತೆ ಐದು ಅಂಶಗಳ ಇಂದಿರಾ ಅವರ ಸುಪುತ್ರ ಸಂಜಯ ಗಾಂಧಿಯವರ ಕಾರ್ಯಕ್ರಮವನ್ನೊಳಗೊಂಡ ಈ 20 ಅಂಶಗಳ ಕಾರ್ಯಕ್ರಮ ಒಂದು ರೀತಿ ಬಿಳಿ ಬಣ್ಣದ ಮಸಿ ತಿಂತು ಎಂಬಂತಾಯಿತು.



ದೇವರಾಜ ಅರಸು

ಕೆಲವು ದಕ್ಷಿಣದ ರಾಜ್ಯಗಳನ್ನು ಹೊರತುಪಡಿಸಿ ಉತ್ತರ ಭಾರತದ ಹಲವು ರಾಜ್ಯಗಳು ಈ ಒಂದು ಕಾರ್ಯಕ್ರಮವನ್ನು ದುರ್ಬಳಕೆ ಮಾಡಿಕೊಂಡವು. ಇತ್ತ 'ತುರ್ತು ಪರಿಸ್ಥಿತಿ' ವೇಳೆ ಸ್ವಂತ ರಾಗ-ದ್ವೇಷಗಳ ಸಾಧನೆಗಾಗಿ ಆಳುವವರು, ತಮ್ಮ ಧೋರಣೆ ವಿರೋಧಿಸಿದವರನ್ನು ಸದೆಬಡಿದರು. ದೇಶದ ಜನರಲ್ಲಿ ಸಹಜವಾಗಿಯೇ ಅಸಹನೆ ಉಂಟಾಯಿತು.

ತುರ್ತು ಪರಿಸ್ಥಿತಿಯನ್ನು ಕೆಲವು ಜನನಾಯಕರು ಬಹಿರಂಗವಾಗಿ ಟೀಕಿಸಲು ಸಾಧ್ಯವಾಗದೆ ಕೋಪಾಗ್ನಿ ಕುದಿಯುತ್ತಿತ್ತು. ಅಂದು ಕರ್ನಾಟಕದಲ್ಲಿ ಜನಪರ ನಾಯಕ, ಮುತ್ಸದ್ದಿ ಡಿ.ದೇವರಾಜ ಅರಸರು ಮುಖ್ಯಮಂತ್ರಿಯಾಗಿದ್ದರು. ಇಂತಹ ಕೆಟ್ಟ ಪರಿಸ್ಥಿತಿಯನ್ನು ಒಬ್ಬ ಮುತ್ಸದ್ದಿ ನಾಯಕ ಹೇಗೆಲ್ಲಾ ಜನಪರವಾಗಿಸಬಲ್ಲ ಎಂಬುದಕ್ಕೆ **ಮುಖ್ಯಮಂತ್ರಿ ದೇವರಾಜ ಅರಸು** ಅವರ ನಾಯಕತ್ವವೇ ಸಾಕ್ಷಿ.


ಇಂದಿರಾಗಾಂಧಿ ಮತ್ತು ದೇವರಾಜ ಅರಸು ಅವರ ಇಪ್ಪತ್ತು ಅಂಶಗಳ ಕಾರ್ಯಕ್ರಮದಲ್ಲಿ ಪ್ರಮುಖವಾಗಿದ್ದ ಮಹಾತ್ಮ ಗಾಂಧಿಯವರು ಒತ್ತು ನೀಡಿದ್ದ 'ಉಳುವವನೇ ಹೊಲದೊಡೆಯ' ಕಾರ್ಯಕ್ರಮದ ಅನುಷ್ಠಾನಕ್ಕೆ ಹೆಚ್ಚು ಆಸಕ್ತಿ ವಹಿಸಿದರು. ಮನುಷ್ಯನ ನೆಲೆ, ನೆರಳು, ನೆಮ್ಮದಿ, ಅನ್ನ, ಅಭಿವೃದ್ಧಿ ಇವೆಲ್ಲ ಭೂಮಿಯನ್ನೇ ಅವಲಂಬಿಸಿವೆ. ಉಳ್ಳವರಿಂದ ಉಳ್ಳದವರಿಗೆ ಭೂಮಿಯನ್ನು ಹಸ್ತಾಂತರಿಸುವುದು ಅಷ್ಟು ಸುಲಭದ ಮಾತಾಗಿರಲಿಲ್ಲ.

> "ಬಡವನಲ್ಲಿ ಕನಸಿತ್ತು, ತಾಳ್ಮೆ ಇತ್ತು, ಭೂಮಿಯ ಹೊಂದುವ ಹಂಬಲವೂ ಇತ್ತು. ತನ್ನದೇ ಭೂಮಿಯಲ್ಲಿ ಉತ್ತು-ಬಿತ್ತಿ ಬೆಳೆ ಬೆಳೆಯಬೇಕೆಂಬ ಅವನ ಆಸೆ ಪ್ರತಿಬಾರಿ ಹುಟ್ಟುವ ಮೊದಲೇ ಸಾಯುತ್ತಿತ್ತು. ಬಡವನ ನೋವಿಗೆ ಮಿಲಿಯಾಂತರ ವರ್ಷಗಳ ಇತಿಹಾಸ ಇದೆ. ಭೂಮಿ ಮೋಹಕ್ಕೆ ಕ್ರೂರ ಇತಿಹಾಸವಿದೆ. ಭೂಮಿಯ ಮಾಯೆ ತಂದೆ-ಮಕ್ಕಳನ್ನು, ಅಣ್ಣ-ತಮ್ಮಂದಿರನ್ನು, ಬಂಧು-ಬಾಂಧವರನ್ನು ರಕ್ತಸಿಕ್ತವಾಗಿಸಿದೆ. ದೇಶ ದೇಶಗಳ ನಡುವೆ ನಡೆಯುವ ರಣ ಕಾಳಗ-ರಕ್ತಪಾತಗಳು, ಭೂಮಿಯ ದಾಹದಿಂದಲೇ ಅಲ್ಲವೇ?

ಬಡವನಲ್ಲಿ ಕನಸಿತ್ತು, ತಾಳ್ಮೆ ಇತ್ತು, ಭೂಮಿಯ ಹೊಂದುವ ಹಂಬಲವೂ ಇತ್ತು ತನ್ನದೇ ಭೂಮಿಯಲ್ಲಿ ಉತ್ತು-ಬಿತ್ತಿ ಬೆಳೆ ಬೆಳೆಯಬೇಕೆಂಬ ಅವನ ಆಸೆ ಪ್ರತಿಬಾರಿ ಹುಟ್ಟುವ ಮೊದಲೇ ಸಾಯುತ್ತಿತ್ತು. ಬಡವನ ನೋವಿಗೆ ಮಿಲಿಯಾಂತರ ವರ್ಷಗಳ ಇತಿಹಾಸ ಇದೆ. ಭೂಮಿಯ ಮೋಹಕ್ಕೆ ಕ್ರೂರ ಇತಿಹಾಸವಿದೆ. ಭೂಮಿಯ ಮಾಯೆ ತಂದೆ-ಮಕ್ಕಳನ್ನು, ಅಣ್ಣ-ತಮ್ಮಂದಿರನ್ನು, ಬಂಧು-ಬಾಂಧವರನ್ನು ರಕ್ತಸಿಕ್ತವಾಗಿಸಿದೆ. ದೇಶ ದೇಶಗಳ ನಡುವೆ ನಡೆಯುವ ರಣಕಾಳಗ-ರಕ್ತಪಾತಗಳು, ಭೂಮಿಯ ದಾಹದಿಂದಲೇ ಅಲ್ಲವೇ?

ಇಂದಿರಾಗಾಂಧಿ, ಸಂಜಯ ಗಾಂಧಿ ಮತ್ತು ಸಹಸ್ರಾರು ಕಾಂಗ್ರೆಸ್ ಯುವ ನಾಯಕರ ಸಹಕಾರದಿಂದ ದೇವರಾಜ ಅರಸರು ಕರ್ನಾಟಕದಲ್ಲಿ ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿದರು. ಇಂದು ನಾವು ನೋಡುತ್ತಿರುವ ಸಮೃದ್ಧ ಭಾರತ ಮತ್ತು ವಿಶೇಷವಾಗಿ ಬಲಿಷ್ಠ ಕರ್ನಾಟಕದ ಅಭಿವೃದ್ಧಿಗೆ ಬುನಾದಿ ಹಾಕಿದ್ದು ತುರ್ತು ಪರಿಸ್ಥಿತಿ ಸಂದರ್ಭದಲ್ಲೇ. ಪರ-ವಿರೋಧವೇನೇ ಇದ್ದರು ಅರಸರು ಇಂತಹ ಪರಿಸ್ಥಿತಿಯನ್ನು ಎಲ್ಲಿಯೂ ದುರುಪಯೋಗಪಡಿಸಿಕೊಳ್ಳದೆ ವಿರೋಧಿಗಳನ್ನು ಸಹ ವಿಶ್ವಾಸಕ್ಕೆ ತೆಗೆದುಕೊಂಡು ಕರ್ನಾಟಕದ ಜನರ ಅಕ್ಷರ, ಆರೋಗ್ಯ, ಅನ್ನ, ಉದ್ಯೋಗ, ಕೃಷಿ, ಭೂ ಒಡೆತನ, ತಲೆ ಮೇಲೊಂದು ಸೂರು, ಸಾಮರಸ್ಯ ಮುಂತಾಗಿ ಸುಸ್ಥಿತಿಯ ಸಾಧಿಸಿದರು.

ಭೂಮಿ ಬಡವರಿಗೆ ಬರಿಯ ಅನ್ನದ ಬೋಸಿಯಾದರೆ ಉಳ್ಳವರಿಗೆ ಭೂಮಿ ಪ್ರತಿಷ್ಠೆಯ ಗರಿ.



ಅದೆಷ್ಟು ಸಂಸಾರಗಳ ಅನ್ನವನ್ನು ಕಿತ್ತು ತಮ್ಮ ಪ್ರತಿಷ್ಠೆ ಬೆಳೆಸಿಕೊಂಡಿದ್ದೇವೆ ಎಂಬುದು ಉಳ್ಳವರಿಗೆ ತಿಳಿದಂತಿಲ್ಲ. ಇಂತಹ ಕಣ್ಣಿದ್ದು ಕುರುಡರಾದ ಶ್ರೀಮಂತ ಭೂಮಾಲೀಕರಿಂದ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಅದನ್ನು ಬಡ ಜನರಿಗೆ ಹಂಚಬೇಕೆಂಬ ವಿಚಾರವೇ 'ಭೂ ಸುಧಾರಣೆ'. ಶತ ಶತಮಾನಗಳಿಂದ ಭೂ ಮಾಲೀಕನ ತೊತ್ತಿನಾ ಮಗನಾಗಿ ಹೊತ್ತು ಕೂಳಿಗೂ ಗತಿ ಇಲ್ಲದ ಬಡ ಗೇಣಿದಾರರನ್ನು ಭೂ ಮಾಲೀಕನ್ನಾಗಿಸುವುದೇ 'ಉಳುವವನೇ ಹೊಲದೊಡೆಯ' ಮಹಾ ಪರಿಕಲ್ಪನೆ.

ಕನ್ನಡದ ಕಡಲ ಭಾರ್ಗವ ಶಿವರಾಮ ಕಾರಂತರು ತಮ್ಮ 'ಚೋಮನ ದುಡಿ' ಪುಸ್ತಕದಲ್ಲಿ ಬಡ ಗೇಮೆದಾರ ಚೋಮನ, ಮತ್ತವನ ಮಗಳು ಬೆಳ್ಳಿಯ ಬದುಕನ್ನು ಅತ್ಯಂತ ಹೃದಯವತ್ತಾಗಿ ವರ್ಣಿಸಿದ್ದಾರೆ. ಚೋಮನ ದುಡಿ ಸಿನಿಮಾ ಎಲ್ಲರ ಕಣ್ಣು ತೆರೆಸಿತು.

ಡಿ.ದೇವರಾಜ ಅರಸರು ಮೈಸೂರು ಜಿಲ್ಲೆ ಹುಣಸೂರು ತಾಲೂಕಿನ ಕಲಹಳ್ಳಿ ಎಂಬ ಕುಗ್ರಾಮದಿಂದ ಬಂದು, ತನ್ನ ಸರ್ಕಾರದ ಹಲವು ಕಾರ್ಯಕ್ರಮಗಳ ಅನುಷ್ಠಾನದಿಂದ ಬಡವನ ಬದುಕನ್ನು ಬೆಳಕರಿಸಿದ ಹೃದಯವಂತ. ಕರ್ನಾಟಕದಲ್ಲಿ ಭೂ ಸುಧಾರಣಾ ಕಾನೂನು, ಭೂ ಪಂಚಾಯ್ತಿಗಳ (ಕೋರ್ಟುಗಳನ್ನು ಹೊರಗಿಟ್ಟು) ಮೂಲಕ 21 ಲಕ್ಷ ಹೆಕ್ಟೇರ್ ಭೂಮಿಯನ್ನು ಬಡ ಗೇಣಿದಾರರಿಗೆ ಕಲ್ಪಿಸುವ ಮೂಲಕ ಅವನನ್ನು ಭೂ ಮಾಲೀಕನನ್ನಾಗಿಸುತ್ತಾರೆ.

ಉಟ್ಟ ಬಟ್ಟೆಗಳನ್ನೇ, ಉಳುವ ಎತ್ತುಗಳನ್ನೇ, ಉಂಬುವ ತಟ್ಟೆಗಳನ್ನೇ, ಬದುಕುತ್ತಿದ್ದವರ ಹೆತ್ತ ಮಕ್ಕಳನ್ನೇ, ಜೀತಕ್ಕಿಟ್ಟು ಬದುಕುತ್ತಿದ್ದ ಲಕ್ಷಾಂತರ ಮಂದಿಯನ್ನು ಅಂತಹ ಕ್ರೂರ, ಹೀನ ಹಾಗೂ ದಬ್ಬಾಳಿಕೆಯಿಂದ ಮುಕ್ತ ಮಾಡಿದರು.

ಜೀವನ ಮುಗಿದು ಮಣ್ಣಾದರೂ ಸಾಲದ ಋಣ ತೀರದೆ ತಲೆಮಾರುಗಳು ಒತ್ತೆಯಾಳಾಗಿ ದುಡಿಯುತ್ತಿದ್ದ ಲಕ್ಷಾಂತರ ಜನರನ್ನು ಸಾಲ ವಿಮೋಚನಾ ಕಾನೂನಿನ ಜಾರಿಯ ಮೂಲಕ ಬಿಡುಗಡೆ ಮಾಡಿದರು.

ಯಾರದ್ದೋ ಕೊಳಲ್ಲಿ, ಜಗುಲಿಗಳ ಮೇಲೆ, ಬೀದಿಯಲ್ಲಿ ಸಂಸಾರ. ಇಡೀ ಸಂಸಾರದೊಂದಿಗೆ ಬದುಕುತ್ತಿದ್ದ ಕುಟುಂಬಗಳ ಸ್ವಾಭಿಮಾನದ ಬದುಕಿಗಾಗಿ ಉಚಿತ ನಿವೇಶನ, ಮನೆಗಳನ್ನು ಕಲ್ಪಿಸಿಕೊಟ್ಟರು.

ಹೀಗೆ ತುರ್ತು ಪರಿಸ್ಥಿತಿಯ ಕಾಲದಲ್ಲಿ ಅರಸರಿಂದ, ಇಂದಿರಾಗಾಂಧಿ ಅವರಿಂದ ಜನಹಿತ ಸಾಧನೆ ಆಯ್ತು. ಆದರೆ ತುರ್ತು ಪರಿಸ್ಥಿತಿ ಜಾರಿಯಾಗಿ 50 ವರ್ಷಗಳ ನಂತರವೂ ಬಹಳಷ್ಟು ಜನರು ಅದನ್ನು ಟೀಕಿಸುತ್ತಲೇ ಪ್ರಜಾಪ್ರಭುತ್ವ, ಸಂವಿಧಾನ ಮುಂತಾಗಿ ಜೂನ್ ತಿಂಗಳು ಬಂತೆಂದರೆ ದೆವ್ವಗಳು ಕುಣಿಯುವ ಹಾಗೆ ಒದರುತ್ತಲೇ ಇರುತ್ತಾರೆ.

ಈ ಪ್ರಜಾಪ್ರಭುತ್ವ, ಸಂವಿಧಾನ ರಕ್ಷಕರಿಗೆ ತುರ್ತು ಪರಿಸ್ಥಿತಿಯಲ್ಲಿ ಆದ ಅಭಿವೃದ್ಧಿ ಕಾರ್ಯಗಳು, ಉತ್ತಮ ನಿರ್ಧಾರಗಳು ಕಣ್ಣಿಗೆ ಬೀಳುವುದೇ ಇಲ್ಲವೇ? ಇಲ್ಲ ಇಂತಹವರಿಗೆ ಅರಿವಿನ ಕೊರತೆ ಇದೆಯೇ?

ದೇವರಾಜ ಅರಸರು ಜನ ಕೊಟ್ಟ ಅಧಿಕಾರವನ್ನು, ಜನಪರ ಕಾರ್ಯಕ್ರಮಗಳ ಮೂಲಕ ಮತ್ತೆ ಜನರಿಗೇ ಹೇಗೆ ತಲುಪಿಸಿ ಧನ್ಯರಾದರು ಎಂಬುದನ್ನು ಈಗಿನ ಪ್ರತಿಯೊಬ್ಬ ಜನಪ್ರತಿನಿಧಿ ಮನಗಾಣಬೇಕು. ಕೆಲವು ರಾಜಕೀಯ ಜ್ಞಾನವಿಲ್ಲದವರು 'ರಾಜಕೀಯ' ಎಂದರೆ ಅರಚುವುದು, ಅಬ್ಬರಿಸುವುದು, ಮೆರೆಯುವುದಕ್ಕೆ ಸಿಕ್ಕಂತಹ ಲೈಸೆನ್ಸ್ ಎಂದೇ ಭಾವಿಸಿದ್ದಾರೆ.

ಬಹಳಷ್ಟು ಜನ ತುರ್ತು ಪರಿಸ್ಥಿತಿಯ ಅವಧಿಯನ್ನು ಕರಾಳ ಅಧ್ಯಾಯವೆನ್ನುತ್ತಾರೆ. ಆದರೆ, ಅರಸರ ವಿಚಾರದಲ್ಲಿ ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿ ಒಂದು ಕರುಣಾಳು ಅಧ್ಯಾಯವಾಯಿತು.

ಕರ್ನಾಟಕದಲ್ಲಿ ತುರ್ತು ಪರಿಸ್ಥಿತಿಯನ್ನು ಸಮರ್ಥವಾಗಿ ಅನುಷ್ಠಾನಗೊಳಿಸಿದ್ದರಿಂದ ಈ ಒಂದು ನಿರ್ಬಂಧಿತ ಅವಧಿಯ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಕೇವಲ 70 ಸ್ಥಾನಗಳಿಗಷ್ಟೇ ತೃಪ್ತಿಪಟ್ಟುಕೊಳ್ಳಬೇಕಾಯಿತು. ಆದರೆ, ಕರ್ನಾಟಕದಲ್ಲಿ 26 ಸ್ಥಾನಗಳನ್ನು ಗೆದ್ದಿತ್ತು. ಕಾರಣ, ಬಡವರ ಬಾಳು ಬೆಳಗಿತ್ತು.

ಈಗಿನ ನಮ್ಮ ರಾಜ್ಯದ ಪ್ರಸ್ತುತ ಮುಖ್ಯಮಂತ್ರಿಗಳೂ ಅಂದಿನ ತುರ್ತು ಪರಿಸ್ಥಿತಿ ಒಂದು ಕರಾಳ ಪರಿಸ್ಥಿತಿ ಎಂದು ವರ್ಣಿಸಿದ್ದಾರೆ. ಜನತಾ ಪಾರ್ಟಿಯ ನಾಯಕ ಜಾರ್ಜ್ ಫರ್ನಾಂಡಿಸ್‌ರವರ ಶಿಷ್ಯರಾಗಿ, ಕಾಂಗ್ರೆಸ್ ವಿರುದ್ಧ ಉರಿದುರಿದು ಬೀಳುತ್ತಿದ್ದರು. ಆದರೇನು ಈಗ ಅವರೇ ಕರ್ನಾಟಕದಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿ, ಇದು ವಿಪರ್ಯಾಸವಲ್ಲವೇ?



ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346

ನಾದಲಹರಿ

ನಗಬೇಕು, ನಗಿಸಬೇಕು?

ನಮ್ಮ ಬದುಕಿನಲ್ಲಿ ಬರುವ-ಹೋಗುವ-ತುಂಬಿರುವ ವಿವಿಧ ಭಾವ-ರಸಗಳನ್ನು ಒಮ್ಮೆ ಅವಲೋಕಿಸಿದರೆ, ಅದರಲ್ಲಿ ಹಾಸ್ಯ ಎನ್ನುವುದು ಎಷ್ಟೊಂದು ಕಡಿಮೆ ಇದೆ ಎಂಬ ಸಂಗತಿ ಗಾಬರಿ ಹುಟ್ಟಿಸುವಂಥದು. ಬದುಕಿನ ಜಂಜಾಟದಲ್ಲಿ ಸಂಸಾರ-ಮಕ್ಕಳು, ಅವರ ಓದು, ಮದುವೆ-ಮುಂಜಿ, ಗಂಡ-ಹೆಂಡಿರ ನಡುವಿನ (ಸರಸ) ವಿರಸ, ಮುನಿಸು ಇತ್ಯಾದಿಗಳಲ್ಲಿ ವರುಷಗಳು ಕಳೆದದ್ದೇ ಗಮನಕ್ಕೆ ಬರುವುದಿಲ್ಲ. ಸಂಸಾರದ ನವರಸಗಳಲ್ಲಿ ಹಾಸ್ಯವೂ ಒಂದಿರುತ್ತದೆಯಾದರೂ, ಅದು ಕಾವ್ಯದಲ್ಲಿ ಬಂದು ಹೋಗುವ ಸಂಚಾರೀ ಭಾವದಂತೆ. ಹೇಗೆ ಬಂದಿತು, ಹೇಗೆ ಹೋಯಿತು ಎಂಬುದೇ ಗೊತ್ತಾಗಿರುವುದಿಲ್ಲ. ಕೆಲವರು ನಿಜಕ್ಕೂ ಈ ವಿಷಯದಲ್ಲಿ ಅದೃಷ್ಟವಂತರು ಎಂದೇ ಹೇಳಬಹುದು. ಹಾಸ್ಯವು ಅವರ ಬದುಕಿನಲ್ಲಿ ಹಾಸು ಹೊಕ್ಕಿರುತ್ತದೆಯೋ ಅವರ ಬದುಕೇ ಹಾಸ್ಯಾಸ್ಪದವಾಗಿರುತ್ತದೆಯೋ (!), ಬಿಡಿ, ಅಂತೂ ಅವರು ಅದೃಷ್ಟವಂತರು ಎಂಬುವುದರಲ್ಲಿ ಅನುಮಾನವಿಲ್ಲ. ಅಂಥವರು ಸದಾ ನಗುನಗುತ್ತಲೇ ಇರಲಿ ಎಂದು ಹಾರೈಸೋಣ. ಕೆಲವರು ಎಂತಹ ಕಷ್ಟ ಸನ್ನಿವೇಶಗಳಲ್ಲೂ ತಮ್ಮ ಮಾನಸಿಕ ಸಮತೋಲನವನ್ನು ಕಾಪಾಡಿಕೊಂಡು ಶಾಂತವಾಗಿ ಅಥವಾ ನಗುನಗುತ್ತಲೇ ಇರುತ್ತಾರೆ. ಅಂತಹವರಿಗೆ ದೂರದಿಂದಲೇ ಒಂದು ದೊಡ್ಡ ನಮಸ್ಕಾರ ಅನ್ನೋಣ.

ಇಂದಿನ ಗಡಿಬಿಡಿಯ, ಯಾಂತ್ರೀಕೃತ ಬದುಕಿನಲ್ಲಿ ನಾವು ನಗುವುದನ್ನೇ ಮರೆತುಬಿಟ್ಟಿದ್ದೀವೇನೋ ಎಂದು ಅನ್ನಿಸುತ್ತದೆಯೇ? ಖಂಡಿತಾ ಅಷ್ಟೊಂದು ನಿರಾಶರಾಗಬೇಕಿಲ್ಲ. ಬದುಕಿನ ಹಾಸ್ಯಮಯ ಸನ್ನಿವೇಶಗಳು ನಮ್ಮ ನೆನಪಿನ ಕೋಶದಲ್ಲಿ ಹುದುಗಿ ಹೋಗಿರುತ್ತದೆ ಅಷ್ಟೇ. ಸ್ವಲ್ಪ ಅದನ್ನು ಕೆದಕಿ ನೋಡಿ, ಅದರ ನೆನಪು ನಿಮ್ಮಲ್ಲಿ ಮತ್ತೆ ಮೂಡಿ, ಖಂಡಿತಾ ಆ ಹಾಸ್ಯದ ಎಳೆ ಮಿಂಚು ನಿಮ್ಮ ಮುಖದಲ್ಲೂ ಮಂದಹಾಸವನ್ನು ಮೂಡಿಸದಿದ್ದರೆ ಕೇಳಿ!

ಗಂಡ-ಹೆಂಡಿರ ಮದುವೆ ಆಗಿ ಸುಮಾರು ವರುಷಗಳು ಆಗಿತ್ತು. ಮಧುಚಂದ್ರದ ಕಾವು ಸೊನ್ನೆ ಡಿಗ್ರಿಗೆ ಇಳಿದಿತ್ತು. ಹೆಂಡತಿಯ ಪ್ರತೀ ಕಾರ್ಯಕ್ಕೂ ಸಿಡಿಮಿಡಿಗೊಳ್ಳುವ ಗಂಡ. ಅವಳಲ್ಲಿ ತಪ್ಪು ಹುಡುಕುವುದೇ ಆತನ ದಿನನಿತ್ಯದ ಚಟುವಟಿಕೆಗಳಲ್ಲಿ ಪ್ರಮುಖ ಕಾರ್ಯ ಆಗಿಹೋಗಿತ್ತು. ಆರಂಭದಲ್ಲಿ ಅದನ್ನು ಸಹಿಸುತ್ತಲೇ ಕ್ರಮೇಣ ಸಹನೆ ಕಳೆದುಕೊಂಡ ಹೆಂಡತಿ. ನಿನಗೆ ಒಂದು ಒಳ್ಳೆಯ ಟೇಸ್ಟ್ ಕೂಡ ಇಲ್ಲ ಅಂದ ಗಂಡ. ನಿಮ್ಮನ್ನು ಮದುವೆಯಾದಾಗಲೇ ಗೊತ್ತಾಗಿತ್ತು? ಥಣ್ಣಗೆ ಅಂದಳು ಅವಳು. ನನಗೆ ಇರುವಷ್ಟಾದರೂ ಒಳ್ಳೆಯ ಟೇಸ್ಟ್ ನಿನಗೆ ಇದ್ದಿದ್ದರೆ ಅಂದ. ಅದೂ ಇಲ್ಲ ಎಂಬುದು ನಮ್ಮ ಮದುವೆಯಂದೇ ಗೊತ್ತಾಗಿತ್ತು ಅಂದಳು ಅವಳು.

ಐದಾರು ವರುಷದ ಚೊಚ್ಚಲ ಮಗನಿಗೆ ರಾಮಾಯಣ, ಮಹಾಭಾರತ, ತಾನು ಬಾಲ್ಯದಲ್ಲಿ ಕೇಳಿದ್ದ, ಓದಿದ್ದ ಎಲ್ಲ ಕತೆಗಳನ್ನೂ ಹೇಳುವ ತವಕ ತಾಯಿಗೆ. ಕತೆ ಎಂದರೆ ಮಕ್ಕಳೂ ಮೈಯೆಲ್ಲ ಕಿವಿಯಾಗಿಸುತ್ತಾರಷ್ಟೆ. ರಾಮಾಯಣದ ಕತೆಯನ್ನು ಹೇಳುತ್ತಾ ಆಂಜನೇಯನ ಪ್ರವೇಶ ಆಯಿತು. ತನ್ನ ತಾಯಿಯಿಂದ ಕೇಳಿದ ಕತೆಯನ್ನು ಅತೀ ಉತ್ಸಾಹದಿಂದ ಹೇಳತೊಡಗಿದಳು. ಹನುಮ ಬಾಲ್ಯದಲ್ಲೇ ಹೇಗೆ ಶಕ್ತಿವಂತನಾಗಿದ್ದ ಇತ್ಯಾದಿ ಹೇಳುತ್ತಾ, ಸೂರ್ಯನನ್ನು ಒಂದು ಚಂಡು ಎಂದು ಭ್ರಮಿಸಿ, ಅದನ್ನು ಹಿಡಿಯಲು ಹೇಗೆ ಆಕಾಶಕ್ಕೆ ಹಾರಿದ, ಸೂರ್ಯ ಅವನ ಕೆನ್ನೆಗೆ ಬಿಗಿದಿದ್ದರಿಂದ ಅವನ ಮುಖ ವಕ್ರವಾಗಿ, ಊದಿಕೊಂಡಿತು ಎಂಬೆಲ್ಲ ವಿವರಗಳು ಮುಗಿದವು. ಹಿಂದೆಯೇ ಮಗ ಕೇಳಿದ ಅಮ್ಮ, ಸೂರ್ಯ ಹೊಡೆದಿದ್ದರಿಂದ ಆಂಜನೇಯನ ಮುಖ ಊದಿಕೊಂಡಿತು ಎಂದು ಹೇಳಿದೆ. ವಾಲಿ, ಸುಗ್ರೀವ ಆ ಕೋತಿಗಳು, ಇವರಿಗೆಲ್ಲ ಯಾರು ಹೊಡೆದಿದ್ದರಮ್ಮ ಎಂದು. ಅಯ್ಯೋ ರಾಮ ನಮ್ಮಮ್ಮ ಈ ಕತೆಯನ್ನು ಹೇಳಿದಾಗ ಈ ಪ್ರಶ್ನೆಯೇ ನಮಗೆ ಹೊಳೆದಿರಲಿಲ್ಲವಲ್ಲ ಅಂದುಕೊಂಡ ಆ ತಾಯಿ ಸುಮ್ಮನೇ ವಾನರರೆಲ್ಲರಿಗೂ ಅಂತಹ ಮೂತಿ ಇರುತ್ತದೆ ಎಂದು ಹೇಳಿದ್ದರೆ ಚೆನ್ನಿತ್ತಲ್ಲವೇ ಎಂದು ಅಂದುಕೊಂಡಳು.

> "ಇಂದಿನ ಗಡಿಬಿಡಿಯ, ಯಾಂತ್ರೀಕೃತ ಬದುಕಿನಲ್ಲಿ ನಾವು ನಗುವುದನ್ನೇ ಮರೆತು ಬಿಟ್ಟಿದ್ದೀವೇನೋ ಎಂದು ಅನ್ನಿಸುತ್ತದೆಯೇ? ಖಂಡಿತಾ ಅಷ್ಟೊಂದು ನಿರಾಶರಾಗಬೇಕಿಲ್ಲ. ಬದುಕಿನ ಹಾಸ್ಯಮಯ ಸನ್ನಿವೇಶಗಳು ನಮ್ಮ ನೆನಪಿನ ಕೋಶದಲ್ಲಿ ಹುದುಗಿ ಹೋಗಿರುತ್ತದೆ ಅಷ್ಟೇ. ಸ್ವಲ್ಪ ಅದನ್ನು ಕೆದಕಿ ನೋಡಿ, ಅದರ ನೆನಪು ನಿಮ್ಮಲ್ಲಿ ಮತ್ತೆ ಮೂಡಿ, ಖಂಡಿತಾ ಆ ಹಾಸ್ಯದ ಎಳೆ ಮಿಂಚು ನಿಮ್ಮ ಮುಖದಲ್ಲೂ ಮಂದಹಾಸವನ್ನು ಮೂಡಿಸದಿದ್ದರೆ ಕೇಳಿ!

ಶಿಕ್ಷಕರ ಬದುಕಿನ ಒಂದು ಅನಿವಾರ್ಯ ಸಂಗತಿ-ಹಾಸ್ಯ. ವಿದ್ಯಾರ್ಥಿಗಳೊಡನೆ ನಿರಂತರ ಒಡನಾಟದಲ್ಲಿ ಇರುವಾಗ ಅದಕ್ಕೆ ಕೊರತೆಯೇ ಇರುವುದಿಲ್ಲ. ಅದು ಪುಟ್ಟ ಮಕ್ಕಳೇ ಇರಲಿ, ಹದಿವಯಸಿನವರೇ ಇರಲಿ, ಶಿಕ್ಷಕರ ಬದುಕಿನಲ್ಲಿ ಅದು ಒಂದು ಮಧುರ ಸ್ಮರಣೆಯಾಗಿ ಉಳಿದುಬಿಡುವುದರಲ್ಲಿ ಅನುಮಾನವೇ ಇಲ್ಲ. ಒಂದು ಸರಕಾರೀ ಶಾಲೆಯ ವಾರ್ಷಿಕೋತ್ಸವ ಸಮಾರಂಭ. ಪುಟ್ಟ ಬಾಲಕನಿಗೆ ಧ್ರುವನ ಪಾತ್ರವನ್ನು ವಹಿಸಲು ತಯಾರಿ ಮಾಡಲಾಗಿತ್ತು. ನಾಟಕ ಪ್ರಾರಂಭವಾಯಿತು. ಇನ್ನೇನು, ಅವನ ಪ್ರವೇಶ ಆಗಬೇಕು. ತಾನು ವೇದಿಕೆಗೆ ಬರುವುದಿಲ್ಲವೆಂದು ಹಟ ಹಿಡಿದ ಆ ಬಾಲಕ. ಮಾಸ್ತರು ಅವನನ್ನು ಒಪ್ಪಿಸಲು ಬಹಳ ಪ್ರಯತ್ನ ಮಾಡಿದರು. ಊಹೂಂ ಬಾಲಕ ಒಪ್ಪಲಿಲ್ಲ. ಹತಾಶರಾದ ಮಾಸ್ತರರು ನಿನಗೇನು ಬೇಕು ಹೇಳಪ್ಪಾ ಎಂದರು. ನಾಕಾಣೆ ಕೊಟ್ಟರೆ ಮಾತ್ರ ನಾನು ಹೋಗುತ್ತೇನೆ ಅಂದ ಬಾಲಕ! ನಗು ತಡೆದುಕೊಂಡ ಮಾಸ್ತರರು ತಮ್ಮ ಜೇಬಿನಿಂದ ನಾಕಾಣೆ ಕೊಟ್ಟ ನಂತರವೇ ಅವನು ವೇದಿಕೆಗೆ ಹೋಗಿದ್ದು!

ಇದು ಸುಮಾರು ಮೂವತ್ತು ನಲವತ್ತು ವರುಷಗಳ ಹಿಂದಿನ ಮಾತು. ಹತ್ತನೆಯ ತರಗತಿಯ ಮೌಲ್ಯಮಾಪನಕ್ಕೆ ರಾಜ್ಯದ ಎಲ್ಲ ಕಡೆಗಳಿಂದಲೂ ಶಿಕ್ಷಕರು ಬಂದು ಸೇರುತ್ತಿದ್ದರು. ಆಗ ಉತ್ತರ ಪತ್ರಿಕೆಯಲ್ಲಿ ಬರೆದಿರುವ ಅದ್ಭುತ ಉತ್ತರಗಳು ಅವರ, ಅಂದರೆ ಮೌಲ್ಯಮಾಪಕರ ನೆನಪಿನಲ್ಲಿ ಉಳಿದುಬಿಡುವುದರಲ್ಲಿ ಸಂದೇಹವೇ ಇಲ್ಲ. ಕೆಲವರು ತಮಗೆ ತಿಳಿದಿರುವುದು ಇಷ್ಟೇ. ದಯವಿಟ್ಟು ನಪಾಸು ಮಾಡಬೇಡಿರಿ ಎಂದು ಬೇಡಿಕೊಂಡದ್ದೂ ಉಂಟು! ವಿಜ್ಞಾನ ಪತ್ರಿಕೆಯಲ್ಲಿ ಡೇವಿಸ್ ಸೇಫ್ಟಿ ಲ್ಯಾಂಪಿನ ಚಿತ್ರ ತೆಗೆದು, ಅದನ್ನು ವಿವರಿಸಿ ಎಂಬ ಪ್ರಶ್ನೆಗೆ ಅದರ ವಿವರಣೆಯನ್ನು ಮಾತ್ರ ಬರೆದು, ಇದರ ಚಿತ್ರ ತೆಗೆಯುವುದನ್ನು ನಮ್ಮ ಗುರುಗಳು ಕಲಿಸಿಲ್ಲ. ಅದರ ಅಂಕಗಳನ್ನು ಕಡಿಮೆ ಮಾಡುವುದಿದ್ದಲ್ಲಿ, ಅವರದ್ದನ್ನೇ ಕಡಿಮೆ ಮಾಡಿರಿ ಎಂದು ಬರೆದದ್ದುಂಟು. ಕನ್ನಡ ಪತ್ರಿಕೆಯಲ್ಲಿ ಮತ್ತೆ ಕೆಲವರು ತತ್ಸಮ-ತದ್ಭವ ಪದಗಳನ್ನು ಕೇಳಿದ್ದಾಗ ಯೌವನ ಶಬ್ದಕ್ಕೆ ಯಪ್ಪನ ಎಂದು ಬರೆದು ನಗೆಯ ಬುಗ್ಗೆ ಎಬ್ಬಿಸಲು ಕಾರಣರಾಗಿದ್ದರು. ಎಲೆಕ್ಟ್ರಿಕ್ ಬಲ್ಬನ್ನು ಕಂಡುಹಿಡಿದವರ ಬಗ್ಗೆ ಕೇಳಿದ ಪ್ರಶ್ನೆಗೆ ಐದನೆಯ ತರಗತಿಯ ಮಗುವೊಂದು ಥಾಮಸ್ ಆಲ್ವಾ ಎಡಿಸನ್ ಬಲ್ಬನ್ನು ಕಂಡುಹಿಡಿದು, ನಮಗೆ ಕತ್ತಲಿನಲ್ಲಿ ಮಾಡಲು ಸಹಾಯ ಮಾಡಿದ ಎಂದು ಬರೆದುದನ್ನು ಓದಿದ ಶಿಕ್ಷಕಿ ಕಕ್ಕಾಬಿಕ್ಕಿ!!



ಹೀಗೆ ನಿಮ್ಮ ಬದುಕಿನಲ್ಲೂ ನಡೆದುಹೋದ ಹಿಂದಿನ ಘಟನಾವಳಿಗಳನ್ನು ಒಮ್ಮೆ ನೆನಪು ಮಾಡಿಕೊಳ್ಳಿ. ಅದು ಸಂಜೀವಿನಿಯಂತೆ ಕೆಲಸ ಮಾಡಿ, ನಮ್ಮನ್ನು ಮೃದುಗೊಳಿಸುತ್ತದೋ ಇಲ್ಲವೋ ನೀವೇ ನೋಡಿ, ನಿರ್ಧರಿಸಿ. ಬದುಕಿನಲ್ಲಿ ಬರುವ ನಗು-ಅಳು ಈ ಎರಡರ ರಸಪಾಕವನ್ನು ಹೇಗೆ ಸ್ವೀಕರಿಸಬೇಕು ಎಂದು ನಮ್ಮ ಪ್ರೀತಿಯ ಡಿ.ವಿ.ಗುಂಡಪ್ಪನವರ ಮಂಕುತಿಮ್ಮನ ಕಗ್ಗದೊಂದಿಗೆ ಮುಕ್ತಾಯ ಹೇಳೋಣವೇ

ನಗುವೊಂದು ರಸಪಾಕ, ಅಳುವೊಂದು ರಸಪಾಕ ।
ನಗು ಆತ್ಮ ಪರಿಮಳವ ಪಸರಿಸುವ ಕುಸುಮ ।
ದುಗುಡ ಆತ್ಮವ ಕಡೆದು ಸತ್ವವೆತ್ತುವ ಮಂತು ।
ಬಗೆದೆರಡನುಂ ಭುಜಿಸೋ ಮಂಕುತಿಮ್ಮ ॥

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಸಾರ್ವಜನಿಕವಾಗಿ ಮಹಿಳಾ ನಿಂದಕರಿಗೆ ಶಿಕ್ಷಿಸಲು ಕಾಯ್ದೆ ಜಾರಿಗೆ ತರಬೇಕು

- ಬೂಕರ್ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಬಾನುಮುಷ್ತಾಕ್ ಅಭಿಮತ
- ಪುಸ್ತಕಗಳಿಗೆ ಈಗಲೂ ಬೇಡಿಕೆ ಇದೆ; ಓದುಗರ ಸಂಖ್ಯೆಯೂ ಹೆಚ್ಚಾಗಿದೆ
- ಮೈಸೂರು ಪತ್ರಕರ್ತರ ಭವನದಲ್ಲಿ ನಡೆದ ಸಂವಾದದಲ್ಲಿ ಮುಷ್ತಾಕ್ ಮುಕ್ತ ನುಡಿ



ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ವತಿಯಿಂದ ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ಅವರಿಗೆ ಸಂಘದ ಅಧ್ಯಕ್ಷ ಕೆ.ದೀಪಕ್ ಹಾಗೂ ಪದಾಧಿಕಾರಿಗಳು ಸನ್ಮಾನಿಸಿದರು.

ಮೈಸೂರು, ಜು.5(ಎಂಟಿವೈ)– ಸಾರ್ವಜನಿಕವಾಗಿ ಮಹಿಳೆಯರನ್ನು ನಿಂದಿಸುವವರಿಗೆ ತಕ್ಕ ಪಾಠ ಕಲಿಸಲು ಪ್ರತಿಬಂಧಕ ಕಾಯ್ದೆಯೊಂದನ್ನು ಜಾರಿಗೊಳಿಸುವ ಅನಿವಾರ್ಯತೆಯಿದೆ ಎಂದು ಬೂಕರ್ ಪ್ರಶಸ್ತಿ ಪುರಸ್ಕೃತ ಖ್ಯಾತ ಸಾಹಿತಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟಿದ್ದಾರೆ. ಇದೇ ವೇಳೆ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕುರಿತು ವಿಧಾನಪರಿಷತ್ ಸದಸ್ಯ ರವಿಕುಮಾರ್ ಅವಹೇಳನಕಾರಿ ಹೇಳಿಕೆ ನೀಡಿರುವುದಕ್ಕೆ ಕಿಡಿಕಾರಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಎಂಎಲ್‌ಸಿ ರವಿಕುಮಾರ್, ಸರ್ಕಾರದ ಮುಖ್ಯ ಕಾರ್ಯದರ್ಶಿ ವಿರುದ್ಧ ಆಡಿರುವ ಮಾತು ಗಂಡಾಳ್ವಿಕೆಯನ್ನ ಬಲವಾಗಿ ಪ್ರತಿಪಾದಿಸುತ್ತದೆ. ಪುರುಷ ಪ್ರಧಾನ ಸಮಾಜದಲ್ಲಿ ಹೆಣ್ಣನ್ನು ಮೂದಲಿಸುವುದನ್ನು ಗಂಡು ಎನ್ನುವ ವ್ಯಕ್ತಿ ಮೊದಲಿಂದಲೂ ರೂಢಿಸಿಕೊಂಡು ಬಂದಿದ್ದಾನೆ. ಇಂತಹವರಿಗೆ ಮಾನಸಿಕ ಚಿಕಿತ್ಸೆ ಅವಶ್ಯಕತೆ ಇದೆ. ಈ ಹಿಂದೆ ಸಿ.ಟಿ.ರವಿ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ್ ಅವರನ್ನು ಅವಹೇಳನ ಮಾಡಿದ ಸಂದರ್ಭದಲ್ಲೂ ಇದೇ ರೀತಿ ಆಗಿತ್ತು. ಈ ಇಬ್ಬರು ಮಹಿಳೆಯರು ನಮ್ಮ ನಿಮ್ಮಂತೆ ಸಾಮಾನ್ಯರಲ್ಲ. ಮನಸ್ಸು ಮಾಡಿದ್ರೆ ಅವಹೇಳನ ಮಾಡಿರುವವರ ವಿರುದ್ಧ ಹೋರಾಟ ಮಾಡಬಹುದು. ಅಂದು ಲಕ್ಷ್ಮೀ ಹೆಬ್ಬಾಳ್ಕರ್ ಕಣ್ಣೀರು ಹಾಕಿದ್ದರು. ಪ್ರಜಾಸತ್ತಾತ್ಮಕ ಅಧಿಕಾರ ಸಿಕ್ಕಿರುವಾಗ ನೀವು ಅದನ್ನು ಅಪಮಾನವಾಗಿ ತೆಗೆದುಕೊಳ್ಳದೆ ಹೋರಾಟ ಮಾಡಬೇಕು ಎಂದಿದ್ದೆ. ಸಾರ್ವಜನಿಕವಾಗಿ ಮಹಿಳಾ ನಿಂದನೆ ಮಾಡಿದರೆ ಶಿಕ್ಷೆ ನೀಡಲು ಕಾಯ್ದೆ ತರಬೇಕು. ಈ ಪ್ರಕರಣದಲ್ಲೂ ಅದೇ ಅಶ್ಲೀಲ ಪದ ಮಾತನಾಡುವವರಿಗೆ ಮಾನಸಿಕ ಚಿಕಿತ್ಸೆ ಕೊಡಿಸಬೇಕು ಎಂದರು.

ವಸೂಲಿ ಬಾಜಿಗಳಾಗಿದ್ದಾರೆ: ರಾಜಕಾರಣ ಎನ್ನುವುದು ಹುಟ್ಟಿನಿಂದ ಬರುತ್ತದೆ. ಅದು ನಮ್ಮೆಲ್ಲರಲ್ಲೂ ಅಂತರ್ಗತವಾಗಿದೆ. ಅಧಿಕಾರಪ್ರೇರಿತ ರಾಜಕಾರಣವೇ ಬೇರೆ. ಇಂದಿನ ರಾಜಕಾರಣಿಗಳು ವಸೂಲಿಬಾಜಿಗಳಾಗಿದ್ದಾರೆ. ಅಧಿಕಾರಕ್ಕಾಗಿ ಏನನ್ನೂ ಬೇಕಾದರೂ ಮಾಡುತ್ತಾರೆ. ಈ ಹಿಂದೆ ನಾನೂ ರಾಜಕಾರಣದಲ್ಲಿದ್ದವಳು. ಹಾಸನ ನಗರಸಭೆಯಲ್ಲಿ ಎರಡು ಬಾರಿ ಬಹುಮತದಿಂದ ಗೆದ್ದಿದ್ದೆ. ದೊಡ್ಡ ದೊಡ್ಡ ರಾಜಕಾರಣಿಗಳನ್ನು ಎದುರಿಸಿ ನಿಂತಿದ್ದೆ. ನಂತರದ ದಿನಗಳಲ್ಲಿ ರಾಜಕೀಯ ಬೇಡ ಎನಿಸಿ ದೂರ ಉಳಿದೆ ಎಂದರು.

ಕೇರಳ, ಪಶ್ಚಿಮಬಂಗಾಳದಲ್ಲಿ ಹೆಚ್ಚು ಪ್ರಶಂಸೆ: ಬೂಕರ್ ಪ್ರಶಸ್ತಿ ಬಂದ ನಂತರ ಪಶ್ಚಿಮ ಬಂಗಾಳ, ಕೇರಳದಲ್ಲಿ ಎಲ್ಲಾ ಮ್ಯಾಗಝಿನ್, ವಿಶೇಷ ಪುರವಣಿಗಳಲ್ಲಿ ನನ್ನ ಬಗ್ಗೆ ವಿಶೇಷವಾಗಿ ಪ್ರಕಟಿಸಿದ್ದಾರೆ. ನಾನು ಅನುವಾದ ಮಾಡಿ ನೋಡಿದಾಗ ನನ್ನ ಬಗ್ಗೆ ಒಳ್ಳೆಯ ಮಾತುಗಳನ್ನೇ ಬರೆದಿದ್ದಾರೆ. ಅದರಲ್ಲೂ ನೆರೆಯ ಕೇರಳದಲ್ಲಿ ನನಗೆ ಹೆಚ್ಚಿನ ಪ್ರೀತಿ ತೋರಿಸಿದ್ದಾರೆ. ಕರ್ನಾಟಕದಲ್ಲಿ ನಾನು ಎಷ್ಟು ಪರಿಚಿತಳೋ, ಕೇರಳದಲ್ಲೂ ಅಷ್ಟೇ ಪರಿಚಿತಳಾಗಿದ್ದೇನೆ. ನನ್ನ ಬಹುತೇಕ ಪುಸ್ತಕಗಳು ಮಲೆಯಾಳಂಗೆ ಭಾಷಾಂತರ ಆಗುತ್ತವೆ. ಮಲೆಯಾಳಂ ಜನರಿಗೆ ನನ್ನ ಪುಸ್ತಕಗಳು ಹೆಚ್ಚು ರೀಚ್ ಆಗುತ್ತಿದೆ. ನಮ್ಮಲ್ಲೂ ಓದುವ ಹವ್ಯಾಸ ಕಡಿಮೆಯಾಗಿಲ್ಲ. ಹೆಚ್ಚು ಹೆಚ್ಚು ಪುಸ್ತಕಗಳ ಖರೀದಿ ಮಾಡುತ್ತಾರೆ ಎಂದರು.

ಬರೆದಿದ್ದು ನಾನು, ಪ್ರಕಟಿಸಿದ್ದು ಲಂಕೇಶ್ ಪತ್ರಿಕೆ: ಲಂಕೇಶ್ ಪತ್ರಿಕೆ ನಿಮ್ಮ ರೂಪಿಸಿತೇ...? ಈ ಪ್ರಶ್ನೆಗೆ ಉತ್ತರಿಸಿದ ಅವರು, ಲಂಕೇಶ್ ನನ್ನನ್ನ ರೂಪಿಸಲಿಲ್ಲ. ಹತ್ತು ವರ್ಷ ನನ್ನ ಲೇಖನ ಪ್ರಕಟಿಸಲು ವೇದಿಕೆ ಕೊಟ್ಟರು. ನನ್ನ ಪುಸ್ತಕಗಳ ಪ್ರಕಟ ಆಗಲಿಕ್ಕೆ ಅವಕಾಶ ಕೊಟ್ಟರು. ಅವರೇನು ಕೈ ಹಿಡಿದು ಬರೆಸಲಿಲ್ಲ. ನನಗೆ ನಾಲ್ವರು ಮಕ್ಕಳು. ಮೂವರು ಹೆಣ್ಣು ಮಕ್ಕಳು ಗೋಲ್ಡ್ ಮೆಡಲಿಸ್ಟ್, ಒಬ್ಬ ಮಗ ವಿದ್ಯಾವಂತ ದೊಡ್ಡ ಲೈಬ್ರರಿಯನ್ನೇ ನೋಡಿಕೊಂಡಿದ್ದಾನೆ. ಆದರೆ ಅವರ್ಯಾರನ್ನೂ ನಾನು ಲೇಖಕರನ್ನಾಗಿ ಮಾಡಲು ಆಗಲಿಲ್ಲ. ಅದು ಅವರಲ್ಲೇ ಬರಬೇಕು. ನಾವು ಬಲವಂತವಾಗಿ ಲೇಖಕರಾಗಿ ರೂಪಿಸಲು ಸಾಧ್ಯವಾಗುವುದಿಲ್ಲ ಎಂದರು.

ಅನುವಾದ ಹೆಚ್ಚಾಗಬೇಕು: ಕೊಡು ಕೊಳ್ಳುವಿಕೆಗೆ ಅನುವಾದ ಅಗತ್ಯ. ಈ ಕೆಲಸ ಹೆಚ್ಚಾಗಿ ನಡೆಯಬೇಕು. ಆದರೆ ಅದು ಸರ್ಕಾರಿ ಕೃಪಾ ಪೋಷಿತ ಅನುವಾದ ಕೆಲಸ ಆಗಬಾರದು. ಸಾಕಷ್ಟು ಭಾಷಾ ಕೌಶಲ ಇರುವವರು ಮುಂದೆ ಬರಬೇಕು. ನನ್ನ ಬಹುತೇಕ ಎಲ್ಲ ಕೃತಿಗಳೂ ಮಲೆಯಾಳಂ ಭಾಷೆಗೆ ಅನುವಾದಗೊಂಡಿವೆ. ಈಗ ಪ್ರಶಸ್ತಿ ಬಳಿಕ ಅಲ್ಲಿನ ಕಮ್ಯುನಿಸ್ಟ್ ಸರ್ಕಾರ ಸನ್ಮಾನ ಮಾಡಲು ನನ್ನನ್ನು ಅಲ್ಲಿಗೆ ಆಹ್ವಾನಿಸಿದೆ ಎಂದರು.

ನನ್ನ ಬರವಣಿಗೆ ಎರಡು ಮೊನೆಯ ಕತ್ತಿಯ ಮೇಲಿನಂತದ್ದಾಗಿದೆ. ಮುಸ್ಲಿಮರು ಒಂದು ಸಂದರ್ಭದಲ್ಲಿ, ನಮ್ಮಲ್ಲಿನ ವಿಚಾರಗಳನ್ನು ಬೇರೆಯವರಿಗೆ ತೋರಿ ಶಹಬ್ಬಾಸ್‌ಗಿರಿ ಪಡೆಯುತ್ತಿದ್ದಾಳೆ ಎಂದು ಟೀಕಿಸಿದ್ದುಂಟು ಎಂದರು. ನನ್ನ ಬರವಣಿಗೆ ಕೇವಲ ಮುಸ್ಲಿಂ ಮಹಿಳೆಯರಿಗೆ ಮಾತ್ರವೇ ಅನ್ವಯಿಸುವಂತದ್ದಲ್ಲ. ಸಮುದಾಯದಲ್ಲಿ ಪ್ರತಿಭಟನೆ ಮೂಲಕ ಮಹಿಳೆ ಪಿತೃ ಪ್ರಾಧಾನ್ಯತೆ ಹೇಗೆ ಎದುರಿಸುತ್ತಾಳೆ ಎಂಬುದಾಗಿದೆ. ಇದು ಎಲ್ಲ ಸಮುದಾಯಗಳಿಗೂ ಅನ್ವಯಿಸುತ್ತದೆ. ಬೂಕರ್ ಸಂಸ್ಥೆ ಸಹ ಇದನ್ನೇ ಹೇಳಿ, ಇದು ಸಾರ್ವತ್ರಿಕ ವಿಷಯವೆಂದು ಅಭಿಪ್ರಾಯಪಟ್ಟಿತೆಂದರು.

ದಸರಾ ಉದ್ಘಾಟನೆಗೆ ಆಹ್ವಾನಿಸಿದರೆ ಒಪ್ಪಿಕೊಳ್ಳುತ್ತೇನೆ

“ಈ ಬಾರಿಯ ದಸರಾ ಉದ್ಘಾಟಕರಾಗಿ ಸರ್ಕಾರ ಆಹ್ವಾನಿಸಿದರೆ, ಅದು ಕರ್ತವ್ಯ ಎಂದು ಒಪ್ಪಿಕೊಳ್ಳುತ್ತೇನೆ. ನಾನು ನಾಡು–ನುಡಿಗೆ ಸಲ್ಲಿಸುವಂತಹ ಗೌರವ ಎಂದು ಭಾವಿಸುತ್ತೇನೆ. ಅದು ಮುಖ್ಯಮಂತ್ರಿಗಳ ವಿವೇಚನೆಗೆ ಬಿಟ್ಟಿದ್ದು. ಮೈಸೂರು ಅಂದರೆ ನನಗೆ ನೆನಪಾಗೋದು ನಮ್ಮ ತಂದೆ ಇಲ್ಲೇ ಕೆಆರ್‌ಎಸ್‌ನಲ್ಲಿ ಸೀನಿಯರ್ ಇನ್ಸ್‌ಪೆಕ್ಟರ್ ಆಗಿದ್ದರು. ಆಗ ನಾನು ವಾರಕ್ಕೊಮ್ಮೆ ಮೈಸೂರಿಗೆ ಬರುತ್ತಿದ್ದೆ. ಜಯಚಾಮರಾಜೇಂದ್ರ ಒಡೆಯರ್ ಮಹಾರಾಜರಿದ್ದಾಗ ಜಂಬೂಸವಾರಿ ವೀಕ್ಷಣೆ ಮಾಡಿದ್ದೇನೆ. ಮೈಸೂರಿಗೆ ಬಂದಾಗ ಅದೆಲ್ಲಾ ನೆನಪಾಗುತ್ತದೆ. ನಾನು ಬೂಕರ್ ಪ್ರಶಸ್ತಿ ಪಡೆದಿರುವುದಕ್ಕೆ ನಮ್ಮ ನಾಡಿನೆಲ್ಲೆಡೆ ತಾವೇ ಪಡೆದಂತೆ ಜನ ಸಂಭ್ರಮಿಸುತ್ತಿದ್ದಾರೆ. ಅದಕ್ಕಿಂತ ಇನ್ನೇನು ಬೇಕು ಎಂದು ಪ್ರಶ್ನಿಸಿದರು.

ಜೀವನದ ಅನುಭವವೇ ನಮಗೆ ಮುಖ್ಯ: ಬದುಕಿನ ಅನುಭವವನ್ನು ಸಾಹಿತ್ಯದ ಮೂಲಕ ಎಲ್ಲೆಡೆ ಕೊಂಡೊಯ್ಯಬಹುದು. ವಿದೇಶಗಳಲ್ಲಿ ಪಿಯುಸಿ ಆದ ಬಳಿಕ ಸೃಜನಾತ್ಮಕ(ಕ್ರಿಯೇಟಿವ್) ಬರವಣಿಗೆ ಕೋರ್ಸ್‌ಗೆ ಕಳುಹಿಸುತ್ತಾರೆ. ಅಲ್ಲಿ, ಕಥೆ, ಕವನ, ಕಾದಂಬರಿ ಬರೆಯುವುದು ಹೇಗೆ ಎಂಬುದನ್ನು ಕಲಿಯುತ್ತಾರೆ. ಅಲ್ಲಿ ವಿಷಯ ವಿಭಿನ್ನತೆ ಕಡಿಮೆ. ನಮ್ಮಲ್ಲಿ ಸೃಜನಾತ್ಮಕ ಕಲಿಕೆ ಇಲ್ಲ. ಆದರೆ ಬದುಕಿನ ಅನುಭವ ಹೆಚ್ಚಾಗಿದೆ. ಜೀವನದ ಅನುಭವವೇ ಬರವಣಿಗೆಗೆ ಪ್ರೇರಣೆಯಾಗುತ್ತದೆ ಎಂದರು.

ರೆಫರೆನ್ಸ್ ಇಲ್ಲ: ಬೂಕರ್ ಪ್ರಶಸ್ತಿ ಸಂದರ್ಭದಲ್ಲಿ ಕತೆ ಬರೆಯುವಾಗ ನೀವು ಎಷ್ಟು ಪುಸ್ತಕ, ಕಾದಂಬರಿಯನ್ನು ರೆಫರೆನ್ಸ್ ಆಗಿಸಿಕೊಂಡಿದ್ದೀರಿ ಎಂದು ಕೇಳಿದರು. ಅದಕ್ಕೆ ನಾನು, ಯಾವುದೇ ರೆಫರೆನ್ಸ್ ತೆಗೆದುಕೊಳ್ಳುವುದಿಲ್ಲ. ನಮಗೆ ಬದುಕಿನ ಅನುಭವ ಇದೆ. ನಮ್ಮ ಆಲೋಚನಾ ಕ್ರಮ ಹಾಗೂ ನಮ್ಮ ಸಾಹಿತ್ಯವೂ ಗಟ್ಟಿಯಾಗಿದೆ. ಅದನ್ನು ಪ್ರಪಂಚದ ಗಮನಕ್ಕೆ ತರುತ್ತೇವೆ ಎಂದು ತಿಳಿಸಿದೆ ಎಂದು ಹೇಳಿದರು.

ಓದುವ ತುಡಿತ ಕಡಿಮೆಯಾಗಿಲ್ಲ: ಇತ್ತೀಚೆಗೆ ಓದುಗರ ಸಂಖ್ಯೆ ಕಡಿಮೆಯಾಗುತ್ತಿದೆಯೇ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಓದುಗರ ಸಂಖ್ಯೆ ಕಡಿಮೆಯಾಗಿಲ್ಲ. ನೂರಾರು ಪುಸ್ತಕಗಳು ಪ್ರಕಟವಾಗುತ್ತಲೇ ಇವೆ. ಅವುಗಳನ್ನು ಕೊಂಡುಕೊಳ್ಳುವವರ ಸಂಖ್ಯೆಯೂ ಹೆಚ್ಚಾಗಿದೆ. ಮೈಸೂರು ಸಾಹಿತ್ಯ ಸಂಭ್ರಮ ಕಾರ್ಯಕ್ರಮದಲ್ಲಿ 500ಕ್ಕೂ ಹೆಚ್ಚು ಪುಸ್ತಕಗಳನ್ನು ಕೊಂಡುಕೊಂಡು ಬಂದವರು ನನ್ನ ಸಹಿಗಾಗಿ ಕಾಯುತ್ತಿದ್ದರು. ಎಲ್ಲರ ಪುಸ್ತಕದ ಮೇಲೂ ಸಹಿ ಹಾಕಿದ್ದೇನೆ. ಇನ್ನಷ್ಟು ಮಂದಿಗೂ ಸಹಿ ಹಾಕಿಕೊಡುವುದಾಗಿ ತಿಳಿಸಿದ್ದೇನೆ. ಈಗಲೂ ನೂರಾರು ಪುಸ್ತಕಗಳು ಓದುಗರ ಕೈ ಸೇರುತ್ತಿವೆ. ಈ ಹಿಂದೆ ಸಂಚಾರಿ ಗ್ರಂಥಾಲಯ ಇತ್ತು. ನಾವು ಶ್ರಮಪಟ್ಟು ಹೋಗಿ ಪುಸ್ತಕ ತರುತ್ತಿದ್ದೆವು. ಈಗ ಮನೆಗಳೇ ಗ್ರಂಥಾಲಯಗಳಾಗಿವೆ ಎಂದರು. ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ.ದೀಪಕ್ ಅಧ್ಯಕ್ಷತೆ ವಹಿಸಿದ್ದ ಕಾರ್ಯ ಕ್ರಮದಲ್ಲಿ ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ, ಉಪಾಧ್ಯಕ್ಷ ರವಿ ಪಾಂಡವಪುರ, ಗ್ರಾಮಾಂತರ ಕಾರ್ಯದರ್ಶಿ ದಾ.ರಾ.ಮಹೇಶ್ ಇದ್ದರು.



ಆರೋಪಯುಕ್ತ ಕಸಾಪ ಅಧ್ಯಕ್ಷರ ಆಹ್ವಾನದ ಹಿನ್ನೆಲೆ
ಬಳ್ಳಾರಿ ಕನ್ನಡ ಸಾಹಿತ್ಯ ಸಮ್ಮೇಳನ ಸರ್ವಾಧ್ಯಕ್ಷ ಸ್ಥಾನ ಅಲಂಕರಿಸುವ ನಿರ್ಧಾರ ಇನ್ನೂ ಕೈಗೊಂಡಿಲ್ಲ

ಮೈಸೂರು,ಜು.5(ಎಂಟಿವೈ)– ಈ ಹಿಂದೆ ಹಾವೇರಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಅಲ್ಪಸಂಖ್ಯಾತರಿಗೆ ಗೋಷ್ಠಿ ನಡೆಸುವುದಕ್ಕೂ ಅವಕಾಶ ನೀಡದ ಹಾಗೂ ಭ್ರಷ್ಟಾಚಾರದ ಆರೋಪ ಹೊತ್ತಿರುವ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಆಹ್ವಾನಿಸಿರುವ 88ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷ ಸ್ಥಾನ ಒಪ್ಪಿಕೊಳ್ಳಬೇಕೋ ಅಥವಾ ತಿರಸ್ಕರಿಸಬೇಕೋ ಎನ್ನುವುದನ್ನು ಇನ್ನು ನಿರ್ಧರಿಸಿಲ್ಲ ಎಂದು ಬೂಕರ್ ಪ್ರಶಸ್ತಿ ವಿಜೇತ ಸಾಹಿತಿ ಬಾನು ಮುಷ್ತಾಕ್ ತಿಳಿಸಿದ್ದಾರೆ.

ಮೈಸೂರಲ್ಲಿ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಹಾವೇರಿಯಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅಲ್ಪಸಂಖ್ಯಾತ ಕವಿಗಳಿಗೆ ಅವಕಾಶವನ್ನೇ ನೀಡಲಿಲ್ಲ. ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ದುಡಿಯುತ್ತಿರುವ ಹಲವು ಅಲ್ಪಸಂಖ್ಯಾತ ಸಮುದಾಯದ ಸಾಹಿತಿಗಳಿದ್ದಾರೆ. ಇದೀಗ ಬಳ್ಳಾರಿಯಲ್ಲಿ ನಡೆಯಲಿರುವ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರ ಸ್ಥಾನಕ್ಕೆ ಆಹ್ವಾನ ನೀಡಲಾಗಿದೆ. ಅದನ್ನು ಒಪ್ಪಬೇಕೋ ಅಥವಾ ತಿರಸ್ಕರಿಸಬೇಕೋ ಇನ್ನು ನಿರ್ಧರಿಸಿಲ್ಲ ಎಂದರು.

ನನಗೆ ಆಹ್ವಾನ ನೀಡಿರುವುದು ಕಸಾಪ ಅಧ್ಯಕ್ಷರಲ್ಲಾದ ಬದಲಾವಣೆಯೋ ಅಥವಾ ಒತ್ತಡವೇ, ಸಾಮಾಜಿಕ ಸ್ಥಿತ್ಯಂತರವೇ ಅಥವಾ ಅನಿವಾರ್ಯವೇ ಎಂಬುದನ್ನು ತಿಳಿದುಕೊಳ್ಳಬೇಕಾಗಿದೆ. ಕಸಾಪ ಅಧ್ಯಕ್ಷ ಮಹೇಶ್ ಜೋಶಿ ಅವರ ಮೇಲೇ ಆರೋಪಗಳಿರುವಾಗ ಈ ಸ್ಥಾನಮಾನ ಒಪ್ಪಿಕೊಳ್ಳಬೇಕೆ ಎಂಬ ಪ್ರಶ್ನೆಯಿದೆ. ಸರ್ಕಾರ ಈಗಾಗಲೇ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ನಡೆದಿರುವ ಅವ್ಯವಹಾರ ಕುರಿತು ತನಿಖೆಗೆ ಆದೇಶಿಸಿದೆ. ಕಸಾಪ ರಾಜ್ಯಾಧ್ಯಕ್ಷರ ವಿರುದ್ಧವೇ ಗಂಭೀರ ಆರೋಪಗಳು ಕೇಳಿ ಬಂದಿವೆ. ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ರಾಜ್ಯಾಧ್ಯಕ್ಷರೊಬ್ಬರೇ ಎಲ್ಲವೂ ಆಗಿಲ್ಲ. ಎಲ್ಲಾ ಜಿಲ್ಲೆಗಳ ಅಧ್ಯಕ್ಷರನ್ನೂ ಕನ್ನಡ ಸಾಹಿತ್ಯ ಪರಿಷತ್ ಒಳಗೊಂಡಿದೆ. ಹಾಗಾಗಿ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿಕೊಳ್ಳುವ ಕುರಿತು ಇನ್ನು ಯಾವುದೇ ತೀರ್ಮಾನಕ್ಕೆ ಬಂದಿಲ್ಲ. ಮುಂದಿನ ದಿನಗಳಲ್ಲಿ ಈ ಬಗ್ಗೆ ತೀರ್ಮಾನಿಸುತ್ತೇನೆ ಎಂದು ಪ್ರತಿಕ್ರಿಯಿಸಿದರು.

ಪ್ರಧಾನಿ ಅಭಿನಂದಿಸುತ್ತಾರೆ ಎಂಬ ಆಶಾಭಾವವಿದೆ: ಬೂಕರ್ ಪ್ರಶಸ್ತಿ ಸಂದ ಬಳಿಕ ಸಾರ್ವಜನಿಕ ವಲಯದಲ್ಲಿ ಪ್ರಶಂಸೆ ವ್ಯಕ್ತವಾದರೂ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಒಂದು ವರ್ಗ ನಿಮಗೆ ಅಭಿನಂದಿಸಿಲ್ಲ ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ನಾನು ನನ್ನ ಸಾಹಿತ್ಯದಲ್ಲಿ ಆಶಾವಾದದ ಕ್ಯಾರೆಕ್ಟರ್ ಸೃಷ್ಟಿ ಮಾಡಿದ್ದೇನೆ. 1965ರಿಂದ ಬೂಕರ್ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಸಣ್ಣಕಥೆಗಳಿಗೆ ಈ ಪ್ರಶಸ್ತಿ ಸಂದಿದೆ. ಪ್ರಶಸ್ತಿ ಸ್ವೀಕಾರಕ್ಕೆ ನಾನು ಮಾಡಿದ ಭಾಷಣವನ್ನು ಸಾಮಾಜಿಕ ಜಾಲತಾಣಗಳಲ್ಲಿ 30 ಮಿಲಿಯನ್ ಜನ ವೀಕ್ಷಿಸಿದ್ದಾರೆ. ಇದು ಬೂಕರ್ ಸಂಸ್ಥೆಗೆ ಆಶ್ಚರ್ಯವನ್ನುಂಟು ಮಾಡಿದೆ. ನಾನು ಮಹಿಳೆ, ಅದರಲ್ಲೂ ಅಲ್ಪಸಂಖ್ಯಾತ ಸಮುದಾಯದ ಮಹಿಳೆ ಎಂಬ ಕಾರಣಕ್ಕೆ ಒಂದು ವರ್ಗ ನನಗೆ ಅಭಿನಂದಿಸಿಲ್ಲ ಎನ್ನಿಸುತ್ತಿದೆ. ನನಗೆ, ಪ್ರಧಾನಿ ಮೋದಿ ಸೇರಿದಂತೆ ಆ ಒಂದು ವರ್ಗ ಅಭಿನಂದಿಸುತ್ತದೆ ಎಂಬ ವಿಶ್ವಾಸ ಇದೆ ಎಂದು ಹೇಳಿದರು.



ಕನ್ನಡ–ಸಂಸ್ಕೃತಿ ಇಲಾಖೆ ಕಲಾವಿದರಿಗೆ ಅನುದಾನ ಬಿಡುಗಡೆಗೆ ಆಗ್ರಹ

ಮೈಸೂರು, ಜು.5(ಜಿಎ)–ಕಳೆದ ಎರಡು ವರ್ಷಗಳಿಂದಲೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಲಾವಿದರಿಗೆ ಅನುದಾನ ಬಿಡುಗಡೆಗೊಳಿಸದಿರುವುದರಿಂದ ಇವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಹೀಗಾಗಿ ಕೂಡಲೇ ಅನುದಾನ ಬಿಡುಗಡೆಗೊಳಿಸಬೇಕೆಂದು ಸರಗೂರು ತಾಲೂಕಿನ ಆಗತ್ತೂರು ಗ್ರಾಮದ ಜಾನಪದ ಕಲಾವಿದ ಡಾ.ಪಿ. ಜವರನಾಯ್ಕ ಆಗ್ರಹಿಸಿದರು.

2 ವರ್ಷದಿಂದ ಬಿಡುಗಡೆಯಾಗದ ಅನುದಾನ, ಸಂಕಷ್ಟದಲ್ಲಿ ಕಲಾವಿದರು

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಲ್ಲೆಯ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಹಾಗೂ ಹಿಂದುಳಿದ ವರ್ಗಗಳಿಗೆ ಸೇರಿದ ಕಲಾವಿದರು ಇಲಾಖೆ ಪ್ರಾಯೋಜಿತ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡಿದ್ದಾರೆ. ಇವರಿಗೆ ಕಳೆದ 2 ವರ್ಷಗಳಿಂದಲೂ ಅನುದಾನ ಬಿಡುಗಡೆಗೊಂಡಿಲ್ಲ. ಕಲಾವಿದರಿಗೆ ಗುರುತಿನ ಚೀಟಿ ನೀಡಬೇಕು, ವೇಷಭೂಷಣ, ವಾದ್ಯ ಪರಿಕರ ಸಹಾಯಧನ ನೀಡುವಿಕೆ ಮುಂದುವರಿಸಬೇಕು. ಆಯಾ ಜಿಲ್ಲೆಗಳಲ್ಲಿಯೇ ಗಿರಿಜನ ಬುಡಕಟ್ಟು ಉತ್ಸವ ನಡೆಸಬೇಕು. ಕಲಾವಿದರ ಮಾಸಾಶನ 5 ಸಾವಿರಕ್ಕೆ ಹೆಚ್ಚಿಸಬೇಕು, ರಾಜಧಾನಿ ಬೆಂಗಳೂರಿನ ಲಾಲ್‌ಬಾಗ್ ಮತ್ತು ಕಬ್ಬನ್‌ಪಾರ್ಕ್‌ನಲ್ಲಿನ ಸಂಧ್ಯಾರಾಗ ಮತ್ತು ಉದಯರಾಗ ಕಾರ್ಯಕ್ರಮ ಮುಂದುವರಿಸಬೇಕು, ಉಚಿತ ಬಸ್‌ಪಾಸ್ ನೀಡಬೇಕು, ಕಲಾವಿದರ ಮಕ್ಕಳಿಗೆ ಉಚಿತ ಶಿಕ್ಷಣ, ವಿದ್ಯಾರ್ಥಿವೇತನ ನೀಡಬೇಕೆಂದು ಕೋರಿದರು. ಗೋಷ್ಠಿಯಲ್ಲಿ ಕಲಾವಿದರಾದ ದೇವು, ರಾಜಶೇಖರ್ ಇದ್ದರು.

ಮೈಸೂರು ಮಿತ್ರ

ಭಾನುವಾರ 6 ಜುಲೈ 2025

ಕೆಎಸ್‌ಆರ್‌ಟಿಸಿ ಬಸ್ ಪಲ್ಟಿ: 30ಕ್ಕೂ ಹೆಚ್ಚು ಮಂದಿಗೆ ಗಾಯ



ಮಂಡ್ಯ, ಜು.5– ಕೆಎಸ್ ಆರ್‌ಟಿಸಿ ಬಸ್ಸೊಂದು ಚಾಲಕನ ನಿಯಂತ್ರಣ ತಪ್ಪಿ ಪಲ್ಟಿಯಾದ ಪರಿಣಾಮ 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿರುವ ಘಟನೆ ತಾಲೂಕಿನ ಹಾಡ್ಲಿ ಗ್ರಾಮದ ಬಳಿ ಶನಿವಾರ ಸಂಭವಿಸಿದೆ.

ಬಸ್‌ನಲ್ಲಿ 75ಕ್ಕೂ ಹೆಚ್ಚು ಮಂದಿ ಪ್ರಯಾಣಿಸುತ್ತಿದ್ದರು ಎನ್ನಲಾಗಿದ್ದು, ಈ ಪೈಕಿ 30ಕ್ಕೂ ಹೆಚ್ಚು ಮಂದಿ ಗಾಯಗೊಂಡಿದ್ದಾರೆ. ಗಾಯಾಳುಗಳಿಗೆ ಶಿವಳ್ಳಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ಮಂಡ್ಯ ನಗರದ ಮಿಮ್ಸ್ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಮಂಡ್ಯದಿಂದ ಶಿವಳ್ಳಿ, ಸುಂಕಾತೊಣ್ಣೂರು, ಕನಗನಮರಡಿ ಮಾರ್ಗವಾಗಿ ಪಾಂಡವಪುರಕ್ಕೆ ಹೋಗುತ್ತಿದ್ದ ಬಸ್‌ನಲ್ಲಿ ಸುಮಾರು 75 ಮಂದಿ ಇದ್ದರು. ಶಾಲಾ–ಕಾಲೇಜು ವಿದ್ಯಾರ್ಥಿಗಳು ಸೇರಿದಂತೆ ನಾಳೆ ಏಕಾದಶಿ ಹಬ್ಬವಿರುವ ಪರಿಣಾಮ ಸಾಮಾಗ್ರಿ ಖರೀದಿಸಲು ಪಾಂಡವಪುರ ಸೇರಿದಂತೆ ಸುತ್ತಮುತ್ತಲ ಗ್ರಾಮದಿಂದ ಜನ ಆಗಮಿಸಿ, ನಂತರ ಅದೇ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದರು.

ಶಿವಳ್ಳಿ–ಹಾಡ್ಯ ಸೇತುವೆ ಬಳಿ ಪಾಂಡವಪುರದಿಂದ ಮಂಡ್ಯ ಕಡೆಗೆ ಬರುತ್ತಿದ್ದ ಮತ್ತೊಂದು ಕೆಎಸ್‌ಆರ್‌ಟಿಸಿ ಬಸ್‌ಗೆ ಜಾಗ ಕೊಡಲು ಹೋಗಿ ಚಾಲಕನ ನಿಯಂತ್ರಣ ತಪ್ಪಿ ಬಸ್ ಪಲ್ಟಿಯಾಗಿದೆ. ಬಸ್‌ನಲ್ಲಿ ಪ್ರಯಾಣಿಕರು ಹೆಚ್ಚಿದ್ದ ಪರಿಣಾಮ 30ಕ್ಕೂ ಹೆಚ್ಚು ಮಂದಿಗೆ ಗಾಯಗಳಾಗಿವೆ.

ಸ್ಥಳೀಯ ಗ್ರಾಮಸ್ಥರ ನೆರವಿನಿಂದ ಗಾಯಾಳುಗಳನ್ನು ಬಸ್‌ನಿಂದ ಹೊರತೆಗೆಯಲಾಗಿದೆ. ಘಟನೆ ಸಂಬಂಧ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಾಳೆ ಹಿರಿಯ ಮತ್ತೀಕೆರೆ ಜಯರಾಂ, ಬಸವರಾಜ ಹೆಗ್ಗಡೆಗೆ ಅಭಿನಂದನೆ

ಮಂಡ್ಯ: ಪತ್ರಿಕಾ ಮಿತ್ರರು ಹಾಗೂ ಹಿತೈಷಿಗಳ ಬಳಗದ ವತಿಯಿಂದ ಕೆ.ಕೆ.ಶೆಟ್ಟಿ ಕುತ್ತಿಕಾರ್ ಹಾಗೂ ಹೆಚ್.ಕೆ.ವೀರಣ್ಣಗೌಡ ಪ್ರಶಸ್ತಿ ಪುರಸ್ಕೃತರಾದ ಪತ್ರಕರ್ತರಿಗೆ ಅಭಿನಂದನಾ ಸಮಾರಂಭವನ್ನು ಜು.7ರ ಬೆಳಿಗ್ಗೆ 11 ಗಂಟೆಗೆ ನಗರದ ಕೆ.ವಿ.ಶಂಕರಗೌಡ ಶತಮಾನೋತ್ಸವ ಭವನದಲ್ಲಿ ಆಯೋಜಿಸಲಾಗಿದೆ ಎಂದು ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಕೆ.ಸಿ.ಮಂಜುನಾಥ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗಡಿನಾಡ ಸಾಧಕ ಕೆ.ಕೆ.ಶೆಟ್ಟಿ ಕುತ್ತಿ ಕಾರ್ ಪ್ರಶಸ್ತಿ ಪಡೆದ ಹಿರಿಯ ಪತ್ರಕರ್ತ ಮತ್ತೀಕೆರೆ ಜಯರಾಮ್ ಹಾಗೂ ಹೆಚ್.ಕೆ.ವೀರಣ್ಣಗೌಡ ಪ್ರಶಸ್ತಿ ಪುರಸ್ಕೃತ ಹಾಗೂ 60ನೇ ವರ್ಷಕ್ಕೆ ಕಾಲಿರಿಸಿದ ಜಿಲ್ಲೆಯ ಹಿರಿಯ ಪತ್ರಕರ್ತ ಬಸವರಾಜ ಹೆಗ್ಗಡೆ ಅವರನ್ನು ಸಮಾರಂಭದಲ್ಲಿ ಅಭಿನಂದಿಸಲಾಗುವುದು ಎಂದರು.

ಕಾರ್ಯಕ್ರಮದ ದಿವ್ಯ ಸಾನಿಧ್ಯವನ್ನು ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ನಿಶ್ಚಲಾನಂದನಾಥ ಸ್ವಾಮೀಜಿ ವಹಿಸಲಿದ್ದು, ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ.ಪ್ರಭಾಕರ್ ಉದ್ಘಾಟಿಸುವರು. ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಹೇಳಿದರು.

ಇ–ಪೌತಿ ಖಾತೆಗಾಗಿ ಸಾರ್ವಜನಿಕರು ತಾಲೂಕು ಕಚೇರಿಗೆ ಅಲೆದಾಡುವಂತಿಲ್ಲ

ಮಂಡ್ಯ: ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯಾದ ಇ–ಪೌತಿ ಖಾತಾ ಆಂದೋಲನ ಜಿಲ್ಲೆಯಲ್ಲಿ ಪ್ರಾರಂಭವಾಗಿದ್ದು, ಸಾರ್ವಜನಿಕರು ಇನ್ನೂ ಮುಂದೆ ತಾಲೂಕು ಕಚೇರಿಗೆ ಅಲೆದಾಡುವಂತಿಲ್ಲ ಎಂದು ಜಿಲ್ಲಾಧಿಕಾರಿ ಡಾ.ಕುಮಾರ ತಿಳಿಸಿದರು.

ಶನಿವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಅವರು ಈಗಾಗಲೇ ಗದಗ ಜಿಲ್ಲೆಯಲ್ಲಿ ಪೈಲೆಟ್ ಪ್ರಾಜೆಕ್ಟ್ ಆಗಿ ಕಳೆದ ಎರಡು ತಿಂಗಳಿಂದ ಈ ಪೌತಿ ಖಾತೆ ಕೆಲಸ ಪ್ರಾರಂಭವಾಗಿದೆ. ಜಿಲ್ಲೆಯಲ್ಲಿ ಗ್ರಾಮ ಆಡಳಿತಾಧಿಕಾರಿಗಳು, ಕಂದಾಯ ನಿರೀಕ್ಷಕರು, ಉಪ ತಹಸೀಲ್ದಾರ್ ಹಾಗೂ ತಹಸೀಲ್ದಾರ್‌ಗಳು ಕಾರ್ಯಪ್ರವೃತ್ತರಾಗಬೇಕು ಎಂದರು.

ಕೃಷಿ ಜಮೀನಿನ ಸ್ವಂತ ಇಡುವಳಿದಾರರು, ಖಾತೆದಾರರು ಮೃತಗೊಂಡ ನಂತರ ಹಲವಾರು ವರ್ಷಗಳಿಂದ ವಾರಸುದಾರರು ತಮ್ಮ ಹೆಸರಿಗೆ ಖಾತೆಯನ್ನು ವರ್ಗಾವಣೆ ಮಾಡಿಕೊಂಡಿರುವುದಿಲ್ಲ. ಆದರಿಂದ ಪಹಣಿಗಳಲ್ಲಿ ಮೃತ ಖಾತೆದಾರರ ಹೆಸರು ಮುಂದುವರೆಯುತ್ತಿದೆ. ಇದನ್ನು ಸರಿಪಡಿಸಲು ಕಂದಾಯ ಇಲಾಖೆ ಸ್ವಯಂ ಪ್ರೇರಿತವಾಗಿ ಇ–ಖಾತಾ ಆಂದೋಲವನ್ನು ಪ್ರಾರಂಭಿಸಿದೆ ಎಂದರು.



ಅಧಿಕಾರಿಗಳ ಸಭೆ ನಡೆಸಿ ಮಾತನಾಡಿದ ಜಿಲ್ಲಾಧಿಕಾರಿ ಡಾ.ಕುಮಾರ್

ಕಂದಾಯ ಇಲಾಖೆಯಿಂದ ಇತ್ತೀಚೆಗೆ ಪಹಣಿಗಳನ್ನು ಆಧಾರ ಜೋಡಣೆ ಮಾಡುವ ಸಂದರ್ಭದಲ್ಲಿ ಮೃತ ಖಾತೆದಾರರನ್ನು ಪತ್ತೆ ಹಚ್ಚಿ ವಿವರವನ್ನು ನಮೂದು ಮಾಡಲಾಗಿದೆ. ತಂತ್ರಾಂಶವನ್ನು ಬಳಸಿಕೊಂಡು ಇ–ಪೌತಿ ಖಾತೆ ಮಾಡಿಕೊಡಲಾಗುವುದು ಎಂದರು.

ಗ್ರಾಮ ಆಡಳಿತಾಧಿಕಾರಿಗಳು ನಿಖರ ಮಾಹಿತಿಗಳೊಂದಿಗೆ ತಂತ್ರಾಂಶದಲ್ಲಿ ವಾರಸುದಾರರು ಹಾಗೂ ಮೃತ ಖಾತೆದಾರರ ವಿವರವನ್ನು ಭರ್ತಿ ಮಾಡಬೇಕಿದ್ದು, ಸಾರ್ವಜನಿಕರು ಮೃತ ಖಾತೆದಾರರ ಮರಣ ಪ್ರಮಾಣ ಪತ್ರ, ವಂಶವೃಕ್ಷ, ಆಧಾರ್ ವಿವರವನ್ನು ಗ್ರಾಮ ಆಡಳಿತಾಧಿಕಾರಿಗಳಿಗೆ ನೀಡಿ ಸಹಕರಿಸಬೇಕು ಎಂದರು.

ಗ್ರಾಮ ಆಡಳಿತಾಧಿಕಾರಿಗಳ ಕೆಲಸ ಪ್ರಮುಖವಾಗಿದ್ದು, ಈಗಾಗಲೇ ಜಿಲ್ಲೆಯ 185 ಗ್ರಾಮ ಆಡಳಿತಾಧಿಕಾರಿಗಳಿಗೆ ಇ.ಆಫೀಸ್‌ನಲ್ಲಿ ಕಾರ್ಯನಿರ್ವಹಿಸಲು ಲ್ಯಾಪ ಟಾಪ್ ನೀಡಲಾಗಿದ್ದು, ಇ–ಪೌತಿ ಖಾತಾ ಆಂದೋಲನಕ್ಕೆ ಬಳಸಿಕೊಳ್ಳಿ . ಇ–ಪೌತಿ ಖಾತಾ ಆಂದೋಲನದ ಬಗ್ಗೆ ತಾತ್ಸಾರ ಹಾಗೂ ನಿರ್ಲಕ್ಷ್ಯ ಮನೋಭಾವನೆ ಕಂಡುಬಂದರೆ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಇ– ಪೌತಿ ಖಾತೆ ವೆಬ್ ಅಪ್ಲಿಕೇಷನ್‌ನಲ್ಲಿ ಭರ್ತಿ ಮಾಡಬೇಕಿರುವ ವಿವರಗಳ ಕುರಿತು ಆನ್ ಲೈನ್ ಮುಖಾಂತರ ಜಿಲ್ಲೆಯ ಎಲ್ಲಾ ತಾಲೂಕುಗಳ ಗ್ರಾಮ ಆಡಳಿತಾಧಿಕಾರಿಗಳಿಗೆ ತರಬೇತಿ ನೀಡಲಾಯಿತು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಶಿವಮೂರ್ತಿ, ಡಿ.ಡಿಎಲ್.ಆರ್ ವಿರೂಪಾಕ್ಷ, ತಹಸೀಲ್ದಾರ್ ಶಿವಕುಮಾರ್ ಬಿರಾದರ್ ಸೇರಿದಂತೆ ಇನ್ನಿತರೆ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರವೇಶಾತಿಗಾಗಿ ಅರ್ಹತಾ ಪರೀಕ್ಷೆ

ಮಂಡ್ಯ: ಮೈಸೂರು ಸಿದ್ದಾರ್ಥನಗರದಲ್ಲಿರುವ ದೃಶ್ಯಕಲಾ ಕಾಲೇಜು (ಕಾವಾ) ಸಂಸ್ಥೆಯಲ್ಲಿ 2025–26ನೇ ಶೈಕ್ಷಣಿಕ ಸಾಲಿಗೆ ಪ್ರಥಮ ಬಿ.ವಿ.ಎ.ಪದವಿ ಪ್ರವೇಶಾತಿಗಾಗಿ ಬಾಕಿ ಉಳಿದಿರುವ ಸೀಟುಗಳಿಗೆ ಆನ್‌ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂ: 0821–2438931 ಅನ್ನು ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜೆಡಿಎಸ್ ಒಂದೆರಡು ಜಿಲ್ಲೆಗೆ ಸೀಮಿತವಾದ ಪಕ್ಷ



ಪತ್ರಿಕಾಗೋಷ್ಠಿಯಲ್ಲಿ ಸಿ.ಡಿ.ಗಂಗಾಧರ್ ಮಾತನಾಡಿದರು.

ಕೆಆರ್.ಪೇಟೆ, ಜು.5– ಜೆಡಿಎಸ್ ರಾಜ್ಯಾದ್ಯಂತ ಅಭ್ಯರ್ಥಿ ಹಾಕುವ ಶಕ್ತಿ ಇಲ್ಲದ ಪಕ್ಷವಾಗಿದೆ. ಇದು ಕೇವಲ ಒಂದೆರಡು ಜಿಲ್ಲೆಗೆ ಸೀಮಿತವಾದ ಪಕ್ಷವಾಗಿದೆ. ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಪಕ್ಷದೊಂದಿಗೆ ಮೈತ್ರಿ ಮಾಡಿಕೊಂಡು ಮಂಡ್ಯ ಲೋಕಸಭೆಯಲ್ಲಿ ಗೆದ್ದಿದ್ದಾರೆ. ಇಲ್ಲದಿದ್ದರೆ ಕುಮಾರಸ್ವಾಮಿ ಗೆಲ್ಲುತ್ತಿರಲಿಲ್ಲ ಎಂದು ಮಂಡ್ಯ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಹಾಗೂ ಮೈಷುಗರ್ ಸಕ್ಕರೆ ಕಾರ್ಖಾನೆಯ ಅಧ್ಯಕ್ಷರಾದ ಸಿ.ಡಿ.ಗಂಗಾಧರ್ ತಿಳಿಸಿದರು.

ಪಟ್ಟಣದ ಪ್ರವಾಸಿ ಮಂದಿರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಮೊನ್ನೆ ಕೆ.ಆರ್.ಪೇಟೆಯಲ್ಲಿ ನಡೆದ ಜೆಡಿಎಸ್ ಸಭೆಯಲ್ಲಿ ಜೆಡಿಎಸ್ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರು ನಮ್ಮ ಪಕ್ಷದ ನಾಯಕರು ಹಾಗೂ ರಾಜ್ಯದ ಜನಪ್ರಿಯ ಮುಖ್ಯಮಂತ್ರಿಗಳಾದ ಸಿದ್ದರಾಮಯ್ಯ ಅವರನ್ನು ಲಾಟರಿ ಸಿಎಂ ಹಾಗೂ ನಮ್ಮ ಜೆಡಿಎಸ್ ಪಕ್ಷಕ್ಕೆ ದ್ರೋಹ ಮಾಡಿ ಹೋಗಿದ್ದಾರೆ ಎಂದು ಹೇಳಿರುವುದರನ್ನು ಖಂಡಿಸಿ ವಾಗ್ದಾಳಿ ನಡೆಸಿದರು.

2006ರಲ್ಲಿ ಸಿದ್ದರಾಮಯ್ಯ ತಮ್ಮ ಲಕ್ಷಾಂತರ ಬೆಂಬಲಿಗರೊಂದಿಗೆ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಕಾಂಗ್ರೆಸ್ ಪಕ್ಷವು ಏಕಾಏಕಿ ಸಿದ್ದರಾಮಯ್ಯ ಅವರನ್ನು ಬಂದ ತಕ್ಷಣ ಸಿಎಂ ಮಾಡಿಲ್ಲ. ಅವರು ಸುಮಾರು 9 ವರ್ಷಗಳ ಕಾಲ ರಾಜ್ಯಾದ್ಯಂತ ಕಾಂಗ್ರೆಸ್ ನಾಯಕರೊಂದಿಗೆ ಪ್ರವಾಸ ಮಾಡಿ ಕಾಂಗ್ರೆಸ್ ಪಕ್ಷವನ್ನು ಶಕ್ತಿಯುತವಾಗಿ ಸಂಘಟನೆ ಮಾಡಿದರು. 2013ರಲ್ಲಿ ರಾಜ್ಯದ ಮುಖ್ಯಮಂತ್ರಿ ಆದರು. ಆದರೆ ನಿಖಿಲ್ ಈ ಬಗ್ಗೆ ಕನಿಷ್ಠ ಜ್ಞಾನವೇ ಇಲ್ಲದೇ ಜೆಡಿಎಸ್ ಪಕ್ಷಕ್ಕೆ ದ್ರೋಹ ಮಾಡಿ ಹೋದರು ಎಂದು ಆರೋಪ ಮಾಡುತ್ತಿರುವುದು ಸರಿಯಲ್ಲ. ಈ ಬಗ್ಗೆ ಅರಿತು ಮಾತನಾಡುವುದು ಒಳ್ಳೆಯದು ಎಂದರು.

ದೇವೇಗೌಡ, ಕುಮಾರಸ್ವಾಮಿ ಲಾಟರಿ ಪ್ರಧಾನಿ, ಸಿಎಂ ಅಲ್ಲವೇ?



ರಸ್ತೆ ಕಾಮಗಾರಿಗೆ ಶಾಸಕ ಕೆ.ಎಂ.ಉದಯ್ ಗುದ್ದಲಿ ಪೂಜೆ ನೆರವೇರಿಸಿದರು.

ಭಾರತೀನಗರ, ಜು.5– ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಹಾಗೂ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಲಾಟರಿ ಪ್ರಧಾನಿ ಹಾಗೂ ಲಾಟರಿ ಮುಖ್ಯಮಂತ್ರಿಯಾಗಿರ ಲಿಲ್ಲವೇ? ಎಂದು ಜೆಡಿಎಸ್ ರಾಜ್ಯ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾ ರಸ್ವಾಮಿ ಹೇಳಿಕೆಗೆ ಶಾಸಕ ಕೆ.ಎಂ. ಉದಯ್ ತಿರುಗೇಟು ನೀಡಿದರು.

ಇಲ್ಲಿಗೆ ಸಮೀಪದ ಹೊನ್ನಾಯಕನಹಳ್ಳಿ ಗ್ರಾಮದಲ್ಲಿ 75 ಲಕ್ಷ ರೂ. ವೆಚ್ಚದಲ್ಲಿ ಕಾವೇರಿ ನೀರಾವರಿ ನಿಗಮದಿಂದ ಹೊನ್ನಾಯಕನಹಳ್ಳಿ ಹೊಸಹಳ್ಳಿ ಗ್ರಾಮಗಳಿಗೆ ಸಂಪರ್ಕಿಸುವ ರಸ್ತೆ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನಿಖಿಲ್ ವಿರುದ್ಧ ಕಿಡಿಕಾರಿದರು.

ನಾನು ನಿಖಿಲ್ ದೃಷ್ಟಿಯಲ್ಲಿ ಲಾಟರಿ ಶಾಸಕನಾದರೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಲಾಟರಿ ಮುಖ್ಯಮಂತ್ರಿಯಾಗಿರಲಿಲ್ಲವೇ?, ಜೊತೆಗೆ ಅವರ ತಾತ ಎಚ್.ಡಿ.ದೇವೇಗೌಡರು ಪ್ರಧಾನಮಂತ್ರಿಯಾಗಿದ್ದು ಲಾಟರಿಯಂತೆ ಅಲ್ಲವೇ?. ನಿಖಿಲ್ ಮೊದಲು ಅದನ್ನು ಅರಿಯಲಿ. ನಾನು ಏನೆಂಬುದು ನನಗೆ ಗೊತ್ತಿದೆ. ಯಾರು ಯಾವ ರೀತಿ ಟೀಕಿಸಿದರೂ ನಾನು ಬಗ್ಗಲ್ಲ ಎಂದರು.

ಕ್ಷೇತ್ರಕ್ಕೆ 1350 ಕೋಟಿ ಹಣ ಬಿಡುಗಡೆ: ಶಾಸಕನಾಗಿ ನನ್ನ ಅವಧಿಯಲ್ಲಿ 1350 ಕೋಟಿ ರೂ. ಅನುದಾನವನ್ನು ಕ್ಷೇತ್ರಕ್ಕೆ ತಂದಿದ್ದೇನೆ. ಇದನ್ನು ಅರಗಿಸಿಕೊಳ್ಳಲು ಸಾಧ್ಯವಾಗದವರು ನನ್ನ ಬಗ್ಗೆ ಟೀಕೆ ಮಾಡುತ್ತಿದ್ದಾರೆ. ಯಾರು ಏನೇ ಮಾತನಾಡಿದರೂ ತಲೆಕೆಡಿಸಿಕೊಳ್ಳದೇ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತೇನೆ ಎಂದು ಹೇಳಿದರು.

ಇದೇ ವೇಳೆ ಎ.ಎಸ್.ರಾಜೀವ್, ಹರೀಶ್ ಬಾಬು, ಪಿ.ಸಂದರ್ಶ್, ಪ್ರಶಾಂತ್, ತಿಮ್ಮೇಗೌಡ, ಪ್ರಕಾಶ್ ಮತ್ತಿತರರಿದ್ದರು.

ಲೋಕ್ ಅದಾಲತ್ ಸದುಪಯೋಗಪಡಿಸಿಕೊಳ್ಳಿ

ಮಂಡ್ಯ: ಈ ಬಾರಿ ಲೋಕ್ ಅದಾಲತ್‌ನಲ್ಲಿ ಹೆಚ್ಚಿನ ಕಾನೂನು ಪ್ರಕರಣಗಳನ್ನು ವಿಲೇವಾರಿ ಮಾಡುವ ಗುರಿ ಹೊಂದಿದ್ದು, ಸಾರ್ವಜನಿಕರು ಲೋಕ್ ಅದಾಲತ್ ಅನ್ನು ಸದುಪಯೋಗ ಪಡಿಸಿಕೊಳ್ಳಿ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಆನುದ್ ಎಂ ಹೇಳಿದರು.

ಶನಿವಾರ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಚೇರಿಯಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಜುಲೈ 12 ರಂದು ರಾಷ್ಟ್ರೀಯ ಕಾನೂನು ಸೇವಾ ಪ್ರಾಧಿಕಾರ ಮತ್ತು ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ನಿರ್ದೇಶನದಂತೆ ಜಿಲ್ಲೆಯ ಎಲ್ಲಾ ತಾಲೂಕುಗಳ ನ್ಯಾಯಾಲಯದಲ್ಲಿ ರಾಷ್ಟ್ರೀಯ ಲೋಕ್ ಅದಾಲತ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದರು.

2 ಲೋಕ್ ಅದಾಲತ್ ಇದಾಗಿದ್ದು, ಬಾಕಿ ಇರುವ ಸಿವಿಲ್ ಪ್ರಕರಣಗಳು, ವಿಭಾಗದ ದಾವೆಗಳು, ಹಣಕಾಸು ವಸೂಲಾತಿ ದಾವೆಗಳು, ಮೋಟಾರು ವಾಹನಗಳ ಪ್ರಕರಣಗಳು, ಎಂಎಂಆರ್‌ಡಿ ಪ್ರಕರಣಗಳು, ಜೀವನಾಂಶ ಪ್ರಕರಣಗಳನ್ನು ಇತ್ಯರ್ಥ ಮಾಡಲಾಗುವುದು ಎಂದರು.

ಕೃಷಿ ಪತ್ತಿನ ಸಹಕಾರ ಸಂಘದಿಂದ ಕೃಷಿ ಸಚಿವರಿಗೆ ಅಭಿನಂದನೆ



ಮಂಡ್ಯ: 94 ವರ್ಷಗಳ ಬಳಿಕ ಇದೇ ಮೊದಲ ಬಾರಿಗೆ ಜೂನ್ ತಿಂಗಳಿನಲ್ಲಿ ಕೃಷ್ಣರಾಜ ಸಾಗರ ಭರ್ತಿಯಾದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯ ಸ್ವಾಮಿ ಅವರನ್ನು ಅಭಿನಂದಿಸಿದರು. ಮೈಸೂರು ತಾಲೂಕು ನಾಗನಹಳ್ಳಿ ಜಿಲ್ಲಾ ಕೃಷಿ ತರಬೇತಿ ಕೇಂದ್ರದಲ್ಲಿ ಕೃಷಿ ಸಚಿವರಾದ ಚಲುವರಾಯಸ್ವಾಮಿ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡು ಕೆಆರ್‌ಎಸ್ ಜೂನ್ ತಿಂಗಳಲ್ಲಿ ತುಂಬಿದ್ದರಿಂದ ಹರ್ಷ ಚಿತ್ತರಾಗಿ ಅಭಿನಂದಿಸಿದರು.

ಈ ವೇಳೆ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು ಈ ಹಿಂದೆಂದೂ ಕಾಣದ ರೀತಿಯಲ್ಲಿ ರಾಜ್ಯದಲ್ಲಿ ಮಳೆಯಾಗುತ್ತಿರುವುದರಿಂದ ಕೆಆರ್‌ಎಸ್ ಸೇರಿದಂತೆ ರಾಜ್ಯಾದ್ಯಂತ ಎಲ್ಲಾ ನದಿಗಳು, ತೊರೆಗಳು, ಕೆರೆಗಳು ನೀರು ತುಂಬಿ ಹರಿಯುತ್ತಿದೆ ಎಂದರು. ನಮ್ಮ ಸರ್ಕಾರದ ಅವದಿಯಲ್ಲಿ ಮಳೆ ಕಡಿಮೆ, ಬರಗಾಲ ಎಂದ ಬೊಬ್ಬೆ ಹೊಡೆಯುತ್ತಿದ್ದವರಿಗೆ ಈ ಬಾರಿ ಸುರಿಯುತ್ತಿರುವ ಮಳೆ ತಕ್ಕ ಉತ್ತರ ನೀಡುವುದರೊಂದಿಗೆ ಟೀಕಾಕಾರರ ಬಾಯಿ ಮುಚ್ಚಿಸಿದೆ ಎಂದು ಸಚಿವರು ಮಾರ್ಮಿಕವಾಗಿ ಉತ್ತರಿಸಿದರು.

ಕೃಷಿ ಪತ್ತಿನ ಸಹಕಾರ ಸಂಘದ ನಿರ್ದೇಶಕ ಬಿ.ರೇವಣ್ಣ ಸಚಿವರನ್ನು ಸನ್ಮಾನಿಸಿ ಮಾತನಾಡಿದರು. ಈ ವೇಳೆ ಮುಖಂಡರಾದ ಮನೋಜ್‌ಕುಮಾರ್, ಮಹೇಶ್, ಯುವ ಮುಖಂಡರು ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಮೂರನೇ ಪುಟದಿಂದ

ಬದುಕಿನಲ್ಲಿ ಸಮಸ್ಯೆಗಳು ಎದುರಾದಾಗ ವಿಚಲಿತರಾಗಬಾರದು

ದೊರಕುವಂತೆ ಮಾಡುವುದು ನನ್ನ ಜವಾಬ್ದಾರಿಯಾಗಿದ್ದು, ಅದನ್ನು ತಾರ್ಕಿಕ ಅಂತ್ಯಕ್ಕೆ ಕೊಂಡ್ಯೊಯ್ಯಬೇಕಿದೆ ಎಂದು ಅಭಿಪ್ರಾಯಪಟ್ಟರು.

ಸಮಸ್ಯೆಗೆ ಯಾವ ರೀತಿಯ ಪರಿಹಾರ ಕಂಡು ಕೊಳ್ಳಬೇಕು ಎಂಬುದನ್ನು ಓದುಗನೇ ನಿರ್ಧರಿಸಿಕೊಳ್ಳುವುದನ್ನು ಉತ್ತೇಜಿಸುವುದನ್ನು ನನ್ನ ಬರಹ ಹೊಂದಿದೆ. ನಾನು ಸೃಷ್ಟಿಸಿರುವ ಪಾತ್ರಗಳು ಎಲ್ಲವೂ ಆಶಾದಾಯಕವೇ ಆಗಿವೆ. ಪ್ರತಿಯೊಂದು ಪಾತ್ರವೂ ಭರವಸೆ ಮೂಡಿಸುತ್ತದೆ ಎಂದು ಬಾನು ಮುಷ್ತಾಕ್ ವಿವರಿಸಿದರು.

ಬೂಕರ್ ಪ್ರಶಸ್ತಿ ಪಡೆದ 'ಹಾರ್ಟ್ ಲ್ಯಾಂಪ್' ಪುಸ್ತಕದ ಅನುವಾದಕಿ ದೀಪಾ ಬಸ್ತಿ ಬಗ್ಗೆ ನನಗೆ ಅಪಾರ ನಂಬಿಕೆ ಇತ್ತು. ಪೂರ್ಣ ಹೃದಯವಂತಿಕೆಯ ದೀಪಾ ಬಸ್ತಿ ಅವರು ನನ್ನ ಪುಸ್ತಕ ಅನುವಾದ ಮಾಡುವ ಸಂದರ್ಭದಲ್ಲಿ ನಾನು ಮಧ್ಯ ಪ್ರವೇಶಿಸಲಿಲ್ಲ. ಜೊತೆಗೆ ಯಾವುದೇ ವಿಚಾರದ ಬಗ್ಗೆಯೂ ಪ್ರಶ್ನೆ ಮಾಡಲಿಲ್ಲ. ಯಾವುದಾದರೂ ವಿಚಾರದ ಬಗ್ಗೆ ಸಂಶಯವಿದ್ದರೆ ಅದನ್ನು ನಿವಾರಣೆ ಮಾಡಿಕೊಂಡು ಸ್ಪಷ್ಟನೆ ಪಡೆದುಕೊಳ್ಳುತ್ತಿದ್ದರು. ನಮ್ಮಲ್ಲಿ ಒಬ್ಬರಿಗೊಬ್ಬರು ಕಾಲೆಳೆಯುವುದಾಗಲೀ, ಆರೋಪ–ಪ್ರತ್ಯಾರೋಪ ಮಾಡಿಕೊಳ್ಳುವುದಾಗಲಿ ಮಾಡಲಿಲ್ಲ ಎಂದು ಬಾನು ಮುಷ್ತಾಕ್ ಸ್ಪಷ್ಟಪಡಿಸಿದರು.

ಭಾಷೆ ಬಗ್ಗೆ ನನಗೆ ಕೀಳರಿಮೆ ಇಲ್ಲ. ನನ್ನ ಮಾತೃ ಭಾಷೆ ಉರ್ದು. ಆದರೆ ಶಾಲೆಯ ಕಲಿಕೆಯಲ್ಲಿ ಮೊದಲ ಭಾಷೆ ಕನ್ನಡವಾದರೆ, ಎರಡನೆ ಭಾಷೆ ಇಂಗ್ಲಿಷ್ ಆಗಿದೆ. ನನ್ನಲ್ಲಿರುವ ಕನ್ನಡ ವ್ಯಾಕರಣ ಬದ್ಧ ಹಾಗೂ ಶುದ್ಧವಾಗಿದೆ. ಇಂತಹ ಸಂದರ್ಭದಲ್ಲಿ ಬೂಕರ್ ಪ್ರಶಸ್ತಿ ಬಂದಾಗ ವಿದೇಶಿ ಮಾಧ್ಯಮಗಳು ಇಂಗ್ಲಿಷ್‌ನಲ್ಲಿ ನನ್ನನ್ನು ಸಂದರ್ಶಿಸಲು ಮುಂದಾದವು ಎಂದರು.

ಇಂಗ್ಲಿಷ್ ಓದುವ ಹಾಗೂ ಮಾತನಾಡುವ ಪರಿಣಿತಿ ಇದ್ದರೂ ಅನುವಾದಕರನ್ನು ನೇಮಕ ಮಾಡಿ ಎಂದು ನಾನು ಹೇಳಿದೆ. ಆ ವೇಳೆ ಕನ್ನಡದಲ್ಲೇ ಲೀಲಾಜಾಲವಾಗಿ ಮಾತನಾಡಿದೆ. ಎಲ್ಲೇ ಆದರೂ ಕನ್ನಡ ಮಾತನಾಡಲು ನನಗೇನು ಮುಜುಗರವಿಲ್ಲ ಎಂದು ತಿಳಿಸಿದರು.

ಉರ್ದುನಲ್ಲಿ ಪುಸ್ತಕ ಬರೆಯುವಂತೆ ಒತ್ತಡ ಎದುರಾಯಿತು

ನಾನು ಮುಸ್ಲಿಂ ಸಮುದಾಯದವಳಾದ ಕಾರಣ ಕನ್ನಡ ಬಿಟ್ಟು ಉರ್ದುವಿನಲ್ಲಿ ಬರೆಯುವಂತೆ ಭಾರೀ ಒತ್ತಾಯ ಎದುರಾಯಿತು. ನಿಮ್ಮ ಮಾತೃ ಭಾಷೆ ಉರ್ದುವಾಗಿರುವ ಕಾರಣ ಉರ್ದುವಿನಲ್ಲೇ ನಿಮ್ಮ ಬರಹವಿರಲಿ ಎಂಬ ಆಗ್ರಹವೂ ಕೇಳಿ ಬಂದಿತು. ನನ್ನ ಮಾತೃ ಭಾಷೆ ಉರ್ದುವಾದರೂ ಉರ್ದುವಿನಲ್ಲಿ ಬರೆಯಲು ನನಗೆ ಬರುವುದಿಲ್ಲ. ಅದೇ ಉರ್ದುವಿನಲ್ಲಿ ಇರುವುದನ್ನು ಕನ್ನಡಕ್ಕೆ ಅನುವಾದ ಮಾಡುತ್ತೇನೆ. ಈ ಮೂಲಕ ಕನ್ನಡ ಭಾಷೆ ನನ್ನಲ್ಲಿ ಆಳವಾಗಿ ಬೇರೂರಿದೆ ಎಂದು ಮುಷ್ತಾಕ್ ಹೇಳಿದರು. ಒಬ್ಬ ಲೇಖಕಿಯಾಗಿ ಎಲ್ಲರನ್ನು ಮೆಚ್ಚಿಸಲು ಸಾಧ್ಯವಿಲ್ಲ. ನನ್ನ ಬರಹವನ್ನು ಕೆಲವರು ಮೆಚ್ಚುತ್ತಾರೆ, ಕೆಲವರು ಟೀಕಿಸುತ್ತಾರೆ. ಅದಕ್ಕೆಲ್ಲಾ ನಾನು ಧೃತಿಗೆಟ್ಟಿಲ್ಲ ಎಂದರು. ಕಥೆ, ಕವನ ಸೇರಿದಂತೆ ಯಾವುದೇ ಬರಹವನ್ನು ನಾನು ಶಹಬಾಷ್ ಗಿರಿ ಪಡೆಯಲು ಬರೆಯುವುದಿಲ್ಲ. ಬರವಣಿಗೆ ನನ್ನ ಹವ್ಯಾಸ. ದಿನ ನಿತ್ಯದ ಬದುಕಿನಲ್ಲಿ ಬರವಣಿಗೆ ನನ್ನಲ್ಲಿ ಹಾಸು ಹೊಕ್ಕಾಗಿದೆ ಎಂದರು. ನನ್ನ ಬರಹದ ಪಾತ್ರಗಳು ಸರ್ವ ಕಾಲಕ್ಕೂ ಅನ್ವಯಿಸುತ್ತದೆ. ನನ್ನ ಬರಹಕ್ಕೆ ಕಾಲ, ದೇಶ, ಭಾಷೆಯ ಪರಿಮಿತಿ ಇಲ್ಲ ಎಂದು ಬಾನು ಮುಷ್ತಾಕ್ ಸ್ಪಷ್ಟಪಡಿಸಿದರು.

ಈಗ ಹೆಣ್ಣು ಮಕ್ಕಳೇ ಗಂಡಾಳ್ವಿಕೆ ನಡೆಸುತ್ತಿದ್ದಾರೆ

“ ಈ ಮೊದಲು ಮನೆಯಲ್ಲಿ ಗಂಡಾಳ್ವಿಕೆ ಇತ್ತು. ಆದರೆ ಈಗ ಕೆಲವೆಡೆ ಹೆಣ್ಣು ಮಕ್ಕಳೇ ಗಂಡಾಳ್ವಿಕೆ ನಡೆಸುತ್ತಿದ್ದಾರೆ ಎಂದು ಬಾನು ಮುಷ್ತಾಕ್ ಹಾಸ್ಯ ಚಟಾಕಿ ಹಾರಿಸಿದರು. ಸಮಾಜದಲ್ಲಿ ಗಂಡಾಳ್ವಿಕೆ ಮಾತ್ರ ಇದೆ ಎಂಬ ವಾದ ಸುಳ್ಳು. ಈಗ ಬಹಳಷ್ಟು ಕಡೆ ಹೆಣ್ಣು ಮಕ್ಕಳೇ ಗಂಡಾಳ್ವಿಕೆ ನಡೆಸುತ್ತಿದ್ದಾರೆ. ಬಹಳಷ್ಟು ಪುರುಷರು ಸೌಮ್ಯತೆಯಿಂದ ಇರುತ್ತಾರೆ. **–ಬಾನು ಮುಷ್ತಾಕ್.**

ಕರ್ನಾಟಕದಲ್ಲಿ 80ರ ದಶಕದಲ್ಲಿ ದಲಿತ ಚಳವಳಿ, ಮಹಿಳಾ ಚಳವಳಿ, ಭಾಷಾ ಚಳವಳಿ, ಪರಿಸರ ಚಳವಳಿಗಳು ನಡೆದವು. ಹಾಗೆಯೇ ನವೋದಯ ಸಾಹಿತ್ಯದಲ್ಲಿ ದಲಿತ ಸಾಹಿತ್ಯ , ಸ್ತ್ರೀ ಸಾಹಿತ್ಯ ಹಾಗೂ ಮುಸ್ಲಿಂ ಸಂವೇದನಾ ಸಾಹಿತ್ಯ ರೂಪುಗೊಂಡವು. ಆದರೆ ಬಂಡಾಯ ಸಾಹಿತ್ಯ ನನ್ನ ಮೇಲೆ ಆಗಾಧವಾದ ಪರಿಣಾಮ ಬೀರಿತು ಎಂದು ಹೇಳಿದರು.

ನನ್ನ ಮಾತೃ ಭಾಷೆ ಉರ್ದುವಾದರೂ ನನ್ನ ಲೇಖನ, ಬರಹ ಎಲ್ಲವೂ ಕನ್ನಡದಲ್ಲೇ ಇರಬೇಕೆಂದು ನಿರ್ಧರಿಸಿದೆ. ಕನ್ನಡದಲ್ಲಿ, ಕನ್ನಡಿಗರಿಗಾಗಿ ಲೇಖನಗಳನ್ನು ಬರೆಯಲು ಆರಂಭಿಸಿದೆ ಎಂದು ತಿಳಿಸಿದರು.

ಕರ್ನಾಟಕದಲ್ಲಿ 70ರ ದಶಕದಲ್ಲಿ ಬ್ರಾಹ್ಮಣ ಪುರುಷ ಲೇಖಕರಲ್ಲಿ ಅಭಿವ್ಯಕ್ತಿ ಸ್ವಾತಂತ್ರವಿತ್ತು. ಬ್ರಾಹ್ಮಣ ಸ್ತ್ರೀಯರಿಗೂ ಅಲ್ಲಿ ಅವಕಾಶವಿರಲಿಲ್ಲ. ಯಾವುದೇ ವಕ್ತಿತ್ವವನ್ನು ವರ್ಣರಂಜಿತವಾಗಿ ವರ್ಣಿಸುವ ಹಾಗೂ ನಕರಾತ್ಮಕವಾಗಿ ಬಿಂಬಿಸುವ ಸ್ವಾತಂತ್ರ್ಯ ಅವರಿಗಿತ್ತು. ಈ ವಿಚಾರ ನನ್ನ ಮೇಲೆ ಪರಿಣಾಮ ಬೀರಿದಾಗ ವಸ್ತುಸ್ಥಿತಿಯ ನೆಲೆಗಟ್ಟಿನಲ್ಲಿ ನೈಜತೆಯನ್ನು ಬಿಂಬಿಸುವಂತೆ ಬರೆಯಲು ಆರಂಭಿಸಿದೆ. ಈ ಮೂಲಕ ಬ್ರಾಹ್ಮಣ ಲೇಖಕರ ಅಭಿವ್ಯಕ್ತಿತ್ವವನ್ನು ತೆರೆಮರೆಗೆ ಸರಿಸಲು ಬರೆಯುತ್ತಾ ಹೋದೆ ಎಂದು ತಮ್ಮ ಬರವಣಿಗೆಯ ಹಿನ್ನೆಲೆಯನ್ನು ವಿವರಿಸಿದರು.

ಮುಸ್ಲಿಂ ಸಮುದಾಯದ ಒಳ ಹಾಗೂ ಹೊರಗಿನ ಸ್ಥಿತಿಗತಿಯನ್ನು ಕೂಡ ಬರಹದಲ್ಲಿ ವಿವರಿಸುತ್ತಾ ಹೋದೆ. ಇಂತಹ ಹೊಸ ಪ್ರಯೋಗವನ್ನು ಓದುಗರು ಅಪ್ಪಿ–ಒಪ್ಪಿದರು. ಈ ಮೂಲಕ ನನ್ನ ಲೇಖನ ಭಾಷೆಯನ್ನು ಶ್ರೀಮಂತಗೊಳಿಸಿದರು ಎಂದು ಬಾನು ಮುಷ್ತಾಕ್ ತಿಳಿಸಿದರು.

ಲಂಡನ್‌ನಂತೆ ಕರುನಾಡ ಜನರು ಪುಸ್ತಕ ಪ್ರೇಮ ಬೆಳೆಸಿಕೊಳ್ಳಬೇಕು!

ಲಂಡನ್ ಜನರಲ್ಲಿರುವ ಪುಸ್ತಕ ಪ್ರೇಮ ಕರ್ನಾಟಕದ ಜನರಲ್ಲೂ ಬರಬೇಕು ಎಂದು ಬಾನು ಮುಷ್ತಾಕ್ ಸಲಹೆ ನೀಡಿದರು.

ಬೂಕರ್ ಪ್ರಶಸ್ತಿ ಪಡೆಯಲು ನಾನು ಲಂಡನ್‌ಗೆ ಹೋದ ಸಂದರ್ಭದಲ್ಲಿ ಸಾಹಿತ್ಯ ಸಂಭ್ರಮ ನಡೆಯುತ್ತಿದ್ದ ಲಂಡನ್ ಬಳಿಯ ಹೇಗ್ ಎಂಬ ಸಣ್ಣ ಹಳ್ಳಿಗೆ ನನ್ನನ್ನು ಕರೆದುಕೊಂಡು ಹೋದರು. 300 ವರ್ಷಗಳ ಇತಿಹಾಸವಿರುವ ಆ ಹಳ್ಳಿಯಲ್ಲಿ ಪ್ರತಿ ವರ್ಷ ಸಾಹಿತ್ಯ ಸಂಭ್ರಮ ನಡೆಯಲಿದ್ದು, ಪ್ರತಿ ದಿನ 25 ಸಾವಿರಕ್ಕೂ ಹೆಚ್ಚು ಪುಸ್ತಕ ಪ್ರೇಮಿಗಳು ಸೇರುತ್ತಾರೆ ಎಂದರು. 4 ಅಂತಸ್ತಿನ ಕಟ್ಟಡಗಳಲ್ಲಿ 40ಕ್ಕೂ ಹೆಚ್ಚಿನ ಪುಸ್ತಕ ಮಳಿಗೆಗಳಿದ್ದವು. ಪುಸ್ತಕ ಸಂಸ್ಕೃತಿಯನ್ನು ಮೈಗೂಡಿಸಿಕೊಂಡಿರುವ ಅಲ್ಲಿನ ಜನರು ದಾಖಲೆ ಪ್ರಮಾಣದಲ್ಲಿ ಪುಸ್ತಕ ಖರೀದಿ ಮಾಡುತ್ತಾರೆ. ಇಂತಹ ಪುಸ್ತಕ ಪ್ರೇಮ ನಮ್ಮ ಕರುನಾಡಿನಲ್ಲಿ ಕೂಡ ಬರಬೇಕು ಎಂದು ತಿಳಿಸಿದರು.

ನಾನು ಟ್ಯಾಕ್ಸಿಯಲ್ಲಿ ಹೋದ ಸಂದರ್ಭದಲ್ಲಿ ಅಲ್ಲಿನ ವಾತಾವರಣ ನೋಡಿದಾಗ ಹಾಸನದ ಸಕಲೇಶಪುರದಲ್ಲಿದ್ದೇನೆ ಎಂಬಂತೆ ಭಾಸವಾಯಿತು. ಲಂಡನ್‌ನಲ್ಲಿರುವಂತೆ ಮೈಸೂರಿನಲ್ಲಿ ಅರಮನೆ, ವಿಶಾಲ ರಸ್ತೆಗಳು ಸೇರಿದಂತೆ ಪಾರಂಪರಿಕ ತಾಣಗಳಿರುವುದನ್ನು ನೋಡಿ ಸಂತೋಷ ಪಟ್ಟೆ ಎಂದು ಮುಷ್ತಾಕ್ ತಿಳಿಸಿದರು.

ಬಂಡಾಯ ಸಾಹಿತ್ಯದ ಸ್ಫೂರ್ತಿ ನನ್ನ ಪ್ರಾಣಕ್ಕೆ ಸಂಚಕಾರ ತಂದಿತ್ತು: ಬಂಡಾಯ ಸಾಹಿತ್ಯದ ಸ್ಫೂರ್ತಿಯಿಂದ ಬರೆದಿರುವ ನನ್ನ ಬರಹದಿಂದ ನನ್ನ ಪ್ರಾಣಕ್ಕೆ ಸಂಚಕಾರ ಬಂದಿತ್ತು ಎಂದು ಬಾನು ಮುಷ್ತಾಕ್ ಆತಂಕದಿಂದಲೇ ನುಡಿದರು.

ನನ್ನ ಬರಹದಲ್ಲಿ ಬಹಳಷ್ಟು ಪಾತ್ರಗಳು ನೈಜವಾಗಿದೆ. ಸಮುದಾಯದ ಒಳ ಮತ್ತು ಹೊರಗಿನ ಸ್ಥಿತಿ ಗತಿಯನ್ನು ಬಿಂಬಿಸುತ್ತದೆ. ಇಂತಹ ಸಂದರ್ಭದಲ್ಲಿ ನನ್ನ ಕಚೇರಿಗೆ ವ್ಯಕ್ತಿಯೊಬ್ಬ ಚಾಕು ಹಿಡಿದು ಬಂದು ನಿಮ್ಮನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದ ಎಂದು ತಮಗೆ ಎದುರಾದ ಪ್ರಾಣ ಬೆದರಿಕೆಯ ಘಟನೆಯನ್ನು ವಿವರಿಸಿದರು.

ನಾನು ಇನ್ನು ಮುಂದೆ ಯಾವುದೇ ಕಥೆ, ಕವನ, ಲೇಖನಗಳನ್ನು ಬರೆಯುವುದಿಲ್ಲ ಎಂದು ವ್ಯಕ್ತಿಯೊಬ್ಬ ನನ್ನ ಹೆಸರಿನಲ್ಲಿ ಅಫಿಡವಿಟ್ ಮಾಡಿಸಿಕೊಂಡು ಬಂದಿದ್ದನು. ಈ ಅಫಿಡವಿಟ್‌ಗೆ ಸಹಿ ಹಾಕುವಂತೆ ಒತ್ತಾಯ ಮಾಡಿದನು. ತರುವಾಯ ಆತನನ್ನು ಸಮಾಧಾನಪಡಿಸಿ ಕಳುಹಿಸಿದೆ ಎಂದು ತಿಳಿಸಿದರು.

ನಾನು ಮುಸ್ಲಿಂ ಧರ್ಮದ ಮಹಿಳೆಯಾಗಿದ್ದು, ನನ್ನ ಧರ್ಮದವರು ನನ್ನ ವಿರುದ್ಧ ಕೆಲವು ವಿಚಾರವಾಗಿ ಫರ್ಮಾನು ಹೊರಡಿಸಿದ್ದರು. ಆದರೂ ಇಂತಹ ಎಲ್ಲಾ ಸವಾಲುಗಳನ್ನು ಎದುರಿಸಿ ಇಲ್ಲಿ ತನಕ ಸಾಹಿತ್ಯ ಕೃಷಿ ಮಾಡುತ್ತಾ ಬಂದಿದ್ದೇನೆ. ನಾನು ಬರೆದಿರುವ 15 ಕಥೆಗಳು ಶೀಘ್ರದಲ್ಲೆ ಇಂಗ್ಲಿಷ್‌ಗೆ ಅನುವಾದವಾಗುತ್ತಿವೆ. ಕಥಾ ಸಂಕಲನದ 7 ನೇ ಆವೃತ್ತಿ ಪುನರ್ ಪ್ರಕಟವಾಗುತ್ತಿದೆ. ಇದಲ್ಲದೆ ನನ್ನ ಆತ್ಮಕಥೆ ಕೂಡ ಶೀಘ್ರದಲ್ಲೇ ಪ್ರಕಟವಾಗುತ್ತಿದೆ ಎಂದು ಬಾನು ಮುಷ್ತಾಕ್ ಮಾಹಿತಿ ನೀಡಿದರು. ಸಂವಾದದಲ್ಲಿ ಲೇಖಕ ಭರತ್ ದಿವಾಕರ್ ಅವರು ಬಾನು ಮುಷ್ತಾಕ್ ಅವರಿಗೆ ಪ್ರಶ್ನೆಗಳನ್ನು ಕೇಳಿದರು. ಈ ವೇಳೆ ಬಾನು ಮುಷ್ತಾಕ್ ಅವರ ಪುಸ್ತಕ 'ಹಾರ್ಟ್ ಲ್ಯಾಂಪ್' ಅನುವಾದಕಿ ದೀಪಾ ಬಸ್ತಿ ಹಾಜರಿದ್ದರು.

ಇತರ ಉದ್ಯಮಗಳಿಗಿಂತ ಪುಸ್ತಕ ಉದ್ಯಮ ಭಿನ್ನ



ಪ್ರಕಾಶಕರೂ ಆದ ಲೇಖಕ ಚಿರಾಗ್ ಠಕ್ಕರ್, ಕಥೆಗಾರ ಕನಿಷ್ಕ್ ಗುಪ್ತಾ, ಲೇಖಕಿ ಮಿತಾ ಕಪೂರ್ ಹಾಗೂ ಕಾದಂಬರಿಗಾರ್ತಿ ಅನಿತಾ ನಾಯರ್ 'ಪುಸ್ತಕಗಳ ವಿನ್ಯಾಸ, ಆಯ್ಕೆ ಮತ್ತು ಮಾರಾಟ' ಕುರಿತು ಸಂವಾದ ನಡೆಸಿದರು.

ಮೈಸೂರು, ಜು.5(ಎಂಕೆ)– ಇತರ ಉದ್ಯಮಗಳಿಗಿಂತ ಪುಸ್ತಕ ಉದ್ಯಮ ಭಿನ್ನವಾಗಿದೆ. ಸಮಾಜದಲ್ಲಿ ಬದಲಾವಣೆ ತರುವ ಪುಸ್ತಕಗಳು ಬರಹಗಾರರು, ಪ್ರಕಾಶಕರು ಹಾಗೂ ಮಾರಾಟಗಾರರಲ್ಲಿ ಸಮುದಾಯದ ಒಡನಾಟ ಹೆಚ್ಚಿಸಲಿದ್ದು, ಪುಸ್ತಕಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಬೇಕಾದರೆ ಮೊದಲು ಸ್ಥಳಿಯ ವಸ್ತುಸ್ಥಿತಿಯನ್ನು ಗಮನಿಸಿ, ಬೆಲೆ ನಿಗದಿಪಡಿಸುವುದು ಅವಶ್ಯವಾಗಿದೆ ಎಂದು ಸಿಯಾಹಿ (Siyahi) ಸಾಹಿತ್ಯ ಸಲಹಾ ಸಂಸ್ಥೆಯ ಸ್ಥಾಪಕಿಯೂ ಆದ ಲೇಖಕಿ ಮಿತಾ ಕಪೂರ್, ಕಾದಂಬರಿಗಾರ್ತಿ ಅನಿತಾ ನಾಯರ್, ಕಥೆಗಾರ ಕನಿಷ್ಕ್ ಗುಪ್ತಾ ಹಾಗೂ ಪ್ರಕಾಶಕರೂ ಆದ ಲೇಖಕ ಚಿರಾಗ್ ಠಕ್ಕರ್ ಅಭಿಪ್ರಾಯಿಸಿದರು.

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ 'ಪುಸ್ತಕಗಳ ವಿನ್ಯಾಸ, ಆಯ್ಕೆ ಮತ್ತು ಮಾರಾಟ' ಕುರಿತ ಸಂವಾದ ಕಾರ್ಯಕ್ರಮದಲ್ಲಿ ಪುಸ್ತಕೋದ್ಯಮ ಇತರೆ ಉದ್ಯಮಗಳಿಗಿಂತ ವಿಶೇಷವಾದುದಾಗಿದೆ. ಸಮಾಜಮುಖಿ ಬರವಣಿಗೆಗಳಿಗೆ ಅವಕಾಶ ನೀಡುವ ದೃಷ್ಟಿಯಲ್ಲಿ ಪ್ರಕಟಿಸುವಾಗ ಪುಸ್ತಕಗಳ ಆಯ್ಕೆ, ವಿಷಯವಸ್ತು, ವಿನ್ಯಾಸ ಹಾಗೂ ಮಾರುಕಟ್ಟೆ ಗಮನಿಸುವ ಅಗತ್ಯವಿರಲಿದೆ ಎಂದು ಲೇಖಕಿ ಮಿತಾ ಕಪೂರ್ ತಿಳಿಸಿದರು.

ಲೇಖಕರು, ಪ್ರಕಾಶಕರು ಸಮಾಜ ದಲ್ಲಿ ಬದಲಾವಣೆ ತರುವ ಪುಸ್ತಕ ಗಳನ್ನು ಮಾರಾಟಬೇಕೇ ಹೊರತು ತಮ್ಮ ತನವಲ್ಲ. ನಿಮ್ಮ ಪುಸ್ತಕಗಳು ನಿಮ್ಮೊಳಗಿನ ಆಲೋಚನೆಗಳನ್ನು ವ್ಯಕ್ತಪಡಿಸಲಿವೆ. ಹಾಗೆಯೇ ಪುಸ್ತಕ ಪ್ರಕಟಿಸುವ ಮುನ್ನ ಸಾಮಾಜಿಕ ಜಾಲತಾಣಗಳಲ್ಲಿ ಓದುಗರ ಅಭಿಪ್ರಾಯ ಸಂಗ್ರಹಿಸಿದರೆ, ಪುಸ್ತಕಕ್ಕೆ ಪ್ರಚಾರದ ಜೊತೆಗೆ ಮಾರು ಕಟ್ಟೆಯಲ್ಲಿ ವಸ್ತುಸ್ಥಿತಿಯೂ ತಿಳಿಯಬಹುದಾಗಿದೆ. ಅಲ್ಲದೆ ಸಮುದಾಯದೊಂದಿಗೆ ಉತ್ತಮ ಒಡನಾಟವನ್ನು ಇಟ್ಟುಕೊಂಡಿರುವುದು ಅತ್ಯವಶ್ಯವಾಗಿದೆ ಎಂದರು.

ಕಾದಂಬರಿಗಾರ್ತಿ ಅನಿತಾ ನಾಯರ್ ಮಾತನಾಡಿ, ಬೇರೆ ದೇಶಗಳಿಗೆ ಹೋಲಿಕೆ ಮಾಡಿ ನೋಡಿದರೆ, ಭಾರತದಲ್ಲಿ ಪುಸ್ತಕಗಳ ಬೆಲೆ ಕಡಿಮೆ. ಹಾಗಾಗಿ ಬರಹಗಾರರು ತಮ್ಮ ಪುಸ್ತಕ ಪ್ರಕಟಿಸುವ ಮುನ್ನ ಅಭಿಪ್ರಾಯ ಸಂಗ್ರಹಿಸಬಹುದು. ಉತ್ತಮ ಪುಸ್ತಕಗಳಿಗೆ ಪ್ರಚಾರದ ಅವಶ್ಯವಿಲ್ಲ. ಏಕೆಂದರೆ ಆ ಪುಸ್ತಕಗಳೇ ಮಾರುಕಟ್ಟೆಯಲ್ಲಿ ಮಾತನಾಡಲಿವೆ. ಅದೇ ರೀತಿ ದೇಶದೊಳಗೆ ಪುಸ್ತಕ ಗಳನ್ನು ಮಾರಾಟ ಮಾಡಲು ಏಜೆಂಟ್ ಗಳ ಅಗತ್ಯವಿಲ್ಲ. ಆಕಸ್ಮಾತ್ ಬೇರೆ ದೇಶ ಗಳಲ್ಲಿ ಮಾರಾಟಕ್ಕೆ ಮುಂದಾದರೆ ಏಜೆಂಟ್ ಅಗತ್ಯವಿರಲಿದೆ. ಮುಖ್ಯವಾಗಿ ಬರಹಗಾರರು ಮತ್ತು ಪ್ರಕಾಶಕರ ನಡುವೆ ಉತ್ತಮ ಒಡನಾಟ ಇರಬೇಕು ಎಂದು ತಿಳಿಸಿದರು.

ಭಾಷಾಂತರಗೊಂಡ ಪುಸ್ತಕಗಳಿಗೂ ಮಹತ್ವವಿದೆ: ಕಥೆಗಾರ ಕನಿಷ್ಕ್ ಗುಪ್ತಾ ಮಾತನಾಡಿ, ಬೇರೆ ಬೇರೆ ಭಾಷೆಗಳಿಂದ ಭಾಷಾಂತರಗೊಂಡ ಕೃತಿಗಳಿಗೂ ಮಹತ್ವವಿದೆ. ಅದಕ್ಕೆ ತಾಜಾ ಉದಾಹರಣೆ ಎಂದರೆ ಬೂಕರ್ ಪ್ರಶಸ್ತಿ ಗೆದ್ದ ಹಾರ್ಟ್ ಲ್ಯಾಂಪ್ ಕೃತಿಯಾಗಿದ್ದು, ದೇಶ–ವಿದೇಶಗಳಲ್ಲಿ ಈ ಕೃತಿಯ ಮಾರಾಟ ಹೆಚ್ಚಾಗಿದೆ. ಭಾಷಾಂತರದಲ್ಲಿ ಮುಖ್ಯವಾಗಿ ಮೂಲ ಕೃತಿಗೆ ಧಕ್ಕೆಯಾಗದಂತೆ ನೋಡಿಕೊಳ್ಳಬೇಕು ಎಂದರು. ಪ್ರಕಾಶಕರೂ ಆದ ಲೇಖಕ ಚಿರಾಗ್ ಠಕ್ಕರ್ ಸಂವಾದ ಕಾರ್ಯಕ್ರಮ ನಡೆಸಿಕೊಟ್ಟರು.

ಮೈಸೂರು ಸಾಹಿತ್ಯ ಸಂಭ್ರಮ ಕಲರವ

ಸಂಭ್ರಮದಲ್ಲಿ ಭಾರತದ ಹಲವು ರಾಜ್ಯ, ವಿದೇಶದ ಲೇಖಕರು, ಪುಸ್ತಕ ಪ್ರೇಮಿಗಳು ನೂರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದಾರೆ. ಸಿನಿಮಾ, ಟಿವಿ, ಮೊಬೈಲ್‌ನಂತಹ ಆಧುನಿಕ ಮನೋರಂಜನೆಯ ಪ್ರಭಾವದಲ್ಲಿ ಪುಸ್ತಕ ಓದು ಮರೆಯಾಗುತ್ತಿದೆ ಎಂದು ಮೂಗು ಮುರಿಯುತ್ತಾ ಟೀಕೆ ಮಾಡುವವರಿಗೆ ಮೈಸೂರು ಸಾಹಿತ್ಯ ಸಂಭ್ರಮದ ಯಶಸ್ವಿ ತಕ್ಕ ಉತ್ತರ ನೀಡಿದೆ ಎನ್ನಬಹುದು. ಈ ವೇಳೆ ಆಯೋಜಿಸಿದ್ದ ಪುಸ್ತಕ ಪ್ರದರ್ಶನ, ಮಾರಾಟದಲ್ಲಿ ಬಹಳಷ್ಟು ಪುಸ್ತಕ ಪ್ರೇಮಿಗಳು ಪುಸ್ತಕ ಖರೀದಿಸಿದರು. ಇಂದು ನಡೆದ ಉದ್ಘಾಟನಾ ಕಾರ್ಯ ಕ್ರಮದ ವೇದಿಕೆಯಲ್ಲಿ ಬೂಕರ್ ಪ್ರಶಸ್ತಿ ಪುರಸ್ಕೃತ ಸಾಹಿತಿ ಬಾನು ಮುಷ್ತಾಕ್, ಹಾರ್ಟ್ ಲ್ಯಾಂಪ್ ಪುಸ್ತಕ ಅನುವಾದಕಿ ದೀಪಾ ಬಸ್ತಿ, ಡಿಆರ್ ಡಿಒ ನಿವೃತ್ತ ವಿಜ್ಞಾನಿ ಡಾ.ಪ್ರಹಲ್ಲಾದ ರಾಮರಾವ್, ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ಶುಭಾ ಅರಸ್, ಉಪಾಧ್ಯಕ್ಷ ಸ್ಯಾವ್ ಚೆರಿಯನ್ ಉಪಸ್ಥಿತರಿದ್ದರು.

ದ್ವಿಭಾಷಾ ಸೂತ್ರ ಜಾರಿಗೆ ಯತ್ನ

ಆರಂಭದಲ್ಲಿ ಮಾತನಾಡಿ, ಕುವೆಂಪು ಅವರು ದ್ವಿಭಾಷಾ ಸೂತ್ರ ರಾಜ್ಯದಲ್ಲಿರಬೇಕು ಎಂದು ಪ್ರತಿಪಾದಿಸಿದ್ದರು. ಅದು ಸರಿಯಾದುದು ಎಂದು ಹೇಳಿದ್ದರು. ಇದೇ ವಿಚಾರವನ್ನು ಸಿದ್ದರಾಮಯ್ಯ ಪ್ರಸ್ತಾಪಿಸಿ, ಸಚಿವ ಸಂಪುಟವನ್ನು ಒಪ್ಪಿಸಿ ದ್ವಿಭಾಷಾ ಸೂತ್ರ ತರಲು ಪ್ರಯತ್ನಿಸಲಾಗುವುದು ಎಂದರು.


ಕುಂಕುಮ ಏಕೆ?: ನಾನು ದೇವಸ್ಥಾನಕ್ಕೆ ಹೋದಾಗ ಕುಂಕುಮ ಇಡುತ್ತಾರೆ. ಕುಂಕುಮ ಇಟ್ಟಿದ್ದಕ್ಕೂ ಕಥೆ ಕಟ್ಟುತ್ತಾರೆ. ಗ್ರಾಮೀಣ ಭಾಗಕ್ಕೆ ಹೋದಾಗ ದೇವಸ್ಥಾನಗಳಿಗೆ ಹೋಗದಿದ್ದರೆ ನಮ್ಮ ಬಗ್ಗೆ ಬೇರೆಯದೇ ರೀತಿ ಕಥೆ ಕಟ್ಟುತ್ತಾರೆ. ಅದನ್ನು ಜನರೂ ನಂಬುವುದರಿಂದ ಇವನಿಗೆ ಎಷ್ಟು ಅಹಂಕಾರ. ವೋಟು ಹಾಕುವುದು ಬೇಡ ಎಂದು ನಿರ್ಧರಿಸುತ್ತಾರೆ ಎಂದರು.

ಐದೇ ನಿಮಿಷದಲ್ಲಿ ಒಪ್ಪಿಗೆ ಕೊಡಿಸುತ್ತೇನೆ!

ಈ ಎಲ್ಲಾ ಬೆಳವಣಿಗೆಗಳನ್ನು ಜನರು ಗಮನಿಸುತ್ತಿದ್ದಾರೆ ಎಂದರು.

ಆರ್‌ಎಸ್‌ಎಸ್ ಬಗ್ಗೆ ಸಚಿವ ಪ್ರಿಯಾಂಕ್ ಖರ್ಗೆ ಹೇಳಿಕೆ ಬಗ್ಗೆ ಪ್ರತಿಕ್ರಿಯಿಸಿದ ಕುಮಾರಸ್ವಾಮಿ, ಆರ್‌ಎಸ್‌ಎಸ್ ಬಂದ್ ಮಾಡುವುದಿರಲಿ, ಈಗ ಕಾಂಗ್ರೆಸ್ ಎಲ್ಲಾ ಕಡೆ ಬಂದ್ ಆಗುತ್ತಿದೆ. ಜನರೇ ಬಹುತೇಕ ಕಾಂಗ್ರೆಸ್ ಅನ್ನು ಬ್ಯಾನ್ ಮಾಡುತ್ತಿದ್ದಾರೆ ಎಂದರು. ಕೇವಲ ಸಂಸದರ ಅನುದಾನ ತಂದಿದ್ದಾರೆ ಎಂಬ ಸಚಿವ ಚಲುವರಾಯಸ್ವಾಮಿ ಹೇಳಿಕೆಗೆ ಪ್ರತಿಕ್ರಿಯೆ ನೀಡಿದ ಹೆಚ್‌ಡಿಕೆ, ನಾನು ಕೇವಲ ಸಂಸದರ ಅನುದಾನ ತಂದಿಲ್ಲ. ವಿಶೇಷ ಅನುದಾನ ತಂದು ಹಲವು ಯೋಜನೆಗಳ ಅನುಷ್ಠಾನ ಮಾಡುತ್ತಿದ್ದೇನೆ. ಮಾಹಿತಿ ಇಲ್ಲದೇ ಮಾತನಾಡಬಾರದು ಎಂದು ತಿರುಗೇಟು ನೀಡಿದರು. ದಿಶಾ ಸಭೆಗೆ ಶಾಸಕ ಜಿ.ಟಿ.ದೇವೇಗೌಡರು ಗೈರು ಹಾಜರಾದ ಬಗ್ಗೆ 'ಈ ಕುರಿತು ಈಗ ಚರ್ಚೆ ಬೇಡ ಬಿಡಿ' ಎಂದಷ್ಟೇ ಪ್ರತಿಕ್ರಿಯಿಸಿದರು.

ನೇಮಕ



ಮೈಸೂರು: ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭಾ ಮಹಿಳಾ ವಿಭಾಗದ ಸದಸ್ಯರನ್ನಾಗಿ ಎಂ.ಜಿ.ಪ್ರಗತಿ ಅವರನ್ನು ನೇಮಕ ಮಾಡಲಾಗಿದೆ ಎಂದು ರಾಜಾಧ್ಯಕ್ಷೆ ಬಿ.ಮುಕ್ತಾಂಬ ತಿಳಿಸಿದ್ದಾರೆ.

ಬಾನು ಮುಷ್ತಾಕ್ ಮತ್ತು ನನ್ನನ್ನು ಧಾರ್ಮಿಕತೆಯ ಭಾವದಿಂದ ಗುರುತಿಸುತ್ತಾರೆ

ಅನುವಾದಕಿ ದೀಪಾ ಬಸ್ತಿ ಅಸಮಾಧಾನ

ಮೈಸೂರು, ಜು.5(ಬಿಎಲ್‌ಯು)- ಎದೆಯ ಹಣತೆ ಪುಸ್ತಕ ಬರೆದ ಬಾನು ಮುಷ್ತಾಕ್ ಹಾಗೂ ಈ ಪುಸ್ತಕವನ್ನು ಭಾಷಾಂತರ ಮಾಡಿದ ನನ್ನನ್ನು ಧಾರ್ಮಿಕತೆಯ ಭಾವದಿಂದ ಕೆಲವರು ಗುರುತಿಸುತ್ತಾರೆ ಎಂದು ದೀಪಾ ಬಸ್ತಿ ಬೇಸರಿಸಿದ್ದಾರೆ.



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಮಾತನಾಡಿದ ಅವರು, ಬಾನು ಮುಷ್ತಾಕ್ ಅವರಿಗೆ ಬೂಕರ್ ಪ್ರಶಸ್ತಿ ಬಂದ ನಂತರ ಕೆಲವರು, ಮುಸ್ಲಿಂ ಲೇಖಕಿ, ಹಿಂದೂ ಅನುವಾದಕಿ ಎಂದು ವಿಂಗಡಿಸಿ ಹೇಳಿದರು.

ನಾನು 'ಎದೆಯ ಹಣತೆ' ಪುಸ್ತಕವನ್ನು ಭಾಷಾಂತರ ಮಾಡುವ ಸಂದರ್ಭದಲ್ಲಿ ಬಾನು ಮುಷ್ತಾಕ್, ನನಗೆ ಪೂರ್ಣ ಸ್ವಾತಂತ್ರ್ಯ ನೀಡಿದ್ದರು. ಯಾವುದಾದರೂ ವಿಚಾರಕ್ಕೆ ಸಂಬಂಧಿಸಿದಂತೆ ಸಂಶಯ ಬಂದರೆ ಅದನ್ನು ಪರಿಹರಿಸುತ್ತಿದ್ದರು. ಬಾನು ಮುಷ್ತಾಕ್ ಹಾಗೂ ನನ್ನ ನಡುವೆ ನಂಬಿಕೆ ಹಾಗೂ ಬಾಂಧವ್ಯ ಇತ್ತು. ಆದರೆ ಕೆಲವರು ನಮ್ಮಿಬ್ಬರನ್ನು ಧಾರ್ಮಿಕತೆಯ ಭಾವದಿಂದ ಗುರುತಿಸಿದರು ಎಂದು ದೀಪಾ ಬಸ್ತಿ ಅಸಮಾಧಾನ ವ್ಯಕ್ತಪಡಿಸಿದರು.

ಭಾರತ ಇಂದು ಬಾಹ್ಯ, ಆಂತರಿಕವಾಗಿ ಸುಭದ್ರವಾಗಿದೆ

ಡಿಆರ್‌ಡಿಒ ನಿವೃತ್ತ ವಿಜ್ಞಾನಿ ಡಾ. ಪ್ರಹ್ಲಾದ ರಾಮರಾವ್ ಅಭಿಮತ

ಮೈಸೂರು, ಜು.5(ಬಿಎಲ್‌ಯು)- ಬಾಹ್ಯ ಹಾಗೂ ಆಂತರಿಕವಾಗಿ ದೇಶ ಈಗ ಸುಭದ್ರವಾಗಿರುವುದರಿಂದ ಇಂತಹ ಸಾಹಿತ್ಯ ಸಂಭ್ರಮದ ಚಟುವಟಿಕೆಗಳು ನಡೆಯುತ್ತಿವೆ ಎಂದು ಡಿಆರ್‌ಡಿಒ ನಿವೃತ್ತ ವಿಜ್ಞಾನಿ ಡಾ. ಪ್ರಹ್ಲಾದ ರಾಮ ರಾವ್ ಅಭಿಪ್ರಾಯಪಟ್ಟರು.



ಮೈಸೂರಿನ ಸದರನ್ ಸ್ಟಾರ್ ಹೋಟೆಲ್‌ನಲ್ಲಿ ಇಂದು ನಡೆದ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಮ್ಮ ಯೋಧರು ಹದ್ದಿನ ಕಣ್ಣಿಟ್ಟು ಗಡಿ ಕಾಯುತ್ತಿದ್ದಾರೆ. ಇದರಿಂದ ನಾವು ಇಲ್ಲಿ ನೆಮ್ಮದಿಯಿಂದ ಬದುಕುತ್ತಿದ್ದೇವೆ ಎಂದರು.

ಭಾರತದ ಸಾಹಿತ್ಯ ಕ್ಷೇತ್ರಕ್ಕೆ ಸಾವಿರಾರು ವರ್ಷಗಳ ಇತಿಹಾಸವಿದೆ. ಆದರೆ ಆಂತರಿಕ ಹಾಗೂ ಬಾಹ್ಯ ರಕ್ಷಣೆ ಇಲ್ಲದ ಕಾರಣ ವಿದೇಶಿಗರು ನಮ್ಮ ದೇಶದ ಮೇಲೆ ಯುದ್ಧ ಸಾರಿ ನಮ್ಮಲ್ಲಿರುವ ಸರ್ವ ಸಂಪತ್ತನ್ನು ಹೊತ್ತೊಯ್ದರು ಎಂದು ಬೇಸರ ವ್ಯಕ್ತಪಡಿಸಿದರು.

ನಮ್ಮ ದೇಶದ ಸಂಪತ್ತು ಅಂದರೆ ಚಿನ್ನಾಭರಣ ಮಾತ್ರವಲ್ಲದೆ ಬೌದ್ಧಿಕ ಸಂಪತ್ತನ್ನು ಕೂಡ ವಿದೇಶಿಗರು ದೋಚಿದರು. ಇದರಿಂದ ಅಪಾರ ಸಂಪತ್ತು ವಿದೇಶಿಗರ ಪಾಲಾಯಿತು ಎಂದು ಡಾ. ಪ್ರಹ್ಲಾದ ರಾಮರಾವ್ ಹೇಳಿದರು.

ಆದರೆ, ಅಂದಿನ ಪರಿಸ್ಥಿತಿ ಈಗ ಇಲ್ಲ. ಇಂದು ದೇಶ ಆಂತರಿಕ ಹಾಗೂ ಬಾಹ್ಯವಾಗಿ ಸುಭದ್ರವಾಗಿದೆ. ಆಧುನಿಕ ತಂತ್ರಜ್ಞಾನದಲ್ಲಿ ವಿಶ್ವದ ಮುಂದುವರೆದ ದೇಶಗಳಿಗೆ ಭಾರತ ಪೈಪೋಟಿ ನೀಡುವಷ್ಟು ಅಭಿವೃದ್ಧಿ ಪಥದತ್ತ ಸಾಗುತ್ತಿದೆ. ಭಾರತದಲ್ಲಿ ಇಂದು ಆಹಾರ ಭದ್ರತೆ ಇದೆ, ತಂತ್ರಜ್ಞಾನ ಕ್ಷೇತ್ರ ಬೆಳವಣಿಗೆ ಸಾಧಿಸಿದೆ, ರಕ್ಷಣಾ ಕ್ಷೇತ್ರದಲ್ಲಿ ಬೆಳವಣಿಗೆ ಸಾಧಿಸಿದೆ, ಸಾಹಿತ್ಯ ಕ್ಷೇತ್ರದಲ್ಲಿ ಸೃಜನಶೀಲತೆಯ ಪುಸ್ತಕಗಳು ಬಿಡುಗಡೆಯಾಗುತ್ತಿವೆ ಎಂದು ಪ್ರಶಂಸೆ ವ್ಯಕ್ತಪಡಿಸಿದರು.

ರಕ್ಷಣಾ ಕ್ಷೇತ್ರದಲ್ಲಿ ಭಾರತ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಿದೆ. ಇದರಲ್ಲಿ ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಕ್ಷಿಪಣಿ ಕೂಡ ಒಂದಾಗಿದೆ. ಈ ಮೂಲಕ ಈಗಿನ ಸರ್ಕಾರ ದೇಶದ ರಕ್ಷಣಾ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡುತ್ತಿದೆ. ಇದು ವಿಕಸಿತ ಭಾರತದ ಪರಿಕಲ್ಪನೆಯಾಗಿದೆ ಎಂದು ಅವರು ತಿಳಿಸಿದರು.



ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ಸ್ ಕ್ಲಬ್ ವತಿಯಿಂದ ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ 9ನೇ ಮೈಸೂರು ಸಾಹಿತ್ಯ ಸಂಭ್ರಮ ಕಾರ್ಯಕ್ರಮದಲ್ಲಿ ಸಾಹಿತಿಗಳಾದ ರಂಜಿತ ಹೊಸಕೋಟೆ (ಮಧ್ಯದವರು), ಹಾಗೂ ಅರುಂಧತಿ ನಾಥ್ (ಬಲಗಡೆ) ಅವರು ದೀಪ್ತಿ ನವರತ್ನರೊಂದಿಗೆ ಚರ್ಚೆಯಲ್ಲಿ ಪಾಲ್ಗೊಂಡರು.

ಸೋತು ಗೆಲ್ಲುವುದನ್ನು ಮಹಾಭಾರತ ಕಲಿಸುತ್ತದೆ !

ನಮ್ಮಲ್ಲಿನ ಅಹಂಕಾರ ನಿರ್ಮೂಲನೆ ಮಾಡುತ್ತದೆ ; ಖ್ಯಾತ ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ

ಮೈಸೂರು,ಜು.5(ಪಿಎಂ)- ಮಹಾಭಾರತ ಓದಿ ಅರ್ಥೈಸಿಕೊಳ್ಳುವ ಮೂಲಕ ನಾವು ಸೋತು ಗೆಲ್ಲುವುದನ್ನು ಕಲಿಯಬಹುದು. ಜೊತೆಗೆ ನಮ್ಮ ಅಹಂಕಾರ ನಿರ್ಮೂಲನೆ ಆಗುತ್ತದೆ ಎಂದು ಖ್ಯಾತ ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

ಹೋಟೆಲ್ ಸದರನ್ ಸ್ಟಾರ್‌ನ ಗಾರ್ಡೇನಿಯಾ ಆವರಣದ ಈಜುಕೊಳದ ಬದಿ ಅಂಗಳದಲ್ಲಿ ಶನಿವಾರ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಕನ್ನಡ ಗೋಷ್ಠಿಯಲ್ಲಿ 'ಹೊಸ-ಚಿಗುರು-ಹಳೆ-ಬೇರು; ತಾತ್ವಿಕ ಮತ್ತು ಸಾಂಸ್ಕೃತಿಕ ಬೇರುಗಳಿಂದಲೇ ನವ ಪೀಳಿಗೆಯನ್ನು ಸಕ್ರಿಯಗೊಳಿಸುವ ಅನುಸಂಧಾನ' ಕುರಿತು ಅವರು ಮಾತನಾಡಿದರು.



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ವಿದ್ವಾಂಸ ಲಕ್ಷ್ಮೀಶ ತೋಳ್ಪಾಡಿ ಅವರೊಂದಿಗೆ ಲೇಖಕಿ ಸಿಂಧುರಾವ್ ಸಂವಾದ ನಡೆಸಿದರು.

ಪ್ರಸ್ತುತದಲ್ಲಿ ಏನು ಬೇಕಾದರೂ ಮಾಹಿತಿ ದೊರೆಯುವಂತಹ ತಂತ್ರಜ್ಞಾನ ಚಾಲ್ತಿಯಲ್ಲಿದ್ದು, ಹೀಗಿರುವಾಗ ನಾವು ಏಕಾಗಿ ಹಳೇ ಮೂಲ ಮಹಾಭಾರತ ಅಥವಾ ಮಹಾಭಾರತದ ಇತರ ವಾಙ್ಮಯಗಳನ್ನು ಓದಬೇಕು. ಜೊತೆಗೆ ಎಷ್ಟೋ ಮಂದಿ ಹೊಸದಾಗಿ ಬರೆದಿರುವಾಗ ಮತ್ತೆ ಹಳೆಯದನ್ನೇ ಏಕೆ ಓದಬೇಕು ಎಂಬ ಪ್ರಶ್ನೆಯನ್ನು ಲೇಖಕಿ ಟಿ.ಸಿಂಧುರಾವ್ ಮುಂದಿಟ್ಟರು.

ಇದಕ್ಕೆ ಪ್ರತಿಕ್ರಿಯಿಸಿದ ಲಕ್ಷ್ಮೀಶ ತೋಳ್ಪಾಡಿ ಅವರು, ಎಐ (ಆರ್ಟಿಫಿಶಿಯಲ್ ಇಂಟೆಲಿಜೆನ್ಸ್) ಕಾಲದಲ್ಲಿ ಮಹಾಭಾರತ ಸೇರಿದಂತೆ ನಮ್ಮ ಇತರೆ ಮಹಾಕಾವ್ಯ ಏಕೆ ಓದಬೇಕೆಂಬುದು ನಮ್ಮ ಮುಂದಿರುವ ಪ್ರಶ್ನೆ. ಎಐ ನನಗೆ ಬಹಳ ಇಷ್ಟ, ಏಕೆಂದರೆ ಎಐಗೆ ಅಹಂಕಾರವಿಲ್ಲ. ಜೊತೆಗೆ ಅದಕ್ಕೆ ಸ್ವಭಾವವೂ ಇಲ್ಲ. ಹಾಗಾಗಿ ಎಐ ಬಳಿಯಲ್ಲಿ ಏನಾದರೂ ಕೇಳಬಹುದು. ಅದಕ್ಕೆ ಸ್ವಾಭಿಮಾನ ಇಲ್ಲ. ಬಹುಶಃ ಅದಕ್ಕಾಗಿಯೇ ಅದನ್ನು ಬಳಸಿಕೊಳ್ಳುತ್ತಾರೆ ಎಂದು ಕಾಣುತ್ತದೆ ಎಂದರು.

ಎಐಗೆ ಅಗಾಧವಾದ ಪಾಸಿಬಿಲಿಟೀಸ್ ಇದೆ. ಅದನ್ನು ಉಪಯೋಗ ಮಾಡಲು ಸರಿಯಾದ ಪ್ರಶ್ನೆ ಹಾಕಲಿಕ್ಕೆ ನಮಗೆ ಗೊತ್ತಿಲ್ಲ. ನನ್ನ ಮಿತ್ರರೊಬ್ಬರು ಎಐ ಕುರಿತು ಒಂದು ಪ್ರಯೋಗ ಮಾಡುತ್ತಿದ್ದಾರೆ. ಅವರು ಕೊಡುವ ಸೂಚನೆಯೆಂದರೆ, ಷೇಕ್ಸ್‌ಪೀಯರ್ ಇದ್ದಿದ್ದರೆ ಈ ಪ್ರಶ್ನೆಗೆ ಯಾವ ರೀತಿ ಪ್ರತಿಕ್ರಿಯಿಸುತ್ತಿದ್ದ ಎಂದು ಅವರು ಕೇಳುತ್ತಾರೆ. ಈ ವಿಧಾನವು ಇನ್ನೊಬ್ಬರ ಮನಸ್ಸನ್ನು ಅರ್ಥ ಮಾಡಿಕೊಳ್ಳುವ ಒಂದು ರೀತಿ. ಎಐಗೆ ಅಹಂಕಾರ ಇಲ್ಲ. ಬದಲಿಗೆ ಅದನ್ನು ಬಳಕೆ ಮಾಡುವ ನಮಗೆ ಅಹಂಕಾರವಿದೆ. ಜೊತೆಗೆ ಅದನ್ನು ಬಳಕೆ ಮಾಡುವುದರಲ್ಲಿ ಸಿದ್ಧಹಸ್ತರೆಂಬ ಅಹಂಕಾರ ಬೆಳೆಯುತ್ತಾ ಹೋಗುತ್ತದೆ. ಮಹಾಭಾರತ ಓದಿದರೆ ನಮ್ಮಲ್ಲಿನ ಇಂತಹ ಅಹಂಕಾರ ನಿರ್ಮೂಲನೆ ಆಗುತ್ತದೆ ಎಂದು ಹೇಳಿದರು.

ಧರ್ಮ ನಂಬಲ್ಲ ಎನ್ನುವವರ ಸ್ವಾಗತಿಸುವೆ ; ಲಕ್ಷ್ಮೀಶ ತೋಳ್ಪಾಡಿ

ಮೈಸೂರು,ಜು.5(ಪಿಎಂ)- ಧರ್ಮವನ್ನು ನಾನು ನಂಬುವುದಿಲ್ಲವೆಂದು ಯಾರಾದರು ಹೇಳಿದರೆ, ಅದರಿಂದ ಧರ್ಮ ನಂಬಿದವರಿಗೆ ಏಕೆ ಘಾಸಿಯಾಗಬೇಕು. ಎಲ್ಲರೂ ಒಂದೇ ರೀತಿ ಆಲೋಚನೆ ಮಾಡಬೇಕೆಂಬುದು ಈ ಲೋಕದಲ್ಲಿ ಉಂಟೇ? ಎಂದು ಲಕ್ಷ್ಮೀಶ ತೋಳ್ಪಾಡಿ ಹೇಳಿದರು.

ಗೋಷ್ಠಿಯಲ್ಲಿ ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದ ಅವರು, ಧರ್ಮ ನಂಬಲು ಕಷ್ಟವಾಗುತ್ತಿದೆ ಎಂದು ಯಾರಾದರೂ ಹೇಳಿದರೆ ಅದನ್ನು ನಾನು ಸ್ವಾಗತಿಸುತ್ತೇನೆ. ಏಕೆಂದರೆ ಧಾರ್ಮಿಕರು ಎಂದುಕೊಂಡವರ ನಡವಳಿಕೆಗಳನ್ನು ನಾನು ನೋಡಿದ್ದೇನೆ. ಇವರು ಏನು ಮಾಡುತ್ತಿದ್ದಾರೆ ಎಂದು ನೀವು ನೋಡಿದರೆ ಭ್ರಮನಿರಸನವಾಗುತ್ತದೆ. ಇಂತಹ ಕಾರಣಗಳಿಗೆ ನಾವು ನಡೆದದ್ದೇ ಧರ್ಮ ಎಂಬ ಭಾವನೆ ಉಂಟಾಗುತ್ತದೆ ಎಂದರು.

ಮಾರ್ಮಿಕ ಶಬ್ಧ: ಕನ್ನಡದಲ್ಲಿ ಬಹಳ ಸುಂದರವಾದ ಮಾರ್ಮಿಕ ಪದ ವೊಂದಿದೆ. ಅದನ್ನು 12ನೇ ಶತಮಾನದಲ್ಲಿ ವಚನಕಾರರು ಬಳಸಿದ್ದಾರೆ. ಅದು 'ಶಬ್ಧದ ಲಜ್ಜೆಯ (ನಾಚಿಕೆ) ನೋಡಾ' ಎಂಬುದಾಗಿದೆ. ಭಾಷೆ ತನ್ನದೇ ಆದ ಒಂದು ನಾಚಿಕೊಳ್ಳುವ ಗುಣ ಹೊಂದಿದೆ. ಆದ್ದರಿಂದ ಅದಕ್ಕೆ ನಾಚಿಕೊಳ್ಳುವ ಸ್ವಭಾವವಿದೆ. ಭಾಷೆಗೆ ತನ್ನದೇ ಒಂದು ಕಂಪನವಿದೆ. ಕನ್ನಡ, ಸಂಸ್ಕೃತ ಮಾತ್ರವಲ್ಲದೇ ಎಲ್ಲಾ ಭಾಷೆಗೂ ಇದೆ. ಹೊಸ ಭಾಷೆ ತಯಾರು ಮಾಡಿದರೆ ಅದಕ್ಕೂ ನಾಚಿಕೆ ಇರುತ್ತದೆ ಎಂದು ವಿಶ್ಲೇಷಿಸಿದರು.

ಮಹಾಕಾವ್ಯಗಳಿಗೆ ಮರುಹುಟ್ಟು ಅಸಂಖ್ಯಾ: ಮಹಾಭಾರತವನ್ನು ಯಾವ ರೀತಿಯಲ್ಲಿ ಓದಬೇಕು. ಎಷ್ಟೊಂದು ಆವೃತ್ತಿಗಳಿವೆ. ಕೆಡುಕಿನ ಪಾತ್ರಗಳ ಒಳ್ಳೆಯ ಅಂಶಗಳನ್ನು ಅನಾವರಣಗೊಳಿಸಿರುವುದೂ ಇದೆ ಎಂದು ಸಿಂಧುರಾವ್ ಪ್ರಶ್ನೆ ಮುಂದಿಟ್ಟಾಗ, ಮತ್ತೆ ಮಾತು ಮುಂದುವರೆಸಿದ ಲಕ್ಷ್ಮೀಶ ತೋಳ್ಪಾಡಿ ಅವರು, ಇದಕ್ಕೆ ನಾನು ಹೇಳುವುದು ಮಹಾಭಾರತವನ್ನು ಇನ್ನೊಮ್ಮೆ ಓದಿ ಅಂತ. ಮಹಾಭಾರತ ಹಾಗೂ ರಾಮಾಯಣದಂತಹ ನಮ್ಮ ಮಹಾಕಾವ್ಯಗಳಿಗೆ ಮರುಓದು, ಮರುಹುಟ್ಟು ಅಸಂಖ್ಯಾ. ಅಂದರೆ ನಾನಾ ರೀತಿಯಲ್ಲಿ ಓದಲು ಸಾಧ್ಯ ಎನ್ನುವುದಾಗಿದೆ. ಪ್ರಕ್ಷೇಪಗಳಾಗುವುದು ಮಹಾಭಾರತಕ್ಕೆ ಇಷ್ಟ, ಜೀವನಕ್ಕೆ ಮಹಾಭಾರತ ಅತ್ಯಂತ ಹತ್ತಿರವಿದೆ ಎಂದು ತಿಳಿಸಿದರು.

ಸುದ್ದಿಮನೆಯ ಒತ್ತಡಗಳು, ಕಾನೂನು ಪ್ರಜ್ಞೆ ಕುರಿತು ಗೋಷ್ಠಿಯಲ್ಲಿ ಪತ್ರಕರ್ತರ ಚರ್ಚೆ

ಕಾನೂನು ಪ್ರಜ್ಞೆ ಇದ್ದರೆ ಉತ್ತಮ ಪತ್ರಕರ್ತನಾಗಲು ಸಾಧ್ಯ



ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸುದ್ದಿ ಮನೆಯ ಒತ್ತಡಗಳು ಮತ್ತು ಕಾನೂನು ಪ್ರಜ್ಞೆ' ವಿಷಯ ಕುರಿತು ನಡೆದ ಗೋಷ್ಠಿಯಲ್ಲಿ ಹಿರಿಯ ಪತ್ರಕರ್ತರಾದ ಕೂಡ್ಲಿ ಗುರುರಾಜ್, ಟಿ.ಆರ್.ಸತೀಶ್, ವಕೀಲೆ ಅಂಜಲಿ ರಾಮಣ್ಣ ಪಾಲ್ಗೊಂಡಿದ್ದರು.

ಮೈಸೂರು, ಜು.5(ಜಿಎ)-ಮಾಧ್ಯಮ ಕ್ಷೇತ್ರದಲ್ಲಿ ಕಾನೂನಿನ ಪ್ರಜ್ಞೆ ಇದ್ದರೆ ಉತ್ತಮ ಪತ್ರಕರ್ತನಾಗಲು ಸಾಧ್ಯ ಎಂದು ಹಿರಿಯ ಪತ್ರಕರ್ತರಾದ ಕೂಡ್ಲಿ ಗುರುರಾಜ್ ತಿಳಿಸಿದರು.

ಮೈಸೂರು ಲಿಟರರಿ ಫೋರಂ ಚಾರಿಟೇಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾಟರಿಟೇಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸುದ್ದಿ ಮನೆಯ ಒತ್ತಡಗಳು ಮತ್ತು ಕಾನೂನು ಪ್ರಜ್ಞೆ' ವಿಷಯ ಕುರಿತು ನಡೆದ ಗೋಷ್ಠಿಯಲ್ಲಿ ಹಿರಿಯ ಪತ್ರಕರ್ತರಾದ ಕೂಡ್ಲಿ ಗುರುರಾಜ್, ಟಿ.ಆರ್.ಸತೀಶ್, ವಕೀಲೆ ಅಂಜಲಿ ರಾಮಣ್ಣ ಪಾಲ್ಗೊಂಡಿದ್ದರು. ಗೋಷ್ಠಿಯನ್ನು ಪತ್ರಕರ್ತೆ ಪ್ರೀತಿ ನಾಗರಾಜ್ ನಿರ್ವಹಿಸಿದರು.

ಈ ವೇಳೆ ಮಾತನಾಡಿದ ಅವರು, ಪತ್ರಕರ್ತರಿಗೆ ನೂತನ ಕಾನೂನಿನ ಬಗ್ಗೆ ಅರಿವಿರಬೇಕು. ಹಾದಿ ತಪ್ಪಿದ ಮಾಧ್ಯಮಗಳನ್ನು ನಿಯಂತ್ರಿಸುವ ಸಲುವಾಗಿ ಕೇಂದ್ರ ಸರ್ಕಾರ ಕಾನೂನುಗಳನ್ನು ಮಾಡಿದೆ. ಆದರೆ ಸೂಕ್ತವಾಗಿ ಜಾರಿ ಮಾಡಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲರಿಗೂ ಇದೆ. ಅದು ಪತ್ರಕರ್ತರಿಗೆ ಮಾತ್ರ ಸೀಮಿತವಲ್ಲ ಅದನ್ನು ಎಲ್ಲರೂ ಅರಿತುಕೊಳ್ಳಬೇಕಿದೆ ಎಂದರು.

ಟಿ.ಆರ್.ಸತೀಶ್ ಕುಮಾರ್ ಮಾತನಾಡಿ, ಪತ್ರಕರ್ತರು ಕಾನೂನಿನ ಸಲಹೆಗಳನ್ನು ಪಡೆದುಕೊಂಡು ಮುಂದುವರಿಯುವುದು ಒಳಿತು. ಅದನ್ನು ಸಾಕಷ್ಟು ಮಾಧ್ಯಮಗಳು ಮಾಡುತ್ತಿದ್ದು, ಅದರಂತೆ ಪ್ರತ್ಯೇಕ ಕಾನೂನಿನ ವಿಭಾಗವನ್ನು ಅಳವಡಿಸಿಕೊಂಡಿದೆ. ಕಾನೂನು ಮತ್ತು ಪತ್ರಿಕಾ ಧರ್ಮ ಎರಡನ್ನು ಪಾಲಿಸಿಕೊಂಡು ಸಾಗಬೇಕು. ಕರ್ತವ್ಯ ಮುಖ್ಯವೋ, ಸ್ವಸ್ಥ ಸಮಾಜ ಮುಖ್ಯವೋ ಎಂಬ ಪ್ರಶ್ನೆಯನ್ನು ನಾವು ಸಮತೋಲನದಿಂದ ಕಾಣಬೇಕು. ವರದಿಗಾರರಲ್ಲಿ ಕೆಲವೊಮ್ಮೆ ತಾವೇ ಎಲ್ಲವನ್ನು ತಿಳಿದುಕೊಂಡವರು ಎಂಬ ಭಾವನೆ ಇರುತ್ತದೆ ಅದು ದೂರವಾಗಬೇಕಿದೆ ಎಂದು ಅಭಿಪ್ರಾಯಪಟ್ಟರು.

ಅಂಜಲಿ ರಾಮಣ್ಣ, ಮಾತನಾಡಿ, ಅಗತ್ಯವಾದ ಕಾನೂನು ಪ್ರಜ್ಞೆ ಮತ್ತು ಮಾನವೀಯ ಪ್ರಜ್ಞೆ ಮುಖ್ಯ. ಕಾನೂನಿನೊಡನೆ ಸಂಘರ್ಷದಲ್ಲಿರುವ ಮಕ್ಕಳ ಮುಖವನ್ನು ಬ್ಲರ್ ಮಾಡುವ ಕೆಲ ಮಾಧ್ಯಮಗಳು, ಅವರ ಇಡೀ ಕುಟುಂಬ, ಮಗು ಓದುತ್ತಿರುವ ಶಾಲೆ, ಕ್ಲಾಸ್‌ಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುತ್ತದೆ, ಇಲ್ಲಿ ಕಾನೂನು ಪಾಲನೆಯಾಗುತ್ತದೆ ಆದರೆ ಮಾನವೀಯತೆ ಮಾಯವಾಗಿರುತ್ತದೆ. ಈ ಬಗ್ಗೆ ಅರಿವು ಮೂಡಬೇಕಿದ್ದು, ಕಾನೂನು ತರಬೇತಿ ಅಗತ್ಯವಿದೆ ಎಂದು ತಿಳಿಸಿದರು.

ನೈಜ ಸಾಹಿತ್ಯದ ಮುಂದೆ ಎಐ ಸಾಹಿತ್ಯ ದುರ್ಬಲ

ಸಾಹಿತಿ ಕಿರಣ್ ಭಟ್ ಅಭಿಮತ



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್(ಎಐ) ಯುಗದಲ್ಲಿ ಕವಿತೆಗಳ ಪ್ರಸ್ತುತತೆ' ವಿಷಯ ಕುರಿತು ಗೋಷ್ಠಿಯಲ್ಲಿ ಸಾಹಿತಿಗಳಾದ ಕಲ್ಲಚ್ಚು ಮಹೇಶ್ ಆರ್.ನಾಯಕ್, ಕಿರಣ್ ಭಟ್ ಮತ್ತು ಎಂ.ಡಿ.ಗುರು ಪಾಲ್ಗೊಂಡಿದರು.

ಮೈಸೂರು, ಜು.5(ಜಿಎ)-ಮೈಸೂರು ಲಿಟರರಿ ಫೋರಂ ಚಾರಿಟೆಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾರಿಟೆಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಆರ್ಟಿಫಿಶಿಯಲ್ ಇಂಟೆಲಿಜೆನ್ಸ್(ಎಐ) ಯುಗದಲ್ಲಿ ಕವಿತೆಗಳ ಪ್ರಸ್ತುತತೆ' ವಿಷಯ ಕುರಿತು ಗೋಷ್ಠಿಯಲ್ಲಿ ಸಾಹಿತಿಗಳಾದ ಕಲ್ಲಚ್ಚು ಮಹೇಶ್ ಆರ್.ನಾಯಕ್, ಕಿರಣ್ ಭಟ್ ಮತ್ತು ಎಂ.ಡಿ.ಗುರು ಪಾಲ್ಗೊಂಡಿದರು. ಸುಚಿತ್ರ ಹೆಗಡೆ ಗೋಷ್ಠಿ ನಿರ್ವಹಿಸಿದರು.

ಕಿರಣ್ ಭಟ್ ಮಾತನಾಡಿ, ಇಂದು ನಾವು ಜಾಗತೀಕರಣದ ಕಾಲದಲ್ಲಿದ್ದೇವೆ. ಎಲ್ಲವೂ ಅಂಗೈನಲ್ಲಿ ಸಿಗುತ್ತದೆ. ಆದರೆ, ನೈಜ್ಯ ಸಾಹಿತ್ಯದ ಮುಂದೆ ಎಐ ಸಾಹಿತ್ಯ ದುರ್ಬಲವಾಗುತ್ತದೆ. ಮುಂದಿನ ದಿನಗಳಲ್ಲಿ ಎಐ ತಂತ್ರಜ್ಞಾನವೂ ಮತ್ತಷ್ಟು ಬದಲಾವಣೆಯಾಗಬಹುದು ಆದರೆ ಮನುಷ್ಯನ ಭಾವನೆಗೆ ತಕ್ಕಂತೆ ಸ್ಪಂದಿಸಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಕಲ್ಲಚ್ಚು ಮಹೇಶ್ ಆರ್.ನಾಯಕ್ ಮಾತನಾಡಿ, ನಮ್ಮ ವೇದನೆಗಳೆ ನಿಜವಾದ ಕಾವ್ಯವಾಗಿದೆ. ಮನುಷ್ಯ ಬರೆಯುವ ಕಾವ್ಯ ವೇದನೆಗಳಿಂದ ಕೂಡಿರುತ್ತದೆ. ನಾವು ಹೇಳುವುದನ್ನೆಲ್ಲ ಎಐ ನಿಂದ ಬರೆಯಲು ಸಾಧ್ಯವಿಲ್ಲ. ವಿಸ್ತರಣೆಯೂ ಮಾಡುವುದಿಲ್ಲ. ನಾವು ಎಷ್ಟು ಅಳವಡಿಸಿರುತ್ತೇವೆಯೋ ಅಷ್ಟು ಮಾತ್ರ ಎಐನಿಂದ ನಮಗೆ ಸಿಗುತ್ತದೆ. ಅಲ್ಲಿ ಸಿಗುವ ಕಾವ್ಯಗಳಿಗೂ ಸಾಹಿತಿಗಳು ಬರೆಯುವ ಕಾವ್ಯಗಳಿಗಿರುವ ವ್ಯತ್ಯಾಸವನ್ನು ಸಾಮಾನ್ಯ ಜನರು ಕಂಡು ಹಿಡಿಯುತ್ತಾರೆ. ನೈಜತೆ ಹೆಚ್ಚು ಪ್ರಾಮುಖ್ಯತೆ ಇದೆ ಎಂದರು.

ಎಂ.ಡಿ.ಗುರು ಮಾತನಾಡಿ, ಪ್ರಕೃತಿ ಮತ್ತು ಮಣ್ಣು ಒಂದಾದಾಗ ಮಾತ್ರ ನಿಜವಾದ ಕಾವ್ಯ ಮೂಡುತ್ತದೆ. ನಾನೂ ನಿತ್ಯವೂ ಕವಿತೆಗಳನ್ನು ಬರೆದು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡುತ್ತೇನೆ. ಜನರಿಗೆ ನಿಜವಾದ ಕಾವ್ಯ ಮತ್ತು ಎಐ ಕಾವ್ಯದ ನಡುವಿನ ವ್ಯತ್ಯಾಸ ಸುಲಭವಾಗಿ ತಿಳಿಯುತ್ತದೆ ಎಂದರು.

ತುಳು, ಕೊಡವ, ಅರೆ ಭಾಷೆಗಳ ಸಮ್ಮಿಲನದಿಂದ ಕನ್ನಡ ಶ್ರೀಮಂತವಾಯ್ತು!

ಮೈಸೂರು, ಜು.5(ಎಂಕೆ)- ತುಳು, ಕೊಡವ ಮತ್ತು ಅರೆ ಭಾಷೆ ಕವಿತೆಗಳ ಸಮ್ಮಿಲನದಿಂದ ಕನ್ನಡ ಭಾಷೆ ಶ್ರೀಮಂತವಾಗಿದೆ. ದ್ರಾವಿಡ ಭಾಷೆಗಳಲ್ಲಿ ಹಿರಿಯ, ಕಿರಿಯ ಎಂಬುದಿಲ್ಲ. ಎಲ್ಲಾ ಭಾಷೆಗಳು ಆಯಾ ನೆಲದ ಮೂಲ ಭಾಷೆಗಳಾಗಿವೆ ಎಂಬ ಅಭಿಪ್ರಾಯ ವ್ಯಕ್ತವಾಯಿತು.



ಲೇಖಕರಾದ ತುಳಸಿ ಮೋಹನ್, ಅಕ್ಷತಾ ರಾಜ್, ವಿವೇಕ್ ಅಯ್ಯಪ್ಪ ಹಾಗೂ ಅಕಾಶವಾಣಿ ನಿರೂಪಕ ಅಬ್ದುಲ್ ರಶೀದ್ 'ತುಳು, ಕೊಡವ ಮತ್ತು ಅರೆ ಭಾಷೆ ಕವಿತೆಗಳ ಸಮ್ಮಿಲನ' ಕುರಿತು ಸಂವಾದ ನಡೆಸಿದರು

ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯಲ್ಲಿ 'ತುಳು, ಕೊಡವ ಮತ್ತು ಅರೆ ಭಾಷೆ ಕವಿತೆಗಳ ಸಮ್ಮಿಲನ' ಕುರಿತ ಸಂವಾದದಲ್ಲಿ ಭಾಗವಹಿಸಿದ ಅರೆ ಭಾಷೆ ಲೇಖಕಿ ತುಳಸಿ ಮೋಹನ್, ತುಳು ಭಾಷೆಯ ಅಕ್ಷತಾ ರಾಜ್ ಹಾಗೂ ಕೊಡವ ಭಾಷೆಯ ಲೇಖಕ ವಿವೇಕ್ ಅಯ್ಯಪ್ಪ ಕನ್ನಡ ಮತ್ತು ತಮ್ಮ ಸ್ಥಳೀಯ ಭಾಷೆಯಲ್ಲಿ ಕವನಗಳನ್ನು ವಾಚಿಸುವ ಮೂಲಕ ಕನ್ನಡ ಹಾಗೂ ಕನ್ನಡದೊಂದಿಗೆ ಬೆರೆತಿರುವ ಭಾಷೆಗಳ ಪರಿಚಯ ಮಾಡಿಸಿದರು.

ಈ ವೇಳೆ ಮೈಸೂರು ಆಕಾಶವಾಣಿ ಹಿರಿಯ ನಿರೂಪಕ ಅಬ್ದುಲ್ ರಶೀದ್ ಮಾತನಾಡಿ, ಕನ್ನಡ ಭಾಷೆಯ ಬೇರುಗಳು ಬೇರೆ ಬೇರೆ ಕಡೆ ಬೆಳೆದು ಹೂ ಬಿಟ್ಟಿವೆ. ಆ ಹೂಗಳೇ ತುಳು, ಕೊಡವ ಮತ್ತು ಅರೆ ಭಾಷೆಯಾಗಿದೆ. ಕೊಡವರು ಹುಟ್ಟುತ್ತಲೇ ಎಲ್ಲಾ ಭಾಷೆಗಳನ್ನು ಕಿವಿಯ ಮೇಲೆ ಹಾಕಿಕೊಂಡು ಬೆಳೆಯುವುದರಿಂದ ಕನ್ನಡ ಭಾಷೆಯ ಜೊತೆಗೆ ಇತರೆ ಭಾಷೆಗಳ ಅರಿವನ್ನು ಪಡೆದಿರುತ್ತಾರೆ ಎಂದರು.

ಕನ್ನಡ ಲಿಪಿ ಬಳಕೆ: ತುಳು, ಕೊಡವ ಮತ್ತು ಅರೆ ಭಾಷೆಗೆ ಲಿಪಿಯಾಗಿ ಕನ್ನಡ ಭಾಷೆಯನ್ನು ಬಳಸಲಾಗುತ್ತಿದೆ. ಕೊಡವ ಮತ್ತು ತುಳು ಭಾಷೆಗೆ ಲಿಪಿ ಇದೆ ಎಂಬ ವಿಚಾರಗಳು ಮುನ್ನಲೆಗೆ ಬರುತ್ತಿದ್ದು, ಮುಂದಿನ ದಿನಗಳಲ್ಲಿ ಲಿಪಿ ಅಧಿಕೃತವಾದರೂ ಅಚ್ಚರಿ ಇಲ್ಲ. ಹಾಗೆಯೇ ಸಾಹಿತ್ಯಾತ್ಮಕವಾಗಿ ತುಳು, ಕೊಡವ ಮತ್ತು ಅರೆ ಭಾಷೆಯಿಂದ ಕನ್ನಡ ಮತ್ತಷ್ಟು ಶ್ರೀಮಂತವಾಗಿದೆ ಎಂಬುದನ್ನು ಲೇಖಕರಾದ ತುಳಸಿ ಮೋಹನ್, ಅಕ್ಷತಾ ರಾಜ್ ಹಾಗೂ ವಿವೇಕ್ ಅಯ್ಯಪ್ಪ ತಮ್ಮ ಕವನಗಳ ಮೂಲಕ ಪ್ರಸ್ತುತ ಪಡಿಸಿದರು.

ಕನ್ನಡದ ಸೋದರ ಭಾಷೆಗಳು: ಲೇಖಕಿ ಅಕ್ಷತಾ ರಾಜ್ ಮಾತನಾಡಿ, ಭಾಷೆಗಳಲ್ಲಿ ಅದು ಮೇಲು, ಇದು ಕೀಳು ಎಂಬ ಮನೋಭಾವನೆಯನ್ನು ಮೊದಲು ಕಿತ್ತುಹಾಕಬೇಕು. ತುಳು, ಕೊಡವ ಮತ್ತು ಅರೆ ಭಾಷೆಗಳು ಕನ್ನಡ ಭಾಷೆಯ ಸೋದರ ಭಾಷೆಗಳಾಗಿವೆ. ಹಾಗೆಯೇ ದ್ರಾವಿಡ ಭಾಷೆಗಳು ಎಲ್ಲವೂ ಸಮಾನವಾದವು ಎಂದು ತಿಳಿಸಿದರು.

ಎಲ್ಲರ ಹೃದಯದಲ್ಲಿ ಉಳಿಯುವುದಕ್ಕಿಂತ ದೊಡ್ಡ ಪ್ರಶಸ್ತಿ ಇಲ್ಲ

ಮೈಸೂರು ಸಾಹಿತ್ಯ ಸಂಭ್ರಮದಲ್ಲಿ ಡಾ.ಹೆಚ್.ಆರ್.ಲೀಲಾವತಿ ಅಭಿಪ್ರಾಯ

ಮೈಸೂರು, ಜು.5(ಜಿಎ)-ಎಲ್ಲರ ಹೃದಯದಲ್ಲಿ ಉಳಿಯುವುದಕ್ಕಿಂತ ದೊಡ್ಡ ಪ್ರಶಸ್ತಿ ಇಲ್ಲ. ದ್ವೇಷಿಸುವವರನ್ನು ಪ್ರೀತಿಸಬೇಕು ಎಂದು ಹಿರಿಯ ಸುಗಮ ಸಂಗೀತ ಗಾಯಕಿ ಡಾ.ಹೆಚ್.ಆರ್. ಲೀಲಾವತಿ ಅಭಿಪ್ರಾಯಪಟ್ಟರು.



ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸುಗಮ ಸಂಗೀತ ಹಾಗೂ ಸಾಹಿತ್ಯ ಕಲರವ' ವಿಷಯ ಕುರಿತು ನಡೆದ ಗೋಷ್ಠಿಯಲ್ಲಿ ಸುಗಮ ಸಂಗೀತ ಗಾಯಕಿ ಡಾ.ಹೆಚ್.ಆರ್.ಲೀಲಾವತಿ ಅವರು ಮಾತನಾಡಿದರು.

ಮೈಸೂರು ಲಿಟರರಿ ಫೋರಂ ಚಾರಿಟೇಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ ಕ್ಲಬ್ಸ್ ಚಾಟರಿಟೇಬಲ್ ಟ್ರಸ್ಟ್ ವತಿಯಿಂದ ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಆಯೋಜಿಸಲಾಗಿದ್ದ 9ನೇ ಆವೃತ್ತಿಯ ಮೈಸೂರು ಸಾಹಿತ್ಯ ಸಂಭ್ರಮದಲ್ಲಿ 'ಸುಗಮ ಸಂಗೀತ ಹಾಗೂ ಸಾಹಿತ್ಯ ಕಲರವ' ವಿಷಯ ಕುರಿತು ನಡೆದ ಗೋಷ್ಠಿಯಲ್ಲಿ ಅವರು ಮಾತನಾಡಿದರು.

ನಮ್ಮ ಮನೆಯೇ ಸಂಗೀತದ ಕುಟುಂಬವಾಗಿದ್ದು, ತಾಯಿ ಕರ್ನಾಟಕ ಸಂಗೀತ, ತಂದೆ ಗಮಕವಾಚನ, ರಂಗಗೀತೆಗಳನ್ನು ಹಾಗೂ ಸಹೋದರರು ಹಾಡುತ್ತಿದ್ದರು. ಹೀಗೆ ಶಾಸ್ತ್ರೀಯ, ಸಿನಿಮಾ ಸೇರಿದಂತೆ ಎಲ್ಲಾ ಪ್ರಾಕಾರಗಳ ಸಂಗೀತ ಇತ್ತು ಸಂಗೀತ ಮತ್ತು ಸಾಹಿತ್ಯ ನನಗೆ ಕಣ್ಣುಗಳಾಗಿದ್ದರಿಂದ ನಮ್ಮದು ಸಂಗೀತದ ಕುಟುಂಬವಾಗಿತ್ತು ಎಂದರು.

ಹೆಣ್ಣು ಮದುವೆಯಾದ ನಂತರ ತನ್ನ ಆಸೆ, ಸಾಂಸ್ಕೃತಿಕ ಇಚ್ಛೆಗಳ ಮೂಲೆ ಗುಂಪಾಗುತ್ತದೆ. ಆದರೆ ಪತಿ ರಘುರಾಮ್ ಅವರು ನನ್ನ ಹೆಜ್ಜೆಯಲ್ಲಿ ಜೊತೆಯಾಗಿದರು. ಎಲ್ಲಾ ಕೆಲಸಗಳಿಗೂ ಸಾಥ್ ನೀಡಿದರಿಂದ ನಾನು ಸಂಗೀತಕ್ಕೆ ಸಮಯ ನೀಡಲು ಸಾಧ್ಯವಾಯಿತು. ಈಗ ಮಗ ಸಾಥ್ ನೀಡಿದ್ದು ನಾನು ಹಾಡಿರುವ ಹಾಡುಗಳನ್ನು ಯ್ಯೂಟ್ಯೂಬ್‌ಗೆ ಅಪ್‌ಲೋಡ್ ಮಾಡುತ್ತಿದ್ದಾನೆ ಎಂದು ತಿಳಿಸಿದರು.

ಆಕಾಶವಾಣಿ ಮತ್ತು ನನ್ನ ನಡುವಿನ ನಂಟು ಬಹಳ ದೊಡ್ಡದು, ದೇಶದ ಎಲ್ಲಾ ಆಕಾಶವಾಣಿಯಲ್ಲಿ ಹಾಡಿ ರೆಕಾರ್ಡ್ ಆಗಿರುವ ಗಾಯಕಿ ನಾನು ಒಬ್ಬಳೆ ಇರಬಹುದು. ಇಲ್ಲಿನ ಕೆಲವು ಗೀತೆಗಳನ್ನು ಅಸಾಂನ ಆಕಾಶವಾಣಿಯಲ್ಲಿ ಹಾಡು ಹೇಳಿದ್ದೇನೆ. ಮೊತ್ತೊಂದೆಡೆ ಸರ್ಕಾರದಿಂದ ಅಮೇರಿಕಾಗೆ ಸುಗಮ ಸಂಗೀತದ ರಾಯಬಾರಿಯಾಗಿ ಹಾಡಿರುವುದು ಒಂದು ಹೆಗ್ಗಳಿಕೆಯಾಗಿದೆ. ನಂತರ ನಮ್ಮ ಮುಂದಿನ ಪೀಳಿಗೆಗೂ ಸುಗಮ ಸಂಗೀತದ ತಿಳಿಸಿ, ಅದರ ಪರಂಪರೆ ಉಳಿಸುವ ಉದ್ದೇಶದಿಂದ ಸುಗಮ ಸಂಗೀತ ಶಾಲೆ ತೆರೆದು ಕಲಿಸಿದ್ದೇನೆ. ನನ್ನ ಬಳಿ ಕಲಿತಿರುವ ಶಿಷ್ಯವೃಂದವು ಬಳ ದೊಡ್ಡದಾಗಿದ್ದು, ಅವರು ಸುಗಮ ಸಂಗೀತವನ್ನು ಕಲಿಸುತ್ತಿದ್ದಾರೆ. ಬದಕು ಸಂತೃಪ್ತಿಯಿಂದ ಕೂಡಿದ್ದು, ಕುಟುಂಬಸ್ಥರು ಪ್ರೀತಿಯ ಕೋಟೆ ಕಟ್ಟಿ ನೋಡಿಕೊಳ್ಳುತ್ತಿದ್ದಾರೆ ಎಂದು ಸಂಗೀತ, ಸಾಹಿತ್ಯದ ನಡುವಿನ ಜೀವನವನ್ನು ವಿವರಿಸಿದರು.

ಈ ವೇಳೆ ವೇದಿಕೆಯಲ್ಲಿದ್ದ ಕುಸುಮಾ ಮೂರ್ತಿ ಮತ್ತು ಶಾಂತಾಲಾ ಚಂದ್ರಮೌಳಿ ಅವರು ಸುಗಮ ಸಂಗೀತ ಹಾಡಿದರು. ಡಾ.ಹೆಚ್.ಆರ್.ಲೀಲಾವತಿ ಅವರು ಅಸಾಂ ಹಾಡುಗಳನ್ನು ಹೇಳಿ ಸಭಿಕರ ಮನ ಸೋಲುವಂತೆ ಮಾಡಿದರು. ಕಾರ್ಯಕ್ರಮದ ನಿರೂಪಣೆಯನ್ನು ಬಿ.ಕೆ.ಮೀನಾಕ್ಷಿ ನಿರ್ವಹಿಸಿದರು.

ಸತ್ಯ ನುಡಿಯದೇ ಇದ್ದ ಮೇಲೆ ವಾಕ್ ಸ್ವಾತಂತ್ರ್ಯವಿದ್ದರೂ ಪ್ರಯೋಜನವಿಲ್ಲ

ಪಶ್ಚಿಮ ಬಂಗಾಳದ 22ನೇ ರಾಜ್ಯಪಾಲ ಗೋಪಾಲಕೃಷ್ಣ ದೇವದಾಸ್ ಗಾಂಧಿ ಅಭಿಮತ

ಮೈಸೂರು, ಜು.5(ಆರ್‌ಕೆ)-ಸತ್ಯ ನುಡಿಯುವ ಧೈರ್ಯ ಮಾಡದಿದ್ದರೆ ವಾಕ್ ಸ್ವಾತಂತ್ರ್ಯ (Freedom of Speech)ಇದ್ದರೂ ಪ್ರಯೋಜನವಿಲ್ಲ ಎಂದು ಮಾಜಿ ರಾಯಭಾರಿ ಹಾಗೂ ಪಶ್ಚಿಮ ಬಂಗಾಳದ 22ನೇ ರಾಜ್ಯಪಾಲ ಗೋಪಾಲ ಕೃಷ್ಣ ದೇವದಾಸ್ ಗಾಂಧಿ, ಇಂದಿಲ್ಲಿ ಅಭಿಪ್ರಾಯಪಟ್ಟಿದ್ದಾರೆ.



ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ಸ್ ಕ್ಲಬ್ ವತಿಯಿಂದ ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಆಯೋಜಿಸಿದ್ದ ಮೈಸೂರು ಸಾಹಿತ್ಯ ಸಂಭ್ರಮ-2025, 9ನೇ ಆವೃತ್ತಿ ಕಾರ್ಯಕ್ರಮದಲ್ಲಿ ಪಶ್ಚಿಮ ಬಂಗಾಳದ 22ನೇ ರಾಜ್ಯಪಾಲ ಗೋಪಾಲ ಕೃಷ್ಣ ದೇವದಾಸ್ ಗಾಂಧಿ ಅವರು (ಬಲಬದಿ) ಲೇಖಕ ಚಿರಾಗ್ ತಕ್ಕರ್‌ರೊಂದಿಗೆ ಚರ್ಚೆಯಲ್ಲಿ ಭಾಗವಹಿಸಿದ್ದರು.

ಮೈಸೂರು ಲಿಟರರಿ ಫೋರಂ ಚಾರಿಟಬಲ್ ಟ್ರಸ್ಟ್ ಮತ್ತು ಮೈಸೂರು ಬುಕ್ಸ್ ಕ್ಲಬ್ ಸಂಯುಕ್ತಾಶ್ರಯದಲ್ಲಿ ಮೈಸೂರಿನ ಸದರನ್ ಸ್ಟಾರ್ ಹೋಟೆಲ್ ಸಭಾಂಗಣದಲ್ಲಿ ಶನಿವಾರ ಆರಂಭವಾದ ಎರಡು ದಿನಗಳ 9ನೇ ಮೈಸೂರು ಸಾಹಿತ್ಯ ಸಂಭ್ರಮ-2025 ಕಾರ್ಯಕ್ರಮದಲ್ಲಿ ಲೇಖಕ ಹಾಗೂ ಅನುವಾದಕ ಚಿರಾಗ್ ತಕ್ಕರ್‌ರೊಂದಿಗೆ ನಡೆಸಿದ ಚರ್ಚೆಯಲ್ಲಿ ಪಾಲ್ಗೊಂಡು ಅವರು ಮಾತನಾಡುತ್ತಿದ್ದರು.

ರಾಷ್ಟ್ರಪಿತ ಮಹಾತ್ಮಗಾಂಧೀಜಿ ಅವರ ಮೊಮ್ಮಗನಾದ ಗೋಪಾಲ ಕೃಷ್ಣ ದೇವದಾಸ್ ಗಾಂಧಿ ಅವರು, ದೇಶದಲ್ಲಿ ಪ್ರತಿಯೊಬ್ಬರಿಗೂ ಮಾತನಾಡುವ ಸ್ವಾತಂತ್ರ್ಯವಿದೆ. ಅದೇ ರೀತಿ ಎಲ್ಲರೂ ಮಾತನಾಡಬಲ್ಲರು. ಆದರೆ ಸತ್ಯ ನುಡಿಯಲು ಕೆಲವರು ಭಯಪಡುತ್ತಾರೆ. ಹಾಗಾದರೆ ವಾಕ್ ಸ್ವಾತಂತ್ರ್ಯವಿದ್ದರೂ ಪ್ರಯೋಜನವೇನು ಎಂದು ಪ್ರಶ್ನಿಸಿದರು.

ಖ್ಯಾತ ಗಾಯಕಿ 'ಭಾರತ ರತ್ನ' ಪುರಸ್ಕೃತೆ ಎಂ.ಎಸ್.ಸುಬ್ಬಲಕ್ಷ್ಮಿ, ಪ್ರಸಿದ್ಧ ಸಮಾಜವಾದಿ ಚಿಂತಕ ಜಯಪ್ರಕಾಶ್ ನಾರಾಯಣ್ (ಜೆಪಿ) ಹಾಗೂ ಸಿ. ರಾಜಗೋಪಾಲಾಚಾರಿಯವರೊಂದಿಗಿನ ತಮ್ಮ ಒಡನಾಟವನ್ನು ಮೆಲುಕು ಹಾಕಿದ ಅವರು, ತಾನು (Self) ಮತ್ತು ಲೆಗಸಿಯನ್ನು ಅಳವಡಿಸಿಕೊಂಡಿದ್ದ ಮಹಾನ್ ನಾಯಕರ ಕುರಿತು ವಿವರಿಸಿದರು.

'A name inherited, a voice earned: Walking the delicate path between Legacy and self' ವಿಷಯ ಕುರಿತಂತೆ ಮಾತನಾಡಿದ ಗಾಂಧಿ ಅವರು, ಆಗಸದೆತ್ತರಕ್ಕೆ ಬೆಳೆದಿದ್ದ ಗಾಯಕಿ ಎಂ.ಎಸ್.ಸುಬ್ಬಲಕ್ಷ್ಮಿ ಅವರು ಸರಳ, ಸಜ್ಜನಿಕೆಯ ಸಾಂಪ್ರದಾಯಿಕ ಮಹಿಳೆಯಾಗಿ ಮನೆಯಲ್ಲಿ ಸೂಕ್ಷ್ಮಮತಿಯಾಗಿದ್ದರು. ಅದೇ ರೀತಿ ಭಾರತೀಯ ಇಂಗ್ಲಿಷ್ ಲೇಖಕ ಆರ್.ಕೆ.ನಾರಾಯಣ್, ಪಂಡಿತ್ ಜವಾಹರಲಾಲ್ ನೆಹರು, ರಾಜಗೋಪಾಲಾಚಾರಿ ಅವರೂ ಸಹ ಹಲವು ಕ್ಷೇತ್ರಗಳಲ್ಲಿ ಅವಿರತ ಸೇವೆ ಸಲ್ಲಿಸಿದ್ದಾಗ್ಯೂ ವ್ಯಕ್ತಿಗತವಾಗಿ ಬೇರೆಯವರೊಂದಿಗೆ ತೀವ್ರ ಹಂಬಲ್ ಆಗಿದ್ದರು ಎಂದು ನುಡಿದರು.

ಇಂದಿರಾಗಾಂಧಿ ಅವರು 1975ರಲ್ಲಿ 21 ತಿಂಗಳ ತುರ್ತು ಪರಿಸ್ಥಿತಿ ಘೋಷಿಸಿದ್ದ ಸಂದರ್ಭ ಪ್ರಜೆಗಳ ಮೂಲಭೂತ ಹಕ್ಕುಗಳ ದಮನವಾಯಿತು. ರಾಜಕೀಯ ವೈರಿಗಳೂ ಕಂಗಾಲಾದರು. ಆ ತುರ್ತು ಪರಿಸ್ಥಿತಿಯನ್ನು ಮಾಜಿ ಪ್ರಧಾನಿ ರಾಜೀವ್ ಗಾಂಧಿ ಸಹ ವಿರೋಧಿಸಿದ್ದರು ಎಂದ ಅವರು, ನಾನು ಕಷ್ಟದ ಸಂದರ್ಭದಲ್ಲೇ ಜನಿಸಿದವನಾದರೂ ಮುಂದಿನ ದಿನಗಳಲ್ಲಿ ಭಾರತಕ್ಕೆ ಉತ್ತಮ ಭವಿಷ್ಯವಿದೆ ಎಂದರು.

ವಿದೇಶದಲ್ಲಿ ತಲೆ ಮರೆಸಿಕೊಂಡಿದ್ದ ಆರೋಪಿ ಬಂಧನ

ಮಡಿಕೇರಿ,ಜು.5–(ಪಿ.ಎಸ್)–ಬಿಜೆಪಿ ಯುವ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದ ಆರೋಪಿ ವಿದೇಶದಲ್ಲಿ ತಲೆಮರೆಸಿ ಕೊಂಡಿದ್ದ ಸೋಮವಾರಪೇಟೆ ತಾಲೂಕಿನ ಅಬ್ದುಲ್ ರೆಹಮಾನ್ ಕಲ್ಕಂದೂರು ಎಂಬಾತನನ್ನು ರಾಷ್ಟ್ರೀಯ ತನಿಖಾ ದಳದ ಅಧಿಕಾರಿಗಳು ಕೇರಳದ ಕಣ್ಣೂರು ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದಾರೆ.



ಅಬ್ದುಲ್ ರೆಹಮಾನ್

ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ 21ನೇ ಆರೋಪಿಯಾಗಿದ್ದ ಅಬ್ದುಲ್ ರೆಹಮಾನ್ ಘಟನೆ ಬಳಿಕ ಕತಾರ್‌ನ ದೋಹಾದಲ್ಲಿ ತಲೆಮರೆಸಿಕೊಂಡಿದ್ದನು. ಹತ್ಯೆ ಪ್ರಕರಣ ಸಂಬಂಧ ಸೋಮವಾರಪೇಟೆಗೂ ಆಗಮಿಸಿದ್ದ ಎನ್‌ಐಎ ಅಧಿಕಾರಿಗಳ ತಂಡ ಅಬ್ದುಲ್ ರೆಹಮಾನ್ ಕುರಿತು ಆತನ ಮನೆಯವರನ್ನು ವಿಚಾರಣೆ ನಡೆಸಿ ಮನೆಗೆ ನೋಟಿಸ್ ಅಂಟಿಸಿತ್ತಲ್ಲದೆ, ಆರೋಪಿಗಳಿಗೆ ಲುಕ್‌ಔಟ್ ನೋಟೀಸ್ ಅನ್ನು ಜಾರಿಗೊಳಿಸಿತ್ತು.

ಎನ್‌ಐಎ ಅಧಿಕಾರಿಗಳ ತೀವ್ರ ಶೋಧದ ಬಳಿಕ ಆರೋಪಿ ಅಬ್ದುಲ್ ರೆಹಮಾನ್ ಬಗ್ಗೆ ಮಾಹಿತಿ ನೀಡಿದವರಿಗೆ ಬಹುಮಾನ ಸಹ ಘೋಷಣೆ ಮಾಡಿತ್ತು. ದೋಹಾದಿಂದ ಕೇರಳದ ಕಣ್ಣೂರು ವಿಮಾನ ನಿಲ್ದಾಣಕ್ಕೆ ಆಗಮಿಸಿದ ಅಬ್ದುಲ್ ರೆಹಮಾನ್‌ನನ್ನು ಎನ್‌ಐಎ ಅಧಿಕಾರಿಗಳು ಏರ್ ಪೋರ್ಟ್‌ನಲ್ಲಿ ಬಂಧಿಸಿ ಬಳಿಕ ಬೆಂಗಳೂರಿಗೆ ಕರೆದೊಯ್ದು ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ. ಹೆಚ್ಚಿನ ವಿಚಾರಣೆಗಾಗಿ ಆರೋಪಿಯನ್ನು ಮತ್ತೆ ಕಸ್ಟಡಿಗೆ ಪಡೆದು ಕೊಂಡಿದ್ದಾರೆ.

ಇಂದು ಬಾಬು ಪುಣ್ಯಸ್ಮರಣೆ

ಮಡಿಕೇರಿ: ಜಿಲ್ಲಾಡಳಿತ, ಸಮಾಜ ಕಲ್ಯಾಣ ಇಲಾಖೆಯಿಂದ ಜು.6ರ ಬೆಳಗ್ಗೆ 10.30ಕ್ಕೆ ಜಗಜೀವನ್ ರಾಂ ಪುಣ್ಯಸ್ಮರಣೆ ನಗರದ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ವೃತ್ತದ ಬಳಿಯಿರುವ ತಾಪಂ ಸಭಾಂಗಣದಲ್ಲಿ ನಡೆಯಲಿದೆ.

ಇಂದು ವಸ್ತುಪ್ರದರ್ಶನ

ಮಡಿಕೇರಿ: ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಸರ್ಕಾರದ ಸಾಧನೆ ಬಿಂಬಿಸುವ ವಸ್ತುಪ್ರದರ್ಶನ ಉದ್ಘಾಟನಾ ಕಾರ್ಯಕ್ರಮವು ಜು.6ರ ಬೆಳಗ್ಗೆ 10 ಗಂಟೆಗೆ ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ನಡೆಯಲಿದೆ. ಗಣ್ಯರು ಪಾಲ್ಗೊಳ್ಳಲಿದ್ದಾರೆ.

ತಾಯಿ ಕೊಲೆಗೈದ ಮಗನಿಗೆ ಜೀವಾವಧಿ ಶಿಕ್ಷೆ

ವಿರಾಜಪೇಟೆ, ಜು.5(ಡಿಎಂ)– ಆಸ್ತಿ ವಿಚಾರಕ್ಕಾಗಿ ವೃದ್ಧೆ ತಾಯಿಯನ್ನೇ ಹೊಡೆದು ಸಾಯಿಸಿ, ಆತ್ಮಹತ್ಯೆಯೆಂದು ಬಿಂಬಿಸಿದ ಮಗನಿಗೆ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಜೀವಾವಧಿ ಶಿಕ್ಷೆ ಮತ್ತು 50 ಸಾವಿರ ದಂಡ ವಿಧಿಸಿ ತೀರ್ಪು ನೀಡಿದೆ.

ತಾಲೂಕು ಕೊಳ್ತೋಡು ಬೈಗೋಡು ಗ್ರಾಮದ ನಿವಾಸಿ ಎಂ.ಬಿ. ಕಾರ್ಯಪ್ಪ ಪುತ್ರ ಎಂ.ಕೆ.ದೇವಯ್ಯ ಪ್ರಾಯ 53 ವರ್ಷ, ಜೀವಾವಧಿ ಶಿಕ್ಷೆಗೆ ಗುರಿಯಾದ ವ್ಯಕ್ತಿ.

ಘಟನೆಯ ಸಾರಂಶ: ತಾಲೂಕು ಕೊಳ್ತೋಡು ಬೈಗೋಡು ನಿವಾಸಿ ದಿವಂಗತ ಎಂ.ಬಿ ಕಾರ್ಯಪ್ಪ ಮತ್ತು ಕಾಮವ್ವ (ಕಾಮಿ) ದಂಪತಿಗಳಿಗೆ ಮೂವರು ಮಕ್ಕಳಲ್ಲಿ ಹಿರಿಯ ಮಗ ನಾಣಯ್ಯ ಐನ್ ಮನೆಯ ಸಮಿಪ ಮನೆ ನಿರ್ಮಾಣ ಮಾಡಿಕೊಂಡಿದ್ದರೆ, ಸಹೋದರಿ ಎಂ.ಕೆ.ವಿಮಲ ಮೈಸೂರಲ್ಲಿ ನೆಲೆಸಿದ್ದಾರೆ. ಮನೆಯಲ್ಲಿ ಇನ್ನೋರ್ವ ಪುತ್ರ ದೇವಯ್ಯ ಮತ್ತು 83 ವರ್ಷದ ತಾಯಿ ಕಾಮವ್ವ ಮಾತ್ರ ವಾಸವಿದ್ದರು. ವೃದ್ದೆ ವಯೋಸಹಜ ಕಾಯಿಲೆಯಿಂದ ಬಳಲುತ್ತಿದ್ದರು. ಡಿ.2 ರಂದು ರಾತ್ರಿ ಊಟ ಮುಗಿಸಿ ಮಲಗಿದ್ದ ಕಾಮವ್ವ ಮರುದಿನ ಬೆಳಿಗ್ಗೆ ಕಾಣೆಯಾಗಿದ್ದರು. ತೋಟದ ಎಲ್ಲೆಡೆ ಹುಡುಕಾಟ ನಡೆಸಿದಾಗ ಕೊನೆಯಲ್ಲಿ ಮನೆಯ ಆವರಣದಲ್ಲಿದ್ದ ತೆರೆದ ಬಾವಿಯಲ್ಲಿ ಶವವಾಗಿ



ಪತ್ತೆಯಾಗಿದ್ದರು. ಈ ಬಗ್ಗೆ ದೇವಯ್ಯನೇ ಗ್ರಾಮಾಂತರ ಠಾಣೆಯಲ್ಲಿ ದೂರು ದಾಖಲಿಸಿದ್ದರು. ಶವ ಪರೀಕ್ಷೆ ಸಮಯದಲ್ಲಿ ಪ್ರಕರಣದಲ್ಲಿ ಸಂಶಯವಿದೆ ಎಂದು ಮೃತರ ಮಗಳು ವಿಮಲ ಪೊಲೀಸರ ಮುಂದೆ ಹೇಳಿಕೆ ನೀಡಿದ್ದರು. ಇದರ ಮೇರೆಗೆ ವೃತ್ತ ನಿರೀಕ್ಷಕ ಬಿ.ಎಸ್ ಶ್ರೀಧರ್ ಹೆಚ್ಚುವರಿ ತನಿಖೆಗೆ ಮುಂದಾದರು. ಮರಣೋತ್ತರ ಪರೀಕ್ಷೆಯಲ್ಲಿ ಮೃತರ ದೇಹದಲ್ಲಿ ದೊರಕಿರುವ ನೀರು ಮತ್ತು ಬಾವಿಯಲ್ಲಿರುವ ನೀರನ್ನು ವಿಧಿ ವಿಜ್ಞಾನ ಕೇಂದ್ರಕ್ಕೆ ರವಾನಿಸಿದ್ದರು. ವಿಧಿ ವಿಜ್ಞಾನ ಪ್ರಯೋಗ ಕೇಂದ್ರದ ತಜ್ಞರು ಪರೀಕ್ಷೆ ಮಾಡಿ ಮೃತ ದೇಹದಲ್ಲಿ ದೊರಕಿರುವ ನೀರು ಮತ್ತು ಬಾವಿಯ ನೀರು ಹೊಂದಾಣಿಕೆಯಾಗಿಲ್ಲ ಎಂದು ವರದಿ ನೀಡಿದ್ದರು. ಕಾಮವ್ವರನ್ನು ಅನಾಮಿಕ ವ್ಯಕ್ತಿ ಕೊಲೆ ಮಾಡಿದ್ದು ಕೃತ್ಯವನ್ನು ಮರೆಮಾಚುವ ಉದ್ದೇಶದಿಂದ ಮೃತದೇಹವನ್ನು ಬಾವಿಗೆ ಹಾಕಿರುತ್ತಾರೆ ಎಂಬುದು ತನಿಖೆಯಿಂದ ದೃಢವಾಗಿದೆ. ವಿಚಾರಣೆಯ ಸಮಯದಲ್ಲಿ ಕಾಮವ್ವರ ಜೊತೆಯಲ್ಲಿದ್ದ ದೇವಯ್ಯನನ್ನು ವಿಚಾರಣೆಗೊಳಪಡಿಸಿದಾಗ ಆತ ನೀಡಿದ ಹೇಳಿಕೆ ಬಗ್ಗೆ ಸಂಶಯ ವ್ಯಕ್ತವಾಗಿ ಪೋಲೀಸರು ದೇವಯ್ಯನನ್ನು ಬಂಧಿಸಿ ಕಾರಾಗೃಹಕ್ಕೆ ಕಳಿಸಿದ್ದರು. ವ್ಯಕ್ತಿಯನ್ನು ಕೊಲೆ ಮಾಡಿ ಸಾಕ್ಷಾಧಾರಗಳನ್ನು ನಾಶ ಮಾಡಿರುವ ವಿರುದ್ದ 2021ರ ಡಿ.9 ರಂದು ಮರು ಪ್ರಕರಣ ದಾಖಲಾಗಿ ಮಾ.16 ರಂದು ತನಿಖಾ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿದ್ದರು.

ನಾಲ್ಕು ವರ್ಷಗಳ ಕಾಲ ವಿಚಾರಣೆ ನಡೆಸಿದ 2ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರಾದ ಎಸ್. ನಟರಾಜು ಕಳೆದ ಬುಧವಾರ ನೀಡಿದ ತೀರ್ಪಿನಲ್ಲಿ ಕೊಲೆ ಆರೋಪ ಸಾಬೀತಾದ ಹಿನ್ನಲೆಯಲ್ಲಿ ಆರೋಪಿ ದೇವಯ್ಯನಿಗೆ ಜೀವಾವಧಿ ಕಠಿಣ ಶಿಕ್ಷೆ ಮತ್ತು 50 ಸಾವಿರ ದಂಡ, ದಂಡ ಪಾವತಿಸಲು ತಪ್ಪಿದಲ್ಲಿ ಮತ್ತೆ 6 ತಿಂಗಳ ಹೆಚ್ಚುವರಿ ಕಾರಾಗೃಹವಾಸ ಅನುಭವಿಸುವಂತೆ ಆದೇಶಿಸಿದರು. ಐ.ಪಿ.ಸಿ ಕಲಂ.201 ಗೆ ಸಂಬಂಧಿಸಿದಂತೆ 3 ವರ್ಷಗಳ ಸಾದಾ ಶಿಕ್ಷೆ ಮತ್ತು 20 ಸಾವಿರ ರೂ ದಂಡ ವಿಧಿಸಿದರು. ದಂಡ ಪಾವತಿಸಲು ತಪ್ಪಿದಲ್ಲಿ 3 ತಿಂಗಳ ಕಾಲ ಹೆಚ್ಚುವರಿ ಸಜೆ ಅನುಭವಿಸುವಂತೆ ತೀರ್ಪು ತಿಳಿಸಿದೆ. ಸರಕಾರಿ ಅಭಿಯೋಜಕ ಯಾಸೀನ್ ಅಹಮ್ಮದ್ ಪ್ರಾಸಿಕ್ಯೂಷನ್ ಪರ ವಾದ ಮಂಡಿಸಿದರು.

ಮಳೆ ಮುನ್ನೆಚ್ಚರಿಕೆಗಾಗಿ ಮುಖಂಡರ ಸಭೆ

ಸುಂಟಿಕೊಪ್ಪ: ಮಳೆಯಿಂದ ಪ್ರಾಕೃತಿಕ ವಿಕೋಪಗಳ ಸಂಬಂಧ ಮುನ್ನೆಚ್ಚರಿಕಾ ಕ್ರಮ ಕೈಗೊಳ್ಳುವ ನಿಟ್ಟಿನಲ್ಲಿ ಸೋಮವಾರಪೇಟೆ ಉಪವಿಭಾಗದ ಡಿವೈಎಸ್‌ಪಿ ಚಂದ್ರಶೇಖರ್ ನೇತೃತ್ವದಲ್ಲಿ ಗ್ರಾಮಗಳ ಮುಖಂಡರೊಂದಿಗೆ ಸಭೆಯನ್ನು ನಡೆಸಲಾಯಿತು.

ಸುಂಟಿಕೊಪ್ಪದಲ್ಲಿ ನಡೆದ ಸಭೆಯಲ್ಲಿ ಮಾತನಾಡಿದ ಚಂದ್ರಶೇಖರ್, ಜಿಲ್ಲೆಯಲ್ಲಿ ಅತೀವ ಮಳೆಯಾಗುತ್ತಿದ್ದು ಹವಾಮಾನ ಇಲಾಖೆ ವರದಿ ಪ್ರಕಾರ ವಾಡಿಕೆಗಿಂತ ಹೆಚ್ಚು ಮಳೆಯಾದ ಹಿನ್ನೆಲೆ ಭೂಮಿ ಸಡಿಲಗೊಳ್ಳುತ್ತದೆ. ಇಂತಹ ಸಂದರ್ಭ ಪ್ರಾಕೃತಿಕ ವಿಕೋಪಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಈ ವೇಳೆ ವಿಡಿಯೋ ಚಿತ್ರೀಕರಣ ಮಾಡದೆ ಆಪತ್ತು ಸಂಭವಿಸಿದ ಸ್ಥಳದ ತುರ್ತು ಮಾಹಿತಿಯನ್ನು ಸಂಬಂಧಿಸಿದ ಇಲಾಖೆ ರವಾನಿಸುವ ಮೂಲಕ ಅಮೂಲ್ಯ ಜೀವಗಳ ರಕ್ಷಣಾ ಕಾರ್ಯಕ್ಕೆ ಮುಂದಾಗಬೇಕೆಂದು ಕರೆ ನೀಡಿದರು.

ಭೂ ಕುಸಿತ, ಮರಗಳು ರಸ್ತೆಗೆ ಉರುಳಿದ ಸಂದರ್ಭ ಕೂಡಲೇ ರಕ್ಷಣಾ ಕಾರ್ಯಕ್ಕೆ ಜೆಸಿಬಿ, ಕ್ರೇನ್ ಮಾಲೀಕರು, ಆಪರೇಟರ್‌ಗಳು, ಆಂಬುಲೆನ್ಸ್ ಮತ್ತು ಅವುಗಳ ಚಾಲಕರು, ವುಡ್ ಕಟ್ಟರ್‌ಗಳನ್ನು ಹೊಂದಿರುವ ಮಾಲೀಕರು, ಸ್ವಯ ಸೇವಾ ಸಂಘಗಳು, ಮುಖಂಡರು ತಮ್ಮೊಂದಿಗೆ ಕೈ ಜೋಡಿಸಬೇಕೆಂದು



ಮಳೆ ಮುನ್ನೆಚ್ಚರಿಕೆಗಾಗಿ ಡಿವೈಎಸ್‌ಪಿ ಚಂದ್ರಶೇಖರ್ ಮುಖಂಡರ ಸಭೆ ನಡೆಸಿದರು.

ಮನವಿ ಮಾಡಿದರು.

ಕುಶಾಲನಗರ ವೃತ್ತ ನಿರೀಕ್ಷಕ ದಿನೇಶ್ ಕುಮಾರ್ ಮಾತನಾಡಿ, ಅಪಾಯದ ಅಂಚಿನಲ್ಲಿರುವ ಸ್ಥಳಗಳ ಮಾಹಿತಿ ನೀಡುವಂತೆ ಸೂಚಿಸಿದರು. ತಾವುಗಳು ಸಲ್ಲಿಸಿದ ಮನವಿಯನ್ನು ಸರ್ಕಾರ ಹಾಗೂ ಜಿಲ್ಲಾಡಳಿತಕ್ಕೆ ಕಳುಹಿಸಿ ಸೂಕ್ತ ಪರಿಹಾರ ಕಂಡುಕೊಳ್ಳಲಾಗುವುದು ಎಂದರು. ಪಂಚಾಯಿತಿ ಸದಸ್ಯರಾದ ಪ್ರಸಾದ್ ಕುಟ್ಟಪ್ಪ ರಫೀಕ್‌ಖಾನ್, ಶಬ್ಬೀರ್, ಬಿ.ಕೆ.ಪ್ರಶಾಂತ್ ಮಾತನಾಡಿ, ಪಟ್ಟಣದ ಪಂಪ್ ಬಡಾವಣೆ ಅಪಾಯದ ಅಂಚಿನಲ್ಲಿದ್ದು, ನೂರಾರು ಕುಟುಂಬಗಳು ಇಲ್ಲಿ ವಾಸಿಸುತ್ತಿವೆ. ಈ ಸ್ಥಳದಲ್ಲೇ ಅಂಗನವಾಡಿ ಕೇಂದ್ರವೂ ಇದ್ದು, ಅನಾಹುತ ಸಂಭವಿಸುವ ಮುನ್ನ ಇದಕ್ಕೆ ಸೂಕ್ತ ಪರಿಹಾರವನ್ನು ಕಂಡುಕೊಳ್ಳಬೇಕೆಂದು ಆಗ್ರಹಿಸಿದರು. ಗ್ರಾಪಂ ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್, ಅಧ್ಯಕ್ಷ ಪಿ.ಆರ್.ಸುನಿಲ್ ಕುಮಾರ್, ಪೊಲೀಸ್ ಠಾಣಾಧಿಕಾರಿ ಮೋಹನ್‌ರಾಜ್, ಗ್ರಾಮ ಆಡಳಿತಾಧಿಕಾರಿ ಉಮೇಶ್, ಚೆಸ್ಕಾಂ, ಶಿಕ್ಷಣ ಇಲಾಖೆ, ಪೊಲೀಸ್ ಸಿಬ್ಬಂದಿ, ವಿವಿಧ ಇಲಾಖೆಗಳ ಅಧಿಕಾರಿಗಳು, ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಗ್ರಾಮಸ್ಥರು ಇದ್ದರು.

ಗ್ರಂಥಾಲಯಕ್ಕೆ ಪುಸ್ತಕ ಒದಗಿಸಲು ಮನವಿ

ಮಡಿಕೇರಿ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಕನಕ ಸಾಹಿತ್ಯ, ತತ್ವಪದ ಸಾಹಿತ್ಯ, ಕೀರ್ತನ ಸಾಹಿತ್ಯ, ಭಕ್ತಿ/ಅನುಭಾವ ಸಾಹಿತ್ಯ ಕುರಿತು ಅಧ್ಯಯನ, ಪ್ರಕಟಣೆ, ಪ್ರಸಾರ, ಪ್ರೋತ್ಸಾಹದಾಯಕ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಗಳ ಪ್ರಯೋಜನವು ಆಸಕ್ತ ಓದುಗರಿಗೆ, ಅಧ್ಯಯನಾಕಾಂಕ್ಷಿಗಳಿಗೆ, ಸಂಶೋಧನಾರ್ಥಿಗಳಿಗೆ, ಶಿಕ್ಷಕರಿಗೆ, ಸಂಸ್ಕೃತಿಪ್ರಿಯರಿಗೆ ತಲುಪಬೇಕೆಂಬುದು ಕೇಂದ್ರದ ಉದ್ದೇಶವಾಗಿದೆ.

ಪರಾಮರ್ಶನ ಗ್ರಂಥಾಲಯವನ್ನು ತೆರೆದು ಉಚಿತವಾಗಿ ಆಸಕ್ತರಿಗೆ ಓದಲು, ಅಧ್ಯಯನ ಮಾಡಲು ಅವಕಾಶ ಕಲ್ಪಿಸಿದೆ. ಈ ಗ್ರಂಥಾಲಯದಲ್ಲಿ ಕನಕ ಸಾಹಿತ್ಯ, ಕೀರ್ತನ ಸಾಹಿತ್ಯ, ತತ್ವಪದ ಸಾಹಿತ್ಯ, ಭಕ್ತಿ/ಅನುಭಾವ ಸಾಹಿತ್ಯ, ಶರಣ ಸಾಹಿತ್ಯಕ್ಕೆ ಸಂಬಂಧಿಸಿದ ಪುಸ್ತಕಗಳು ಮಾತ್ರ ಲಭ್ಯವಿದೆ. ಸಂಸ್ಥೆಗಳು, ವಿದ್ವಾಂಸರು, ಸಾರ್ವಜನಿಕರು ಯಾವುದೇ ಭಾಷೆಯ ಪುಸ್ತಕಗಳ ಒಂದೊಂದು ಪ್ರತಿ ಕಳುಹಿಸಿ ಕೊಟ್ಟರೆ ಗ್ರಂಥಾಲಯವನ್ನು ಮತ್ತಷ್ಟು ವಿಸ್ತರಿಸಲು ಸಾಧ್ಯವಾಗುತ್ತದೆ ಸಾರ್ವಜನಿಕರು, ಸಂಘ–ಸಂಸ್ಥೆಗಳು ಉಚಿತವಾಗಿ ಅಥವಾ ರಿಯಾಯಿತಿ ದರದಲ್ಲಿ ಒದಗಿಸಬೇಕಾಗಿ ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರವು ಮನವಿ ಮಾಡಿದ್ದಾರೆ ಎಂದು ಕನ್ನಡ–ಸಂಸ್ಕೃತಿ ಇಲಾಖೆ ತಿಳಿಸಿದೆ.

ಕುಶಾಲನಗರ : ದ್ವಿಭಾಷಾ ನೀತಿ ಜಾರಿಗೆ ಒತ್ತಾಯಿಸಿ ಕರವೇ ಪ್ರತಿಭಟನೆ



ದ್ವಿಭಾಷಾ ಶಿಕ್ಷಣ ನೀತಿ ಜಾರಿಗೆ ಒತ್ತಾಯಿಸಿ ರಕ್ಷಣಾ ವೇದಿಕೆ ಪ್ರತಿಭಟನೆ ನಡೆಸಿತು

ಕುಶಾಲನಗರ, ಜು.5–ರಾಜ್ಯದ ಶಿಕ್ಷಣ ವ್ಯವಸ್ಥೆಯಲ್ಲಿ ದ್ವಿಭಾಷಾ ಶಿಕ್ಷಣ ನೀತಿಯನ್ನು ಜಾರಿಗೆ ತರುವಂತೆ ಒತ್ತಾಯಿಸಿ ಕರ್ನಾಟಕ ರಕ್ಷಣಾ ವೇದಿಕೆ ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು.

ಕರ್ನಾಟಕ ರಕ್ಷಣಾ ವೇದಿಕೆಯ ಜಿಲ್ಲಾ ಘಟಕದ ಅಧ್ಯಕ್ಷ ದೀಪಕ್ ಕನ್ನಡಿಗ ನೇತೃತ್ವದಲ್ಲಿ ಕರವೇ ಕಾರ್ಯಕರ್ತರು ತಹಶೀಲ್ದಾರ್ ಕಚೇರಿ ಮುಂದೆ ಕೆಲಕಾಲ ಪ್ರತಿಭಟನೆ ನಡೆಸಿದರು.

ರಾಜ್ಯದ ಪಠ್ಯಕ್ರಮದಲ್ಲಿ ಕನ್ನಡ ಪ್ರಥಮ ಭಾಷೆಯಾಗಿ, ಇಂಗ್ಲೀಷ್ ದ್ವಿತೀಯ ಭಾಷೆಯಾಗಿ ಹಾಗೂ ಹಿಂದಿಯನ್ನು ತೃತೀಯ ಭಾಷೆಯಾಗಿ ಕಲಿಸಲಾಗುತ್ತಿದೆ. ರಾಜ್ಯ ಪಠ್ಯಕ್ರಮದಲ್ಲಿ ಓದುವ ಮಕ್ಕಳು ಮೂರನೇ ಭಾಷೆಯಾಗಿ ಹಿಂದಿಯನ್ನು ಕಲಿಯುವುದು ಕಡ್ಡಾಯವಾಗಿದೆ ಮಾತ್ರವಲ್ಲ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ನೂರು ಅಂಕಗಳಿಗೆ ಹಿಂದಿ ಪರೀಕ್ಷೆಯನ್ನು ಕಡ್ಡಾಯವಾಗಿ ಬರೆಯಬೇಕಿದೆ. ತೃತೀಯ ಭಾಷೆಯಾದ ಹಿಂದಿ ವಿದ್ಯಾರ್ಥಿಗಳಿಗೆ ಅನಗತ್ಯವಾದ ಒತ್ತಡವನ್ನು ಒಡ್ಡುತ್ತಿದೆಯೆಂದು ದೂರಿದರು. ಹಿಂದಿಯ ಕಡ್ಡಾಯ ಶಿಕ್ಷಣದಿಂದ ವಿದ್ಯಾರ್ಥಿಗಳಿಗೆ ಉಂಟಾಗುತ್ತಿರುವ ಶೈಕ್ಷಣಿಕ ಹೊರೆಯನ್ನು ಸ್ಪಷ್ಟವಾಗಿ ತೋರಿಸುತ್ತದೆ. ಹಿಂದಿ ಹೇರಿಕೆಗೆ ಕನ್ನಡದ ಮಕ್ಕಳ ಭವಿಷ್ಯ ಬಲಿಯಾಗುತ್ತಿದೆ. ಈ ಹಿನ್ನೆಲೆಯಲ್ಲಿ ತ್ರಿಭಾಷಾ ಸೂತ್ರದ ಕುರಿತು ರಾಷ್ಟ್ರಕವಿ ಕುವೆಂಪು ವಿರೋಧವನ್ನು ಸಾರಿದ್ದರೆಂದು ರಾಜ್ಯ ಸಂಚಾಲಕಿ ದೀಪಾ ಪೂಜಾರಿ ಹೇಳಿದರು.

ಉಪ ತಹಶೀಲ್ದಾರ್ ಅನಿತಾರ ಮೂಲಕ ರಾಜ್ಯ ಸರ್ಕಾರಕ್ಕೆ ಮನವಿ ಪತ್ರ ಸಲ್ಲಿಸಲಾಯಿತು. ಕರವೇ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ಸಂಧ್ಯಾ ಗಣೇಶ್, ತಾಲೂಕು ಅಧ್ಯಕ್ಷ ಅಣ್ಣಯ್ಯ, ಮಹಿಳಾ ತಾಲೂಕು ಅಧ್ಯಕ್ಷೆ ರೂಪಾ ಗಣೇಶ್, ಯುವ ಘಟಕದ ಅಧ್ಯಕ್ಷ ವಸಂತ್ ಆಚಾರ್ಯ, ಗೌರವಾಧ್ಯಕ್ಷ ರೊನಾಲ್ಡ್, ಶೃತಿ ಗಿರೀಶ್, ರವೀಶ್, ಕುಮಾರ್ ದೇವಾಂಗ, ಶೈಲಾ ದೇವಾಂಗ, ಘಟಕದ ಪದಾಧಿಕಾರಿಗಳು ಪಾಲ್ಗೊಂಡಿದ್ದರು.

ಹಳೆ ಕ್ರೀಡಾ ವಿದ್ಯಾರ್ಥಿಗಳ ಸಂಘದಿಂದ ಸಮವಸ್ತ್ರ ವಿತರಣೆ



ನಿಡ್ತ ಗ್ರಾಮದ ಸರ್ಕಾರಿ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡಲಾಯಿತು.

ಮಡಿಕೇರಿ,ಜು.5– ಶನಿವಾರಸಂತೆ ಬಳಿಯ ನಿಡ್ತ ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಹಳೆ ಕ್ರೀಡಾ ವಿದ್ಯಾರ್ಥಿಗಳ ಸಂಘದಿಂದ ಸಮವಸ್ತ್ರ ವಿತರಣೆ ಮಾಡಲಾಯಿತು.

ನಿಡ್ತ ಗ್ರಾಪಂ ಅಧ್ಯಕ್ಷ ಟಿ.ಕೆಅಶೋಕ್ ಮಾತನಾಡಿ, ಇಂದು ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಸಂಖ್ಯೆ ಕಡಿಮೆಯಾಗಿದೆ. ಆದ್ದರಿಂದ ಪೋಷಕರು ತಮ್ಮ ಮಕ್ಕಳನ್ನು ಸರ್ಕಾರಿ ಶಾಲೆಗಳಿಗೆ ಸೇರಿಸುವಂತೆ ಮನವಿ ಮಾಡಿದರು.

ವಿದ್ಯಾರ್ಥಿ ಸಂಘದ ಅಧ್ಯಕ್ಷ ಜಯಕುಮಾರ್, ಸಮೂಹ ಸಂಪನ್ಮೂಲ ವ್ಯಕ್ತಿ ದಿನೇಶ್ ಮಾತನಾಡಿದರು. ವೇದಿಕೆಯಲ್ಲಿ ಗ್ರಾಮಸ್ಥ ಸುಬ್ಬಪ್ಪ, ಪಿಡಿಓ ಮಾನಸ, ನಿವೃತ್ತ ಮುಖ್ಯ ಶಿಕ್ಷಕಿ ಸ್ವಾತಿ, ಸಿಆರ್‌ಪಿ, ದಿನೇಶ್, ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷೆ ಪೂಜಾ, ಮುಖ್ಯ ಶಿಕ್ಷಕಿ ರತ್ನ, ಪುಟ್ಟಣ್ಣ ಗ್ರಾಪಂ ಸದಸ್ಯರಾದ ಕಾರ್ತಿಕ್, ಆನಂದ್, ಪುಟ್ಟಸ್ವಾಮಿ ಹಾಜರಿದ್ದರು.

ಜು.10, ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ

ಅಗತ್ಯ ಸಿದ್ಧತೆಗೆ ಜಿಲ್ಲಾಧಿಕಾರಿ ಸೂಚನೆ

ಚಾಮರಾಜನಗರ, ಜು.5 – ಇತಿಹಾಸ ಪ್ರಸಿದ್ಧ ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ ಜು. 10ರಂದು ನಡೆಯಲಿದ್ದು, ಇದರ ಸುಗಮ ನಿರ್ವಹಣೆಗೆ ಅಗತ್ಯವಿರುವ ಎಲ್ಲಾ ಸಿದ್ದತೆಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವಂತೆ ಜಿಲ್ಲಾಧಿಕಾರಿ ಶಿಲ್ಪಾ ನಾಗ್ ಸೂಚಿಸಿದ್ದಾರೆ.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿಂದು ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ ಸಂಬಂಧ ನಡೆದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ಸುಗಮವಾಗಿ ರಥ ಸಾಗಲು ಪೂರಕವಾಗಿ ಮರಳು ಹಾಕುವ ವ್ಯವಸ್ಥೆಯಾಗಬೇಕು. ಮಾರ್ಗಮಧ್ಯದಲ್ಲಿ ವಿದ್ಯುತ್ ತಂತಿಗಳು ಅಡಚಣೆಯಾಗದಂತೆ ಪರಿಶೀಲಿಸಿ. ಪೂಜಾ ಕೈಂಕರ್ಯಗಳು ಹಿಂದಿನಿಂದ ನಡೆದು ಬಂದಿರುವ ಪರಂಪರೆ ಅನುಸಾರವೇ ಸುಸೂತ್ರವಾಗಿ ನಡೆಯುವಂತೆ ನೋಡಿಕೊಳ್ಳಬೇಕು ಎಂದರು.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸುವುದರಿಂದ ಜನದಟ್ಟಣೆ ಉಂಟಾಗಲಿದ್ದು, ಯಾವುದೇ ತೊಂದರೆಯಾಗದಂತೆ ರಥೋತ್ಸವ ವೀಕ್ಷಣೆ, ದೇವಾಲಯ ಪ್ರವೇಶ, ಮತ್ತಿತರ ಪೂಜಾ ಕಾರ್ಯಕ್ರಮಗಳಿಗೆ ಭಕ್ತಾದಿಗಳಿಗೆ ಅನುವು ಮಾಡಿಕೊಡಲು ಸೂಕ್ತ ವ್ಯವಸ್ಥೆ ಕಲ್ಪಿಸಬೇಕು ಎಂದು ತಿಳಿಸಿದರು.



ಶ್ರೀ ಚಾಮರಾಜೇಶ್ವರಸ್ವಾಮಿ ಮಹಾರಥೋತ್ಸವ ಸಂಬಂಧ ಪೂರ್ವಭಾವಿ ಸಭೆ ನಡೆಯಿತು

ಕುಡಿಯುವ ನೀರು, ಪ್ರಸಾದ ವ್ಯವಸ್ಥೆಯನ್ನು ಪರಿಶೀಲಿಸಬೇಕು. ಶುದ್ದತೆಯ ಬಗ್ಗೆ ಪರೀಕ್ಷಿಸಬೇಕು. ಜಾತ್ರಾ ಸಂದರ್ಭದಲ್ಲಿ ತಾತ್ಕಾಲಿಕವಾಗಿ ವ್ಯಾಪಾರ ಮಳಿಗೆಗಳನ್ನು ಸ್ಥಾಪಿಸುವವರಿಗೆ ಅನುಕೂಲ ಮಾಡಿಕೊಡಬೇಕು. ರಥೋತ್ಸವ ನಡೆಯುವ ಸಮೀಪದ ಆವರಣದಲ್ಲಿ ತಾತ್ಕಾಲಿಕ ಆರೋಗ್ಯ ಕೇಂದ್ರ ತೆರೆಯಬೇಕು. ಆಂಬುಲೆನ್ಸ್, ಅಗ್ನಿಶಾಮಕ ವಾಹನಗಳು ನಿಯೋಜನೆಯಾಗಬೇಕು ಎಂದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಬಿ.ಟಿ. ಕವಿತಾ ಮಾತನಾಡಿ, ಜನಸಂದಣಿ ಹೆಚ್ಚಿರುವ ಸ್ಥಳಗಳಲ್ಲಿ ಕೈಗೊಳ್ಳಬೇಕಿರುವ ಕ್ರಮಗಳ ಬಗ್ಗೆ ಎಸ್‌ಒಪಿ ಇದೆ. ಅದರ ಪ್ರಕಾರವೇ ಮಾಡಬೇಕೆಂದು ಸಂಬಂಧಪಟ್ಟ ಇಲಾಖೆಗಳಿಗೆ ಈಗಾಗಲೇ ಪತ್ರ ಬರೆಯಲಾಗಿದೆ. ರಥೋತ್ಸವ ಸಂದರ್ಭದಲ್ಲಿ ಇಬ್ಬರು ಡಿವೈಎಸ್‌ಪಿ, 10 ಇನ್ಸ್‌ಪೆಕ್ಟರ್ 20 ಪೊಲೀಸ್ ಸಬ್ ಇನ್ಸ್‌ಪೆಕ್ಟರ್, 40 ಸಹಾಯಕ ಸಬ್ ಇನ್ಸ್‌ಪೆಕ್ಟರ್ ಹಾಗೂ ಪೊಲೀಸ್ ಕಾನ್ಸ್‌ಟೇಬಲ್, ಹೋಂ ಗಾರ್ಡ್, ಇನ್ನಿತರ ಪೊಲೀಸ್ ತುಕಡಿಗಳನ್ನು ನಿಯೋಜಿಸಲಾಗಿದೆ. ವಾಹನಗಳ ಪಾರ್ಕಿಂಗ್ ಸ್ಥಳವನ್ನು ನಿಗದಿ ಮಾಡಲಾಗಿದೆ. ಸಂಚಾರ ನಿರ್ವಹಣೆಗೆ ಪೂರಕವಾಗಿರುವ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು.

ಹೆಚ್ಚುವರಿ ಜಿಲ್ಲಾಧಿಕಾರಿ ಟಿ. ಜವರೇಗೌಡ, ತಹಶೀಲ್ದಾರ್ ಬಿ.ಗಿರಿಜಾ, ದೇವಾಲಯದ ಮುಖ್ಯ ಅರ್ಚಕ ರಾಮಕೃಷ್ಣ ಭಾರದ್ವಜ್, ಎನ್. ದರ್ಶನ್, ದೇವಾಲಯದ ಅಭಿವೃದ್ಧಿ ಸಲಹಾ ಸಮಿತಿ ಸದಸ್ಯ ಸುರೇಶ್ ನಾಯಕ, ಚಾ.ರಂ. ಶ್ರೀನಿವಾಸಗೌಡ, ಮಾಧು, ಶ್ರೀ ಚಾಮರಾಜೇಶ್ವರ ದೇವಾಲಯದ ಪ್ರಭಾರ ಕಾರ್ಯನಿರ್ವಾಹಕ ಅಧಿಕಾರಿ ಬಿ.ರಾಜಶೇಖರಮೂರ್ತಿ, ಬಂಡಿಗಾರ್ ಮಹೇಶ್, ಲೋಕೋಪಯೋಗಿ ಇಲಾಖೆಯ ಕಾರ್ಯಪಾಲಕ ಎಂಜಿನಿಯರ್ ಕಿರಣ್, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮದ ಕಾರ್ಯನಿರ್ವಾಹಕ ಎಂಜಿನಿಯರ್ ಪ್ರದೀಪ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಎಸ್. ಚಿದಂಬರ, ಜಿಲ್ಲಾ ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಎಂ.ವಿ. ಸುಧಾ, ನಗರಸಭೆ ಪೌರಾಯುಕ್ತರಾದ ಎಸ್.ವಿ. ರಾಮದಾಸ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಸಂದೀಪ್ ಬಸರಗಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ನಂಜುಂಡಯ್ಯ, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.

ಪುರಸಭೆ ಕಚೇರಿ ಆವರಣ, ಕ್ರೀಡಾಂಗಣದಲ್ಲಿ ಕಲ್ಲಿನಾಸನ



ಪಟ್ಟಣದ ಪಾರ್ಕ್, ಕ್ರೀಡಾಂಗಣದಲ್ಲಿ ಕಲ್ಲಿನಾಸನ ಹಾಕುತ್ತಿರುವುದನ್ನು ಪುರಸಭಾ ಸದಸ್ಯರು ಪರಿಶೀಲಿಸಿದರು

ಗುಂಡ್ಲುಪೇಟೆ, ಜು–5 (ಸೋಮ್.ಜಿ)– ಡಿ.ದೇವರಾಜ ಅರಸು ಕ್ರೀಡಾಂಗಣ ಹಾಗೂ ಪುರಸಭೆ ಕಚೇರಿ ಆವರಣದಲ್ಲಿ ಕಲ್ಲಿನಾಸನ ಹಾಕಲಾಗಿದೆ. ಉಳಿದ ಪಾರ್ಕ್‌ಗಳಿಗೂ ಹಾಕಲು ಚಿಂತನೆ ನಡೆಸಲಾಗಿದೆ ಎಂದು ಅಧ್ಯಕ್ಷ ಮಧುಸೂದನ್ ತಿಳಿಸಿದ್ದಾರೆ.

ಪಟ್ಟಣದಲ್ಲಿನ ಮೂರು ಪಾರ್ಕ್, ಡಿ.ದೇವರಾಜ ಅರಸು ಕ್ರೀಡಾಂಗಣ ಹಾಗೂ ಪುರಸಭೆ ಕಚೇರಿ ಆವರಣದಲ್ಲಿ ಕಲ್ಲಿನಾಸನ ಹಾಕಲಾಗಿದೆ. ಉಳಿದ ಪಾರ್ಕ್‌ಗಳಿಗೂ ಹಾಕಲು ಚಿಂತನೆ ಕೂಡ ನಡೆಸಲಾಗಿದೆ. ಪಟ್ಟಣದ ಪಾರ್ಕ್‌ಗಳು ಹಾಗೂ ಕ್ರೀಡಾಂಗಣಕ್ಕೆ ವಾಯುವಿಹಾರಕ್ಕೆ ಬಂದಾಗ ಸಾರ್ವಜನಿಕರಿಗೆ ಹೆಚ್ಚಿನ ಕಲ್ಲಿನಾಸಿಗೆ ಇರಲಿಲ್ಲ. ಪುರಸಭಾ ಸದಸ್ಯ ರಾಜ್‌ಗೋಪಾಲ್ ಹಲವಾರು ಬಾರಿ ಸಭೆಗಳಲ್ಲಿ ಈ ವಿಚಾರದ ಬಗ್ಗೆ ಗಮನ ಸೆಳೆಸಿದ್ದರ ಫಲವಾಗಿ ಈ ಬಾರಿ ಶಾಸಕ ಹೆಚ್.ಎಂ.ಗಣೇಶ್ ಪ್ರಸಾದ್ ಸೂಚನೆ ಮೇರೆಗೆ ಕಲ್ಲಿನ ಆಸನದ ವ್ಯವಸ್ಥೆ ಕಲ್ಪಿಸಿಕೊಟ್ಟಿದ್ದಾರೆ.

5 ಲಕ್ಷ ರೂ. ವೆಚ್ಚದಲ್ಲಿ 31 ಕಲ್ಲಿನಾಸನ ಹಾಕಲಾಗಿದೆ ಎಂದು ಪುರಸಭೆ ಮುಖ್ಯಾಧಿಕಾರಿ ಎಸ್. ಶರವಣ ಮಾಹಿತಿ ನೀಡಿದ್ದಾರೆ. ಸಾರ್ವಜನಿಕರು ಕೂರಲು ಪುರಸಭೆ ಅವಕಾಶ ಮಾಡಿಕೊಟ್ಟ ಬಗ್ಗೆ ಪಟ್ಟಣದ ಸಾರ್ವಜನಿಕರು, ವಾಯುವಿಹಾರಿಗಳು ಅಧ್ಯಕ್ಷ ಮಧುಸೂದನ್ ಹಾಗೂ ಶಾಸಕರ ಕಾರ್ಯವೈಖರಿ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ರೇಷ್ಮೆ ಇಲಾಖೆ ನಿವೃತ್ತ ನೌಕರರಿಗೆ ಬೀಳ್ಕೊಡುಗೆ



ರೇಷ್ಮೆ ಮಾರುಕಟ್ಟೆಯಲ್ಲಿ ನಿವೃತ್ತರಾದ ಎಸ್.ಶಿವಕುಮಾರ್ ಹಾಗೂ ಮಹಾದೇವಪ್ಪ ದಂಪತಿಗಳನ್ನು ರೇಷ್ಮೆ ಸಹಾಯಕ ನಿರ್ದೇಶಕ ಎನ್. ಪುಟ್ಟ ಮಾದಯ್ಯ ಸನ್ಮಾನಿಸಿದರು.

ಯಳಂದೂರು, ಜು.5 (ವಿ.ನಾಗರಾಜು)– ಸಮೀಪದ ಸಂತೇಮರಹಳ್ಳಿ ಗ್ರಾಮದ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದ ಅನುಚರರಾದ ಎಸ್.ಶಿವಕುಮಾರ್ ಮಹಾದೇವಪ್ಪ ಕ್ರಮವಾಗಿ 36 ಹಾಗೂ 32 ವರ್ಷಗಳ ಕಾಲ ಸೇವೆ ಸಲ್ಲಿಸಿ ವಯೋನಿವೃತ್ತಿಯಾದ ಹಿನ್ನಲೆಯಲ್ಲಿ ಇಲಾಖೆ ವತಿ ಯಿಂದ ಸನ್ಮಾನಿಸಿ ಬೀಳ್ಕೊಡುಗೆ ನೀಡಲಾಯಿತು.

ರೇಷ್ಮೆ ಸಹಾಯಕ ನಿರ್ದೇಶಕ ಎನ್.ಪುಟ್ಟ ಮಾದಯ್ಯ ಮಾತನಾಡಿ, ನಮ್ಮ ಮಾರುಕಟ್ಟೆಯಲ್ಲಿ ಇವರಿಬ್ಬರೂ ಹಲವು ವರ್ಷಗಳಿಂದ ಸೇವೆ ಸಲ್ಲಿಸಿ ವಯೋನಿವೃತ್ತಿ ಹೊಂದಿದ್ದಾರೆ. ನಿವೃತ್ತಿ ಬಳಿಕ ವಿವಿಧ ಚಟುವಟಿಕೆ ತಮ್ಮನ್ನು ತೊಡಗಿಸಿಕೊಳ್ಳುವ ಮೂಲಕ ಎಲ್ಲರೊಂದಿಗೆ ಬೆರೆಯಬೇಕೆಂದು ಸಲಹೆ ನೀಡಿದರು. ರೇಷ್ಮೆ ಇಲಾಖೆಯಲ್ಲಿ ಸುದೀರ್ಘ ವರ್ಷಗಳಿಂದ ಮಾರುಕಟ್ಟೆಯಲ್ಲಿ ರೈತರಿಗೆ ಉತ್ತಮ ಸೇವೆ ಸಲ್ಲಿಸುತ್ತಿದ್ದರು. ಮುಂದಿನ ನಿವೃತ್ತಿ ಜೀವನವು ಮತ್ತಷ್ಟು ಸುಖಕವಾಗಿರಲಿ ಜೊತೆಗೆ ತಮ್ಮ ಕುಟುಂಬ ವರ್ಗಕ್ಕೆ ಸಮಯ ನೀಡಬೇಕೆಂದು ಸಲಹೆ ನೀಡಿದರು.

ರೇಷ್ಮೆ ನಿರೀಕ್ಷಕ ಮಂಜುನಾಥ್, ಸಿಬ್ಬಂದಿಗಳಾದ ಮಹೇಶ್ವರಿ, ಶಿವಸ್ವಾಮಿ, ಮಹದೇವಸ್ವಾಮಿ, ಮಹದೇವಮ್ಮ, ಲಿಂಗರಾಜು, ಬಲರಾಜೇಅರಸು, ಪೃಥ್ವಿರಾಜ್, ದುಗ್ಗಹಟ್ಟಿ ಡಿ.ಪಿ.ಪ್ರಭುಸ್ವಾಮಿ, ಬಿ.ನಾಗರಾಜು, ಚೆನ್ನಬಸಪ್ಪ, ಎನ್.ಮೂರ್ತಿ, ನಾಗೇಶ್, ಶಿವಕುಮಾರ್, ರೀಲರ್‌ಗಳಾದ ಹೊನ್ನೂರು ಎಸ್.ಪಿ. ಸಿದ್ದರಾಜು ಎಚ್.ಸಿ.ಪುಟ್ಟರಾಜು, ದುಂಡಯ್ಯ, ರಾಚಯ್ಯ, ಲಾಟರ್‌ಗಳಾದ ಮಲ್ಲೇಶ್, ಸಿದ್ದಯ್ಯ, ರಾಚಯ್ಯ, ತ್ರಿಪುರಾಂತಕ ಇತರರು ಹಾಜರಿದ್ದರು.

ನಾಳೆ ಕೆಡಿಪಿ ಪ್ರಗತಿ ಪರಿಶೀಲನಾ ಸಭೆ

ಚಾಮರಾಜನಗರ, ಜು.5– ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅಧ್ಯಕ್ಷತೆಯಲ್ಲಿ ಜಿಲ್ಲಾಮಟ್ಟದ ತ್ರೈಮಾಸಿಕ ಕೆ.ಡಿ.ಪಿ. ಪ್ರಗತಿ ಪರಿಶೀಲನಾ ಸಭೆ ಜು.7ರ ಬೆಳಿಗ್ಗೆ 10.30 ಗಂಟೆಗೆ ನಗರದ ಜಿಲ್ಲಾಡಳಿತ ಭವನದಲ್ಲಿರುವ ನೂತನ ಕೆ.ಡಿ.ಪಿ. ಸಭಾಂಗಣದಲ್ಲಿ ನಿಗದಿಗೊಳಿಸಲಾಗಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾರೋತ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೆಜೆಎಂ ಕಾಮಗಾರಿ ಬಗ್ಗೆ ವರದಿ ಸಲ್ಲಿಸಲು ಜಿಪಂ ಸಿಇಒ ಸೂಚನೆ

ಚಾಮರಾಜನಗರ: ಜಲಜೀವನ್ ಮಿಷನ್ ಯೋಜನೆಯಡಿ ಅನುಷ್ಠಾನಗೊಂಡಿರುವ ಕಾಮಗಾರಿಗಳನ್ನು ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಲಾಗಿದ್ದು, ಈ ಸಂಬಂಧ ಕಾಮಗಾರಿಗಳನ್ನು ಪರಿವೀಕ್ಷಣೆ ಮಾಡಿ ವರದಿ ಸಲ್ಲಿಸುವಂತೆ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಪಂ ಸಿಇಓ ಸಭಾಂಗಣದಲ್ಲಿಂದು ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ಹಾಗೂ ಕುಡಿಯುವ ನೀರಿನ ಸಮಸ್ಯೆ ಕುರಿತು ವಿವಿಧ ಇಲಾಖೆ ಅಧಿಕಾರಿಗಳೊಂದಿಗೆ ನಡೆದ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯ ಕೊಳ್ಳೇಗಾಲ ಹಾಗೂ ಹನೂರು ತಾಲೂಕಿಗೆ ಸಂಬಂಧಿಸಿದಂತೆ ಜಲಜೀವನ್ ಮಿಷನ್ ಯೋಜನೆ ಅನುಷ್ಠಾನ ಸಂಬಂಧ ಸಾರ್ವಜನಿಕರಿಂದ ದೂರುಗಳು ದಾಖಲಾಗುತ್ತಿದ್ದು, ಗ್ರಾಮ ಪಂಚಾಯಿತಿಗಳಿಗೆ ಈಗಾಗಲೇ ಹಸ್ತಾಂತರ ಮಾಡಲಾಗಿರುವ ಕಾಮಗಾರಿಗಳನ್ನು ಆಯಾ ತಾಲೂಕಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್‌ಗಳು ಪರಿಶೀಲಿಸಿ ವರದಿ ನೀಡುವಂತೆ ನಿರ್ದೇಶನ ನೀಡಿದರು.

ಹನೂರು ಭಾಗದಲ್ಲಿ ಕುಡಿಯುವ ನೀರಿನ ಸಮಸ್ಯೆ ಎದುರಾಗಿರುವ ಗ್ರಾಮಗಳಲ್ಲಿ ಕೈಗೊಳ್ಳಲಾದ ಕ್ರಮಗಳ ಕುರಿತು ಆಯಾ ತಾಲೂಕಿನ ಇಓ ಹಾಗೂ ಗ್ರಾಪಂ ಪಿಡಿಓ ಮತ್ತು ಎಇಇ ಇಂಜಿನಿಯರ್‌ಗಳೊಂದಿಗೆ ಚರ್ಚಿಸಿ ಸಮಸ್ಯೆಯನ್ನು ಪರಿಹರಿಸಲು ತುರ್ತಾಗಿ ಕ್ರಮ ಕೈಗೊಳ್ಳಬೇಕು. ಮುಂದಿನ ದಿನಗಳಲ್ಲಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳಲು ಮುಂದಾಗುವಂತೆ ಅಧಿಕಾರಿಗಳಿಗೆ ತಿಳಿಸಿದರು.

ಜಿಪಂ ಉಪಕಾರ್ಯದರ್ಶಿ ಶೃತಿ ಡಿ.ಸಿ, ಎಇಇ ಎಸ್.ಜಗದೀಶ್, ಯಳಂದೂರು ಉಪವಿಭಾಗದ ಎಇಇ ಚಂದ್ರಶೇಖರ್, ಕೊಳ್ಳೇಗಾಲ ಉಪವಿಭಾಗದ ಇಇ ಸುದನ್ವನಾಗ್, ಹನೂರು ಹಾಗೂ ಯಳಂದೂರು ತಾಪಂ ಇಓ ಉಮೇಶ್, ಹನೂರು ತಾಪಂ ಅಭಿವೃದ್ಧಿ ಅಧಿಕಾರಿಗಳು, ಇತರರು ಸಭೆಯಲ್ಲಿ ಉಪಸ್ಥಿತರಿದ್ದರು.



ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮೋನಾ ರೋತ್ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಅಧಿಕಾರಿಗಳ ಸಭೆ ನಡೆಸಿದರು.

ಸಮಾಜದ ಅಭಿವೃದ್ಧಿಗೆ ಶ್ರಮಿಸಲು ಬಿದರಿ ಕರೆ



ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆ ಜಿಲ್ಲಾ ಹಾಗೂ ತಾಲೂಕು ಘಟಕಗಳಿಂದ ನಡೆದ ವಿವಿಧ ಕ್ಷೇತ್ರಗಳ ಸಾಧಕರ ಸನ್ಮಾನ ಸಮಾರಂಭವನ್ನು ರಾಜ್ಯಾಧ್ಯಕ್ಷ ಶಂಕರ ಬಿದರಿ ಉದ್ಘಾಟಿಸಿದರು

ಚಾಮರಾಜನಗರ, ಜು.5– ವೀರಶೈವ–ಲಿಂಗಾಯತ ಒಂದೇ ಆಗಿದ್ದು, ಬೇರೆ ಬೇರೆ ಎಂದು ಭಾವಿಸದೆ ಒಗ್ಗಟ್ಟಾಗಿ ಸಮಾಜದ ಅಭಿವೃದ್ಧಿಗೆ ಸಮುದಾಯದವರು ಶ್ರಮಿಸಬೇಕು ಎಂದು ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭೆ ರಾಜ್ಯಾಧ್ಯಕ್ಷ ಶಂಕರ ಬಿದರಿ ಸಲಹೆ ನೀಡಿದ್ದಾರೆ.

ನಗರದ ಶಿವಕುಮಾರಸ್ವಾಮಿ ಭವನದಲ್ಲಿ ಅಖಿಲ ಭಾರತ ವೀರಶೈವ–ಲಿಂಗಾಯತ ಮಹಾಸಭೆ ಜಿಲ್ಲಾ ಹಾಗೂ ತಾಲೂಕು ಘಟಕಗಳಿಂದ ನಡೆದ ವಿವಿಧ ಕ್ಷೇತ್ರಗಳ ಸಾಧಕರಿಗೆ ಸನ್ಮಾನ ಸಮಾರಂಭ ಉದ್ಘಾಟಿಸಿ ಮಾತನಾಡಿ, ವೀರಶೈವ–ಲಿಂಗಾಯತ ಕೇವಲ ಜಾತಿ ಸೂಚಕವಲ್ಲ. ಅದೊಂದು ಪರಂಪರೆ ಹೀಗಿದ್ದರೂ ಕೆಲವರು ಸ್ಥಾವರ, ಲಿಂಗ ಪೂಜೆ ಮಾಡಬಾರದು, ಗಣಪತಿ ಪೂಜೆ ಮಾಡಬಾರದು, ಮಠ ನಿರ್ಮಿಸಬಾರದು, ಸ್ವಾಮೀಜಿ ಇರಬಾರದು, ಮಹಿಳೆಯರು ಕುಂಕುಮ ಇಟ್ಟುಕೊಳ್ಳಬಾರದು, ಮನೆಯಲ್ಲಿ ಜಗುಲಿ ಇರಬಾರದು ಎಂದು ಪ್ರತಿಪಾದಿಸುತ್ತಾರೆ. ಜಗತ್ತಿನಲ್ಲಿರುವ ಯಾವುದೇ ಧರ್ಮಕ್ಕೆ ಹೋಲಿಸಿದರೆ ಬಸವಧರ್ಮ ಪಾಲನೆಯಲ್ಲಿ ಮುಂಚೂಣಿಯಲ್ಲಿರುವ ನಮ್ಮ ಸಮಾಜದವರು ಎಂದು ಹೇಳಲು ಹೆಮ್ಮೆಯಾಗುತ್ತದೆ ಎಂದರು.

ಸುತ್ತೂರು ಮಠದ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಮಾತನಾಡಿ, ಯಾವುದೇ ಸಮಾಜ ಅಭಿವೃದ್ಧಿಯಾಗಬೇಕಾದರೆ ಸಂಘಟನೆ ಅಗತ್ಯವಾಗಿದೆ. ಸಮಾಜದ ಅಭಿವೃದ್ಧಿಗೆ ಶ್ರಮಿಸುತ್ತಿರುವ ವೀರಶೈವ ಲಿಂಗಾಯಿತ ಮಹಾಸಭೆ ಜಿಲ್ಲಾ ಹಾಗೂ ತಾಲೂಕು ಘಟಕಗಳ ಪದಾಧಿಕಾರಿಗಳಿಗೆ ಸಹಕಾರ ನೀಡಬೇಕು ಎಂದರು.

ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಕ್ಷೇತ್ರ ವ್ಯಾಪ್ತಿಯ ಸಂತೇಮರಹಳ್ಳಿ, ಉಮ್ಮತ್ತೂರು ಸೇರಿದಂತೆ ವಿವಿಧ ಗ್ರಾಮಗಳಲ್ಲಿ ಬಸವ ಭವನ ನಿರ್ಮಾಣಕ್ಕೆ 2.20ಕೋಟಿ ಮಂಜೂರು ಮಾಡಲಾಗಿದೆ ಬಸವಭವನ ಪೂರ್ಣಗೊಳಿಸಲು ಸಾಧ್ಯವಾದಷ್ಟು ನೆರವು ನೀಡುವುದಾಗಿ ಭರವಸೆ ನೀಡಿದರು.


ವಿವಿಧ ಕ್ಷೇತ್ರಗಳ ಸಾಧಕರು ಹಾಗೂ ಧನ ಸಹಾಯ ಹಾಗೂ ನೆರವು ನೀಡಲು ಮುಂದಾಗಿರುವ ಉದ್ಯಮಿಗಳನ್ನು ಸನ್ಮಾನಿಸಲಾಯಿತು. ಸಾಲೂರು ಬೃಹನ್ಮಠದ ಶಾಂತಮಲ್ಲಿ ಕಾರ್ಜುನ ಸ್ವಾಮೀಜಿ, ಮರಿಯಾಲ ಮಠದ ಇಮ್ಮಡಿ ಮುರುಘ ರಾಜೇಂದ್ರ ಸ್ವಾಮೀಜಿ, ಹರವೆ ಮಠದ ಸರ್ಪಭೂಷಣ ಸ್ವಾಮೀಜಿ, ಸಿದ್ದಮಲ್ಲೇಶ್ವರ ವಿರಕ್ತ ಮಠದ ಚನ್ನಬಸವ ಸ್ವಾಮೀಜಿ, ಶಾಸಕ ಎಚ್.ಎಂ. ಗಣೇಶ ಪ್ರಸಾದ್, ಕಾಡಾಧ್ಯಕ್ಷ ಪಿ.ಮರಿಸ್ವಾಮಿ, ಚುಡಾಧ್ಯಕ್ಷ ಮಹಮದ್ ಅಸ್ಗರ್ ಮುನ್ನಾ, ಚಾಮುಲ್ ಅಧ್ಯಕ್ಷ ನಂಜುಂಡಸ್ವಾಮಿ, ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಮಹಾಸಭಾ ಜಿಲ್ಲಾಧ್ಯಕ್ಷ ಮೂಡ್ಲುಪುರ ನಂದೀಶ್ ಹಾಗೂ ತಾಲೂಕು ಘಟಕಗಳ ಪದಾಧಿಕಾರಿಗಳು ಹಾಜರಿದ್ದರು


ವೈಸೂರು ಮಿತ್ರ
ಭಾನುವಾರ 06–07–2025

ವಾರದ ಮಿತ್ರ
ಸಾಪ್ತಾಹಿಕ ಪುರವಣಿ

ನಂ.ಶ್ರೀಕಂಠ ಕುಮಾರ್
9481067333

ಶೃಂಗೇರಿ ಶ್ರೀ ಶಾರದಾ ಪೀಠದ 'ಶಂಕರ ಕೃಪಾ'ಗೆ ಷಷ್ಟಿಪೂರ್ತಿ ಸಂಭ್ರಮ





ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು

ಪ್ರಸ್ತುತವರ್ಷ ಪತ್ರಿಕೆಯು ಷಷ್ಟಿಪೂರ್ತಿಯ ಸಂಭ್ರಮದಲ್ಲಿದ್ದು ಮಹಾಸಂರಕ್ಷಕರಾಗಿ ಶ್ರೀಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳು ಹಾಗೂ ಸಂರಕ್ಷಕರಾಗಿ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರ ಮಾರ್ಗದರ್ಶನದಲ್ಲಿ ಪತ್ರಿಕೆಯ ಪ್ರಕಾಶಕರಾಗಿ ಪ್ರಸ್ತುತ ಆಡಳಿತಾಧಿಕಾರಿಗಳೂ ಆದ ಪಿ.ಎ.ಮುರಳಿ ಹಾಗೂ ಪತ್ರಿಕೆಯ ಸಂಪಾದಕರಾಗಿ ಡಾ. ಎನ್.ಎಸ್.ಸುರೇಶ್ ಪತ್ರಿಕೆಯನ್ನು ಸುಂದರವಾಗಿಸಿ, ಹೊಸ ಹೊಸ ಲೇಖಕರನ್ನು ಪ್ರೋತ್ಸಾಹಿಸುತ್ತಿದ್ದಾರೆ.

ಆದಿಗುರು ಶ್ರೀಶಂಕರ ಭಗವತ್ಪಾದರಿಂದ ಸ್ಥಾಪನೆಗೊಂಡ ಚತುರಾಮ್ನಾಯ ಪೀಠಗಳಲ್ಲಿ ಪ್ರಥಮ ಮತ್ತು ಪ್ರಮುಖವಾದ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠವು ಅವರ ನೇರ ಶಿಷ್ಯರಾದ ಶ್ರೀ ಸುರೇಶ್ವರಾಚಾರ್ಯರಿಂದ ಪ್ರಸ್ತುತ 37ನೇ ಜಗದ್ಗುರುಗಳವರೆಗೆ ಅವಿಚ್ಛಿನ್ನವಾದ ಗುರುಪರಂಪರೆಯಿಂದ ಶೋಭಿಸುತ್ತಿದೆ.

ಈ ಪೀಠದಲ್ಲಿ ಮಾರ್ಗದರ್ಶನ ಮಾಡಿದಂತಹ ಯತಿವರೇಣ್ಯರು ಶ್ರೀಶಂಕರ ಭಗವತ್ಪಾದಕರು ವಿಧಿಸಿದ ಮಾರ್ಗದಲ್ಲೇ ಧರ್ಮಾಚರಣೆಯನ್ನು ಮಾಡುತ್ತಾ ಲೋಕಕ್ಕೆ ಶ್ರೇಯೋಮಾರ್ಗವನ್ನು ಬೋಧಿಸಿ ಸ್ವತಃ ಸದಾಧರ್ಮನಿಷ್ಠರಾಗಿ ಸರ್ವರಿಗೂ ಮಾರ್ಗದರ್ಶಕರಾಗಿದ್ದಾರೆ. ಈ ಪೀಠದಲ್ಲಿ ಪೀಠಾಧಿಪತಿಗಳಾಗಿ ರಾರಾಜಿಸಿ ಲೋಕೋಪಕಾರ ಮಾಡಿದ ಪ್ರಥಮರಾದ ಶ್ರೀ ಶ್ರೀ ಸುರೇಶ್ವರಾಚಾರ್ಯರು, ಶ್ರೀ ಶ್ರೀ ವಿದ್ಯಾತೀರ್ಥ ಮಹಾಸ್ವಾಮಿಗಳು, ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು, ಶ್ರೀ ಶ್ರೀವಿದ್ಯಾರಣ್ಯ ಮಹಾಸ್ವಾಮಿಗಳು, ಶ್ರೀ ಶ್ರೀ ನೃಸಿಂಹಭಾರತೀ ಮಹಾಸ್ವಾಮಿಗಳು, ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳು, ಶ್ರೀ ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳು, ಶ್ರೀ ಶ್ರೀ ಅಭಿನವವಿದ್ಯಾತೀರ್ಥ ಮಹಾಸ್ವಾಮಿಗಳು ಹಾಗೆಯೇ ಇನ್ನೂ ಅನೇಕ ಯತಿಶ್ರೇಷ್ಠರು ಸರ್ವದಾವಂದ್ಯರಾಗಿದ್ದಾರೆ.

ಈ ಅವಿಚ್ಛಿನ್ನ ಗುರು ಪರಂಪರೆಯನ್ನು ಸಮರ್ಥವಾಗಿ ಮುಂದುವರೆಸಿ ಪ್ರಸ್ತುತ ಶೃಂಗೇರಿ ಶ್ರೀಶಾರದಾ ಪೀಠದಲ್ಲಿ ವಿರಾಜಮಾನರಾಗಿರುವ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳವರು ಅವರ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರಭಾರತೀ ಸನ್ನಿಧಾನಂಗಳವರು ಧರ್ಮಪೀಠವನ್ನು ಅಲಂಕರಿಸಿ ಸರ್ವರಿಗೂ ಮಾನ್ಯರಾಗಿ ಪರಮಪೂಜ್ಯರೆನಿಸಿ ಎಲ್ಲರನ್ನು ಕೃತಾರ್ಥರನ್ನಾಗಿಸಿದ್ದಾರೆ.

ದಕ್ಷಿಣಾಮ್ನಾಯ ಶೃಂಗಗಿರಿ ಶ್ರೀಶಾರದಾಪೀಠದ ಮಹಾಮಹಿಮರಾಗಿ, ಪೀಠಾಧಿಪತಿಗಳಾಗಿ ವಿರಾಜಮಾನರಾಗಿ ಮಾರ್ಗದರ್ಶನ ಮಾಡಿದ 35ನೇ ಜಗದ್ಗುರುಗಳಾದ ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಧಾರ್ಮಿಕ, ಲೌಕಿಕ, ಸಾಮಾಜಿಕ ಕಾರ್ಯಗಳು ಅಪಾರ ಹಾಗೂ ದೂರದೃಷ್ಟಿಯ ಚಿಂತನೆಯ ಫಲವಾಗಿ ಅವರ ಸಂಕಲ್ಪ ಹಾಗೂ ದಿವ್ಯಾನುಗ್ರಹದಿಂದ ಅದ್ವೈತ ಧರ್ಮ ಪ್ರಸಾರಾರ್ಥವಾಗಿ ಕನ್ನಡ ಭಾಷೆಯಲ್ಲಿ 'ಶಂಕರಕೃಪಾ' ಧಾರ್ಮಿಕ ಪ್ರಥಮ ಮಾಸಪತ್ರಿಕೆಯನ್ನು 1965ರ ಮೇ ಮಾಸದಲ್ಲಿ ಆಚರಿಸಿದ ಶ್ರೀ ಶಂಕರ ಜಯಂತಿ ಶುಭದಿನದಂದು ಲೋಕಾರ್ಪಣೆ ಮಾಡಲಾಯಿತು.


ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ಭಾರತೀತೀರ್ಥ ಸ್ವಾಮಿಗಳವರ ಅನುಗ್ರಹ ಮತ್ತು ಸಂರಕ್ಷಕರಾಗಿ ಆಧ್ಯಾತ್ಮಿಕ ವಿಚಾರಧಾರೆ, ಅದ್ವೈತ ತತ್ವವನ್ನು ಪ್ರಸಾರ ಮಾಡುತ್ತಾ 60 ಸಂವತ್ಸರಗಳನ್ನು ಪೂರೈಸಿರುವುದು ಆಸ್ತಿಕ ಓದುಗರಲ್ಲಿ ಧಾರ್ಮಿಕ ಶ್ರದ್ಧೆ, ಭಕ್ತಿಭಾವವನ್ನು ಹೆಚ್ಚಿಸಿದೆ.

ಅಂದಿನಿಂದ ಆಧ್ಯಾತ್ಮಜ್ಞಾನವನ್ನು ಆಸ್ತಿಕರಿಗೆ ತಿಳಿಸಿ ಪತ್ರಿಕೆಯನ್ನು ಇಂದಿನವರೆಗೆ ಮುನ್ನಡೆಸುವಲ್ಲಿ ಹಲವಾರು ಸಂಪಾದಕರ ಪಾತ್ರ ಹಿರಿದಾದುದು. ಪತ್ರಿಕೆಯ ಪ್ರಥಮ ಸಂಪಾದಕರಾಗಿ ಎ.ವಿ.ಶ್ರೀನಿವಾಸ ಮೂರ್ತಿರವರು ಸೇವೆ ಸಲ್ಲಿಸಿದರು. ಅಂದು ಬೆಂಗಳೂರಿನಿಂದ ಪ್ರಕಟವಾಗುತ್ತಿದ್ದ ಪತ್ರಿಕೆಯು ಕೆಲವು ವರ್ಷಗಳ ನಂತರ ಶೃಂಗೇರಿ ಶ್ರೀ ಶಾರದಾಪೀಠದ ಪ್ರಮುಖ ಶಿಷ್ಯರು ಹಾಗೂ ಮೈಸೂರಿನ ಶ್ರೀ ಶಂಕರಮಠದ ಧರ್ಮಾಧಿಕಾರಿಗಳಾಗಿದ್ದ ಪಿ.ಆರ್.ಹರಿಹರನ್ ಅವರಿಗೆ ಪತ್ರಿಕೆಯ ನಿರ್ವಹಣೆಯ ಜವಾಬ್ದಾರಿಯನ್ನು ವಹಿಸಲಾಯಿತು.



ಆಧ್ಯಾತ್ಮಿಕ ಮಾಸಪತ್ರಿಕೆ ಶಂಕರ ಕೃಪಾವನ್ನು ಮೈಸೂರಿನ ಶ್ರೀ ಶಾರದಾ ಮುದ್ರಣ ಪ್ರಕಾಶನದಿಂದ ಮುದ್ರಿಸಿ ಸುಮಾರು ಮೂವತ್ತೈದು ವರ್ಷಗಳ ಕಾಲ ನಿರಂತರವಾಗಿ ಪ್ರಕಟಮಾಡುತ್ತಾ ಜಗದ್ಗುರುಗಳವರ ಕೃಪೆಗೆ ಪಾತ್ರರಾಗಿ 'ಗುರುಭಕ್ತಾಲಂಕಾರ' ಗೌರವಕ್ಕೆ ಪಾತ್ರರಾದರು. ಅವರೊಡನೆ ವಿದ್ವಾನ್ ತುರುವೇಕೆರೆ ವಿಶ್ವೇಶ್ವರದೀಕ್ಷಿತರು ಪತ್ರಿಕೆಯ ಸಂಪಾದಕ ಸ್ಥಾನವನ್ನು ಅಂಗೀಕರಿಸಿ ಪತ್ರಿಕೆಯು ಪ್ರತಿಮಾಸದಲ್ಲಿಯೂ ತಪ್ಪದೇ ಪ್ರಕಟವಾಗುವಂತೆ ಕ್ರಮವಹಿಸಿದರು. ಪತ್ರಿಕೆಯಲ್ಲಿ ಜಗದ್ಗುರುಗಳವರ ಪ್ರವಚನಗಳು, ಪರಿಣತಿ ಹೊಂದಿದ ವಿದ್ವಾಂಸರ ಲೇಖನಗಳು ಪತ್ರಿಕೆಯ ಮೌಲ್ಯವನ್ನು ಹೆಚ್ಚಿಸಿತು. ಅಲ್ಲದೇ ಹಲವಾರು ವಿಶೇಷ ಸಂದರ್ಭಗಳಲ್ಲಿ ವಿಶೇಷಾಂಕಗಳನ್ನು ಪ್ರಕಟಿಸಿದ್ದು ಖ್ಯಾತ ಲೇಖಕರಾದ ತ.ರಾ. ಸುಬ್ಬರಾವ್, ಲನಾ ಶಾಸ್ತ್ರೀ, ವಿದ್ವಾನ್ ಬಿ ಬಾಲಗಣಪತಿ ಭಟ್, ಡಾ. ಎನ್ ಎಸ್ ದಕ್ಷಿಣಾಮೂರ್ತಿ, ಡಾ. ಹೆಚ್.ವಿ ನರಸಿಂಹಮೂರ್ತಿ, ಆಸ್ಥಾನವಿದ್ವಾನ್, ಎಂ.ವಿ ನಾಗರಾಜಭಟ್ಟ, ಶೃಂಗಗಿರಿ ಕವಿ ನರಸಿಂಹಶರ್ಮ, ಕೈಪು ಲಕ್ಷ್ಮೀನರಸಿಂಹ ಶಾಸ್ತ್ರಿ ಮೊದಲಾದವರು ಪತ್ರಿಕೆಗೆ ಸೇವೆ ಸಲ್ಲಿಸಿದ್ದಾರೆ.


ನಂತರ ಪತ್ರಿಕೆಯ ಸಂಪಾದಕರಾಗಿ ಸೇವೆಸಲ್ಲಿಸಿದ ಪ್ರೊ. ಎಸ್ ರಾಮಚಂದ್ರಶಾಸ್ತ್ರಿಗಳು ಅನೇಕ ವಿದ್ವಾಂಸರಿಂದ ನಿರ್ದಿಷ್ಟ ವಿಷಯಗಳ ಬಗ್ಗೆ ಲೇಖನ ಬರೆಸಿ ಪತ್ರಿಕೆಗೆ ಹೊಸರೂಪ ನೀಡಿದರು. ಕಾಲಕ್ರಮೇಣ ವಿವಿಧ ಘಟ್ಟಗಳಲ್ಲಿ 'ಶಂಕರ ಕೃಪಾ' ಪತ್ರಿಕೆಯ ಸಂಪಾದಕರಾಗಿ ಡಾ. ಬಿ.ಎಸ್ ರಾಮಕೃಷ್ಣರಾವ್, ಎಂ.ಎ ವೆಂಕಟೇಶ ಭಟ್, ಎನ್.ಆರ್ ಸುಬ್ರಹ್ಮಣ್ಯ ಭಟ್ ಸಹ ಸ್ವಲ್ಪ ಅವಧಿಗೆ ಸಂಪಾದಕರಾಗಿ ಸೇವೆ ಸಲ್ಲಿಸಿದ್ದರು. ಅವರ ನಂತರ ಶ್ರೀಶಾರದಾಪೀಠದ ಆಡಳಿತಾಧಿಕಾರಿ ಗುರುಸೇವಾ ಧುರೀಣ ಡಾ. ವಿ.ಎಸ್.ಗೌರಿಶಂಕರ್ ಪತ್ರಿಕೆಯ ಪ್ರಕಾಶನದ ಹೊಣೆಯನ್ನು ಹೊತ್ತು, ಉತ್ತಮವಾಗಿ ನಿರ್ವಹಿಸಿ ಪತ್ರಿಕೆಗೆ ಹೊಸ ಆಯಾಮವನ್ನು ನೀಡಿ ಅದು ಬೆಂಗಳೂರಿನಿಂದಲೇ ಪ್ರಕಟಗೊಳ್ಳುವಂತೆ ವ್ಯವಸ್ಥೆ ಮಾಡಿದ್ದಾರೆ. ಜೊತೆಗೆ ಅತೀ ಕಡಿಮೆ ದರದಲ್ಲಿ ಪತ್ರಿಕೆಯು ಓದುಗರಿಗೆ ನಿಗದಿತ ಸಮಯದಲ್ಲಿ ತಲುಪುವಂತೆ ಮಾಡಿದ್ದಾರೆ. ಅವರೊಂದಿಗೆ ಪತ್ರಿಕೆಯ ಸಂಪಾದಕರಾಗಿ ಪ್ರೊ ಕೆ.ಜಿ ಕೃಷ್ಣಮೂರ್ತಿ, ಲೇಖನಗಳು ಹಾಗೂ ಮುದ್ರಣದ ಗುಣಮಟ್ಟವನ್ನು ಉತ್ತಮಗೊಳಿಸಿ ವರ್ಣಮಯವಾದ ಮುಖಪುಟದೊಂದಿಗೆ ಸುಮಾರು 52 ಪುಟಗಳ 1/8 ಅಳತೆಯ ಪತ್ರಿಕೆಯು ಧಾರ್ಮಿಕ ಕ್ಷೇತ್ರದಲ್ಲಿ ಶ್ರೇಷ್ಠ ಮಾಸಪತ್ರಿಕೆಯಾಗಿ ಓದುಗರಿಗೆ ತಲುಪುತ್ತಿದೆ.




ಪ್ರಸ್ತುತವರ್ಷ ಪತ್ರಿಕೆಯು ಷಷ್ಟಿಪೂರ್ತಿಯ ಸಂಭ್ರಮದಲ್ಲಿದ್ದು ಮಹಾಸಂರಕ್ಷಕರಾಗಿ ಶ್ರೀಶಾರದಾಪೀಠದ ಜಗದ್ಗುರುಗಳಾದ ಶ್ರೀ ಶ್ರೀ ಭಾರತೀತೀರ್ಥ ಮಹಾಸನ್ನಿಧಾನಂಗಳು ಹಾಗೂ ಸಂರಕ್ಷಕರಾಗಿ ತತ್ಕರಕಮಲಸಂಜಾತರಾದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀಸನ್ನಿಧಾನಂಗಳವರ ಮಾರ್ಗದರ್ಶನದಲ್ಲಿ ಪತ್ರಿಕೆಯ ಪ್ರಕಾಶಕರಾಗಿ ಪ್ರಸ್ತುತ ಆಡಳಿತಾಧಿಕಾರಿಗಳೂ ಆದ ಪಿ.ಎ.ಮುರಳಿ ಹಾಗೂ ಪತ್ರಿಕೆಯ ಸಂಪಾದಕರಾಗಿ ಡಾ. ಎನ್.ಎಸ್.ಸುರೇಶ್ ಪತ್ರಿಕೆಯನ್ನು ಸುಂದರವಾಗಿಸಿ ಹೊಸ ಹೊಸ ಲೇಖಕರನ್ನು ಪ್ರೋತ್ಸಾಹಿಸಿ ಶ್ರೀಶಂಕರ ತತ್ವ, ಜಗದ್ಗುರುಗಳವರ ಅನುಗ್ರಹ ಸಂದೇಶ, ಮಹಾಮಹಿಮ ಗುರು ಪರಂಪರೆಯ ಮಹತ್ವ ಶೃಂಗೇರಿ ಕ್ಷೇತ್ರ ವಾರ್ತೆ, ಶ್ರೀಮಠದ ಮಾಸಪಂಚಾಂಗ, ಸುಭಾಷಿತ, ಸಂಪಾದಕರ ಮಾತು, ಭಕ್ತಿ ಸುಧಾವರ್ಷಿಣಿ ಹಾಗೂ ವರ್ಣಮಯ ಛಾಯಾಚಿತ್ರಗಳೊಂದಿಗೆ ಸಾವಿರಾರು ಚಂದಾದಾರ ಓದುಗರನ್ನು ತಲುಪುತ್ತಿದ್ದು ಸನಾತನ ಧರ್ಮಪ್ರಸಾರದ ಶ್ರೇಷ್ಠ ಮಾಸಪತ್ರಿಕೆಯಾಗಿ 'ಶಂಕರ ಕೃಪಾ' ಓದುಗರಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಹಾಗೂ ಜ್ಞಾನವು ಹೆಚ್ಚಿಸುವಲ್ಲಿಯೂ ಪ್ರಮುಖವಾಗಿದೆ. ಅಲ್ಲದೇ ಪ್ರಸ್ತುತ ಶೃಂಗೇರಿ ಶ್ರೀಶಾರದಾಪೀಠದ ಆಶ್ರಯದಲ್ಲಿ ತಮಿಳು, ತೆಲುಗು ಹಾಗೂ ಇಂಗ್ಲೀಷ್ ಭಾಷೆಗಳಲ್ಲಿ ಪತ್ರಿಕೆಯು ಪ್ರಕಟಗೊಳ್ಳುತ್ತಿರುವುದು ಸಂತಸದ ವಿಷಯ.

ಮಕ್ಕಳ ಚಿತ್ರಕಥೆ: 'ಆ ಬಾಲಕ ಯಾರು ಗೊತ್ತೇ...?'


■ ಹೆಚ್.ಜಿ.ಎನ್.ಪ್ರಸಾದ್
ಮೊ. 98453 76199




ಬಂಗಾಳದ ಒಂದು ಕುಗ್ರಾಮ. ಅಲ್ಲೊಂದು ಪುಟ್ಟ ಸಂಸಾರದಲ್ಲಿ ತಂದೆ, ತಾಯಿ, ಮಗ ವಾಸಿಸುತ್ತಿದ್ದರು. ತಾಯಿಯು ಒಂದು ದಿನ ಮಗನ ಕೊಠಡಿಗೆ ಬಂದು ನೋಡಿದಾಗ ಸದಾ ಚೊಕ್ಕಟವಾಗಿರುತ್ತಿದ್ದ ಮಗನ ಕೋಣೆಯ ಕಪಾಟಿನಿಂದ ಇರುವೆಗಳು ಸಾಲು ಸಾಲಾಗಿ ಬರುತ್ತಿವೆ.




ತಾಯಿಯು ಕಪಾಟು ತೆರೆದು ನೋಡಿದಾಗ ಅಲ್ಲಿ ಪುಸ್ತಕಗಳ ನಡುವೆ ಎರಡು ರೊಟ್ಟಿಗಳಿವೆ. ಆ ರೊಟ್ಟಿಗೆ ಇರುವೆಗಳು ಮುತ್ತಿಕೊಂಡು ರೊಟ್ಟಿ ಪುಟ್ಟ ಚೂರುಗಳನ್ನು ಒಯ್ಯುತ್ತಿವೆ. ಮಗನ ಸ್ವಭಾವ ಅವಳಿಗೆ ತಿಳಿದಿತ್ತು. ಮಗ ಬಂದ ಮೇಲೆ ಕೇಳಿದರಾಯಿತು ಎಂದು ನಿಶ್ಚಯಿಸಿದಳು.



ಶಾಲೆಯಿಂದ ಬಂದ ಮಗನನ್ನು ಕೇಳಿದಳು 'ಮಗೂ ನೀನು ಕಪಾಟಿನಲ್ಲೇಕೆ ರೊಟ್ಟಿಗಳನ್ನು ಮುಚ್ಚಿಟ್ಟಿದ್ದೀಯಾ...?'. ಮಗ ಹೇಳಿದ, 'ಅಮ್ಮಾ...ಆ ರೊಟ್ಟಿಗಳನ್ನು ಕಪಾಟಿನಿಂದ ತೆಗೆದುಬಿಡು... ಇನ್ನು ಮುಂದೆ ಅವುಗಳ ಅವಶ್ಯಕತೆಯಿಲ್ಲ' ಎಂದು ಹೇಳುತ್ತಲೇ ಜೋರಾಗಿ ಅಳತೊಡಗಿದ.



ಮಗು ಅಳುತ್ತಿರುವುದನ್ನು ಕಂಡು ತಾಯಿಗೆ ಗಾಬರಿ. ಅವನ ಕಣ್ಣೀರು ಒರೆಸಿ 'ಮಗೂ ಏಕೆ ಅಳುತ್ತಿದ್ದೀಯಾ..?' ಮಗ ಹೇಳಿದ "ಅಮ್ಮಾ... ನನಗೆ ನೀಡುತ್ತಿದ್ದ ರೊಟ್ಟಿಗಳನ್ನು ಒಬ್ಬ ಮುದುಕಿಗೆ ಕೊಡುತ್ತಿದ್ದೆ. ನಿನ್ನೆ ಆಕೆ ಅಲ್ಲಿರಲಿಲ್ಲ. ನಾಳೆ ಕೊಟ್ಟರಾಯಿತೆಂದು ಕಪಾಟಿನಲ್ಲಿಟ್ಟಿದ್ದೆ'.



ಆ ಬಾಲಕ ತನ್ನ ಮಾತನ್ನು ಮುಂದುವರೆಸುತ್ತಾ... 'ಈ ದಿನ ಅವಳು ಸತ್ತು ಹೋಗಿದ್ದಾಳೆಂದು ತಿಳಿಯಿತು' ಎಂದು ಜೋರಾಗಿ ಅಳತೊಡಗಿದ. ಬಡವರ ಕಷ್ಟಕ್ಕೆ ಸ್ಪಂದಿಸುವ ಮಗನ ಮಾನವೀಯ ಗುಣದಿಂದ ತಾಯಿಗೆ ಹೃದಯ ತುಂಬಿ ಬಂತು; ಹೆಮ್ಮೆಯೂ ಆಯ್ತು.



ಕರುಣಾಮಯಿಯಾದ ಆ ಬಾಲಕನೇ ಮುಂದೆ ಮಹಾನ್ ದೇಶಭಕ್ತನಾದ, ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸಿ ವಿಶ್ವ ವಿಖ್ಯಾತನಾದ. ಆ ಬಾಲಕ ಬೇರೆ ಯಾರೂ ಅಲ್ಲ ರಾಷ್ಟ್ರ ನಾಯಕ ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ 'ಸುಭಾಷ್ ಚಂದ್ರ ಬೋಸ್'.

ವಾರಭವಿಷ್ಯ



6.07.2025 ರಿಂದ 12.07.2025

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ:– ರವಿ–ಮಿಥುನ, ಚಂದ್ರ, ತುಲಾ, ವೃಶ್ಚಿಕ, ಧನುಸ್ಸು, ಕುಂಭ, ಕುಜ–ಸಿಂಹ, ಬುಧ–ಕಟಕ, ಗುರು–ಮಿಥುನ, ಶುಕ್ರ–ವೃಷಭ, ಶನಿ–ಮೀನ, ರಾಹು–ಕುಂಭ ಮತ್ತು ಕೇತು–ಸಿಂಹ.

ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ, ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720





ಮೇಷ (ಚು.ಚೆ.ಲ.ಲಿ.ಲು.ಲೆ.ಲೋ.ಅ)

ವಾರದ ಆರಂಭಕ್ಕೆ ಉತ್ತಮರ ಸಹವಾಸದಿಂದ ಜ್ಞಾನ ವೃದ್ಧಿಗೆ ಅವಕಾಶ ದೊರೆಕುವುದು. ದೇಹಾರೋಗ್ಯ ಸುಧಾರಿಸಲಿದೆ. ನೂತನ ವಸ್ತ್ರಾಭರಣ ಹೊಂದುವುದರಿಂದ ಶ್ರೀಮತಿಗೆ ಸಂತೋಷ. ಆಸ್ತಿ ಮಾರಾಟದ ವಿಷಯವನ್ನು ಸ್ವಲ್ಪ ಸಮಯ ಮುಂದೂಡಿ. ನಿಮ್ಮ ಶ್ರೀಮತಿ ಮತ್ತು ಪರನಾರಿಯರಲ್ಲಿ ವಿವಾದವನ್ನು ನಿಗ್ರಹಿಸುವುದು ಒಳ್ಳೆಯದು. ಪಿತ್ತ ಜನಿತ ಕಾಯಿಲೆ ಕಾಡಿಸಬಹುದು.


ಶ್ರೀ ನೃಸಿಂಹಸ್ವಾಮಿ ಪ್ರಾರ್ಥನೆ, ಶುಭ ಸಂಖ್ಯೆ–2



ವೃಷಭ (ಇ.ಉ.ಎ.ಒ.ವ.ವಿ.ವು.ವೆ.ವೊ)

ಜೀವನದಲ್ಲಿ ಸವಾಲುಗಳು ಎದುರಾದರೆ ತೆರೆದ ಮನಸ್ಸಿನಿಂದ ಸ್ವೀಕರಿಸಿದಲ್ಲಿ ಪ್ರತಿಸ್ಪರ್ಧಿಗಳನ್ನು ಸಮರ್ಥವಾಗಿ ಎದುರಿಸಬಹುದು. ವೃತ್ತಿ ವಿಷಯದಲ್ಲಿ ಹಾಗೂ ವ್ಯಾಪಾರ–ವ್ಯವಹಾರಗಳಲ್ಲಿ ಉತ್ತಮ ಪ್ರಗತಿಗೆ ಗುರುಬಲವಿದೆ. ಎಲ್ಲವನ್ನೂ ಪರಿಷ್ಕರಿಸಿ ನೋಡುವ ಗುಣವುಳ್ಳ ನೀವು ಗ್ರಹಗತಿಗಳು ಶುಭ ಸಂಚಾರದಲ್ಲಿರುವ ಕಾರಣ ಧನಾತ್ಮಕ ಫಲಿತಾಂಶವನ್ನು ಹೊಂದುವಿರಿ. ವಿದ್ಯುತ್ ಉಪಕರಣ ಬಳಸುವಾಗ ಜಾಗೃತರಾಗಿರಿ.

ಶ್ರೀ ದೇವೀ ಅಷ್ಟೋತ್ತರ ಪಠಿಸಿ, ಶುಭ ಸಂಖ್ಯೆ–4



ಮಿಥುನ (ಕ.ಕಿ.ಕು.ಘ.ಙ.ಛ.ಕೆ.ಕೊ.ಹ)

ಈ ವಾರ ಮುಖ್ಯ ಯೋಜನೆಗಳನ್ನು ಮುಂದೂಡುವುದೇ ಜಾಣತನ. ಇದು ನಿಮ್ಮ ಭವಿಷ್ಯದ ಭದ್ರತೆಗೆ ಅವಶ್ಯಕವಾಗಿದೆ. ಸಜ್ಜನರ ಸಂಗದಿಂದ ಮನೋಲ್ಲಾಸ. ಕೊಡು–ತರುವ ವಿಚಾರಗಳಲ್ಲಿ ಲಾಭವನ್ನು ಹೊಂದುವುದು ಕಷ್ಟಸಾಧ್ಯ. ತಂದೆ–ಮಕ್ಕಳಲ್ಲಿ ವಿರಸದ ಮಾತು ಉಂಟಾಗಬಹುದು. ಪ್ರಯಾಣಗಳು ಎದುರಾದರೆ ಅದರಿಂದ ಒಳ್ಳೆಯದೇ ಆಗುತ್ತದೆ.

ಶ್ರೀ ರಾಮರಕ್ಷಾ ಸ್ತೋತ್ರ ಪಠಿಸಿ, ಶುಭ ಸಂಖ್ಯೆ–7



ಕಟಕ (ಹೊ.ಹು.ಹೆ.ಹೊ.ಡ.ಡಿ.ಡು)

ವಾರದಾರಂಭಕ್ಕೆ ಕೆಲವು ಹರುಷದ ಘಟನೆಗಳು ಜರುಗಲಿದೆ. ಸಜ್ಜನರ ಭೇಟಿಯಿಂದ ಮನಸ್ಸಿಗೆ ಮುದ, ಹೆಚ್ಚಿದ ಜನ ಸಂಪರ್ಕ, ವಾರ ಮಧ್ಯೆ ದೇಹಕ್ಕೆ ಆಲಸ್ಯ, ವೈದ್ಯರ ಭೇಟಿ, ರಾಹು–ಕೇತುಗಳು ಅಶುಭರಿದ್ದಾರೆ. ನ್ಯಾಯಬಾಹಿರ ಕಾರ್ಯಗಳಿಗೆ ಮನಸ್ಸಾಗುವುದು, ಇದು ತೊಂದರೆಗೆ ಕಾರಣವಾಗುವುದು. ಕಫ ಹಾಗೂ ಶ್ವಾಸಕೋಶ ಸಂಬಂಧಿ ಕಾಯಿಲೆಗೆ ಗುರಿಯಾಗುವ ಸಾಧ್ಯತೆ ಇರುತ್ತದೆ.

ಶ್ರೀ ವರಾಹಸ್ವಾಮಿ ದರ್ಶನ. ಶುಭ ಸಂಖ್ಯೆ–1



ಸಿಂಹ (ಮ.ಮಿ.ಮು.ಮೊ.ಮೆ.ಟ.ಟಿ.ಟು.ಟೆ)

ಆಪ್ತೇಷ್ಟರ ಸಹಕಾರದೊಂದಿಗೆ ಹೊಸ ಯೋಜನೆಗೆ ಪ್ರೇರಣೆಯಾಗುತ್ತದೆ. ಲಾಭಸ್ಥಾನ ಸ್ಥಿತ ಗುರುವಿನಿಂದ ಸಫಲತೆಯೂ ಆಗುತ್ತದೆ. ಹಿರಿಯರೊಬ್ಬರ ಸಹಾಯಹಸ್ತದಿಂದ ಬದುಕಿಗೆ ಮಾರ್ಗದರ್ಶನವಾಗುತ್ತದೆ. ಖರ್ಚು ಮತ್ತು ಆದಾಯಗಳು ಸಮತೋಲನವಾಗಿರುತ್ತದೆ. ಮನೆಯಲ್ಲಿ ಮಂಗಳ ಕಾರ್ಯವು ಜರುಗಿತು. ಶತ್ರುಗಳು ಮಿತ್ರರಾಗುವರು. ರಾಹು–ಕೇತುಗಳಿಂದ ಆರೋಗ್ಯ ಹದಗೆಡಬಹುದು.

ಶ್ರೀ ಸೂರ್ಯಾಷ್ಟಕ ಪಠಿಸಿ. ಶುಭ ಸಂಖ್ಯೆ–2



ಕನ್ಯಾ (ಟೊ.ಪ.ಪಿ.ಪು.ಫ.ಣ.ಠ.ಪೆ.ಪೊ)

ಹಣಕಾಸು, ಲೆಕ್ಕ ಪತ್ರಗಳ ವಿಚಾರದಲ್ಲಿ ಹೆಚ್ಚು ಗಮನವಿರಿಸುವುದು ಒಳ್ಳೆಯದು. ನಿಮ್ಮ ಬ್ಯಾಂಕ್ ವಿವರಗಳನ್ನು ಯಾರಲ್ಲೂ ಹಂಚಿಕೊಳ್ಳದಿರಿ. ನಿಮ್ಮ ಸ್ವಸಾಮರ್ಥ್ಯದಲ್ಲಿ ನಂಬಿಕೆ ಇರಲಿ. ಉದ್ಯೋಗ ನಿಮಿತ್ತ ಪ್ರಯಾಣಗಳು ಸಂಭವಿಸುವ ಸಾಧ್ಯತೆ ಇರುತ್ತದೆ. ಖರ್ಚುಗಳು ನಿಯಂತ್ರಣವಿಲ್ಲದ ಕಾರಣ ತೊಂದರೆಗೆ ಗುರಿಯಾಗುವಿರಿ.

ಶ್ರೀ ಕೃಷ್ಣಾಷ್ಟಕ ಪಠಿಸಿ. ಶುಭ ಸಂಖ್ಯೆ–1



ತುಲಾ (ರ.ರಿ.ರು.ರೆ.ರೊ.ತ.ತಿ.ತು.ತೆ)

ಭಾಗ್ಯಸ್ಥಾನ ಸ್ಥಿತಗುರು ನಿಮ್ಮ ಧೀಶಕ್ತಿಯನ್ನು ಹೆಚ್ಚಿಸಲಿರುವನು. ಆಧ್ಯಾತ್ಮ ಜ್ಞಾನಾಭಿಲಾಷೆ ಹೆಚ್ಚುವುದು. ಸ್ವಂತ ಉದ್ದಿಮೆದಾರರಿಗೆ ಉತ್ತಮ ಆದಾಯವಾಗಿ ಹಣಕಾಸಿನ ಪರಿಸ್ಥಿತಿಯಲ್ಲಿ ಸುಧಾರಣೆಯನ್ನು ಕಾಣುವಿರಿ. ವಿವಾಹ ಸಂಬಂಧ ಮಾತುಗಳು ಶ್ರಾವಣದ ನಂತರ ಫಲಪ್ರದವಾಗಲಿದೆ. ನ್ಯಾಯಾಲಯ ವಿಚಾರಗಳಲ್ಲಿ ಜಯಶೀಲರಾಗುವಿರಿ. ರಾಹುಗ್ರಹ ಮಂಡಿ ನೋವು, ಉದರ ಸಂಬಂಧಿ ಕಾಯಿಲೆಗೆ ಕಾರಣವಾಗುವನು.

ಶ್ರೀ ಲಿಂಗಾಷ್ಟಕ ಪಠಿಸಿ. ಶುಭ ಸಂಖ್ಯೆ–3



ವೃಶ್ಚಿಕ (ತೊ.ನ.ನಿ.ನು.ನೆ.ನೊ.ಯು.ಯಿ.ಯ

ನೀವು ಎಷ್ಟೇ ಚತುರತೆಯನ್ನು ಪ್ರದರ್ಶಿಸಿದರೂ ವಿಧಿಯಾಟವೇ ಫೈನಲ್. ವ್ಯಾಪಾರಿಗಳಿಗೆ ಪ್ರತಿಸ್ಪರ್ಧಿಗಳ ಸವಾಲು ಇದ್ದೇ ಇರುತ್ತದೆ. ಪಂಚಮ ಶನಿಯಿಂದ ಅನಿರೀಕ್ಷಿತ ಘಟನೆಗಳಿಂದ ಕುಟುಂಬದ ನೆಮ್ಮದಿಗೆ ಭಂಗವಾಗುವುದು. ಚತುರ್ಥ ರಾಹು ಮಾನಸಿಕ ಚಂಚಲತೆ ಹಾಗೂ ತಪ್ಪು ನಿರ್ಧಾರಗಳಿಗೆ ಕಾರಣೀಭೂತನಾಗುವನು. ಆತುರದ ವಾಹನ ಚಾಲನೆ ನಿಮಗೆ ಮುಳುವಾಗಲಿದೆ.

ಶ್ರೀ ಸುಬ್ರಹ್ಮಣ್ಯ ಉಪಾಸನೆ, ಶುಭ ಸಂಖ್ಯೆ–6



ಧನುಸ್ಸು (ಯೆ.ಯೊ.ಬ.ಬಿ.ಬು.ಧ.ಭ.ಢ.ಬೆ)

ಸ್ವಭಾವತಃ ಬುದ್ಧಿವಂತರಾದ ನೀವು ಈಗ ಕೈಕಟ್ಟಿ ಕೂರುವ ಸಮಯವಲ್ಲ, ಯೋಜಿತ ಕೆಲಸಗಳಲ್ಲಿ ಪ್ರವೃತ್ತರಾದಲ್ಲಿ ಹೊಸ ಅವಕಾಶಗಳು ಒದಗಿ ಬಂದು, ನಿಮ್ಮ ಅದೃಷ್ಟ ಖುಲಾಯಿಸಲಿದೆ. ಧನ–ಕನಕ–ವಸ್ತು–ವಾಹನ ಯೋಗ ಉತ್ತಮವಾಗಿದೆ. ಹಲವರಿಗೆ ವಿದೇಶ ಯಾತ್ರೆಯು ಒದಗುವುದು. ಒಳ್ಳೆಯ ಉಪಾಧ್ಯಾಯರ ಭೇಟಿಯಿಂದ ಮನಸ್ಸು ಪುಳಕಿತವಾಗುವುದು.

ಶ್ರೀ ಗುರುರಾಯರ ಆರಾಧನೆ, ಶುಭ ಸಂಖ್ಯೆ–5



ಮಕರ (ಬೊ.ಜ.ಜಿ.ಶಿ.ಶು.ಶೆ.ಶೊ.ಗ.ಗಿ.)

ವ್ಯಾಪಾರ, ವ್ಯವಹಾರ ವಿಚಾರಗಳು ಮಂದವಾಗಿ ನಡೆದರೂ ಒಳ್ಳೆಯ ಲಾಭವನ್ನು ಗಳಿಸುವಿರಿ. ಕುಟುಂಬ ವಿಚಾರದಲ್ಲಿ ಮನೆ ಮಂದಿಯ ಸಹಕಾರ ದೊರೆಯುವುದು. ಪಶು ಸಂಗೋಪನೆ ಹಾಗೂ ಪಶು ವ್ಯಾಪಾರದಿಂದ ಹೆಚ್ಚಿನ ಹಣ ಸಂಪಾದನೆಯಾಗುವುದು. ದೂರ ಪ್ರಯಾಣ ಸಮಯದಲ್ಲಿ ಮೈಮರೆತರೆ ಸಂಕಷ್ಟಕ್ಕೆ ಗುರಿಯಾಗುವಿರಿ. ಸ್ತ್ರೀಯರಿಗೆ ರಕ್ತದೋಷದಿಂದ ಆರೋಗ್ಯದಲ್ಲಿ ಏರುಪೇರು ಉಂಟಾಗುವುದು.

ಶ್ರೀ ಸುದರ್ಶನ ಚಕ್ರ ಮಂತ್ರ ಜಪಿಸಿ. ಶುಭ ಸಂಖ್ಯೆ–7



ಕುಂಭ (ಗು.ಗೆ.ಗೊ.ಸ.ಸಿ.ಸು.ಸೆ.ಸೊ.ದ)

ಸಪ್ತಾಹದ ಆದಿಗೆ ವಸ್ತ್ರಾಭರಣ ಹಾಗೂ ಸುಖ ಪ್ರಾಪ್ತಿ, ಶ್ರೀಮತಿಯಿಂದ ಆನಂದ ಪ್ರಾಪ್ತಿ ಹಾಗೂ ಪ್ರಮುಖ ವಿಷಯದಲ್ಲಿ ಆಕೆಯ ಬೆಂಬಲ, ನಿರೀಕ್ಷಿತ ಹಣ ಕೈ ಸೇರುವುದು. ವಾರದಾರಂಭಕ್ಕೆ ಇದ್ದ ಮಾನಸಿಕ ದುಗುಡತೆ ಕ್ರಮೇಣ ನಿವಾರಣೆಯಾಗುತ್ತದೆ. ಸಾರ್ವಜನಿಕ ಕ್ಷೇತ್ರದಲ್ಲಿರುವವರಿಗೆ ಜನಗೌರವ, ಸಂಶೋಧಕರಿಗೆ ಸರ್ಕಾರದಿಂದ ಮನ್ನಣೆ. ಪಿತ್ತಜನಿತ ಕಾಯಿಲೆ ಕಾಡಬಹುದು.

ಶ್ರೀ ಮಾರುತಿ ದರ್ಶನ. ಶುಭ ಸಂಖ್ಯೆ–7



ಮೀನ (ದಿ.ದು.ಖ.ಝ.ಥ.ತೆ.ದೊ.ಚ.ಚಿ)

ವಾರದಲ್ಲಿ ಎದುರಾಗುವ ಕಷ್ಟ ಸುಖಗಳನ್ನು 'ಸುಖೇ ದುಃಖೇ ಸಮಕೃತ್ವ' ಎಂಬ ಗೀತಾವಾಣಿಯಂತೆ ಮುನ್ನಡೆಯಿರಿ. ಗೃಹ, ನಿವೇಶನ ಹೊಂದಲು ಸಾಲಕ್ಕಾಗಿ ಬ್ಯಾಂಕ್ ಸಂದರ್ಶನವಾದೀತು. ವ್ಯಾಪಾರ, ವ್ಯವಹಾರಗಳು ನಿರೀಕ್ಷಿತ ಲಾಭ ತರದು. ದುರ್ಜನರ ಸಹವಾಸದಿಂದ ಕಷ್ಟಕ್ಕೆ ಗುರಿಯಾಗುವ ಸಾಧ್ಯತೆ ಇದೆ. ಇದು ನಿಮಗೆ ಪರೀಕ್ಷಾ ಸಮಯ, ಸಂಯಮದಿಂದ ನಡೆದು ಸಂಘರ್ಷ ತಪ್ಪಿಸಿಕೊಳ್ಳಿ.

ಶ್ರೀ ಶನಿ ಚಾಲೀಸ ಪಠಿಸಿ. ಶುಭ ಸಂಖ್ಯೆ–9

ಮತ್ತೆ ಮುನ್ನೆಲೆಗೆ ಬಂದ ಬನ್ನೂರು ತಾಲೂಕು ಪ್ರಸ್ತಾಪ

ಮುಖ್ಯಮಂತ್ರಿ, ಜಿಲ್ಲಾ ಉಸ್ತುವಾರಿ ಸಚಿವರಿಗೆ ಮನವಿ ಸಲ್ಲಿಸಿ ಒತ್ತಾಯಿಸಲು ನಿರ್ಧಾರ

ತಿ.ನರಸೀಪುರ, ಜು.5– ಹಲವು ವರ್ಷಗಳಿಂದ ಬನ್ನೂರು ಹೋಬಳಿ ಕೇಂದ್ರವನ್ನು ತಾಲೂಕು ಕೇಂದ್ರವನ್ನಾಗಿ ಮಾಡಬೇಕೆಂಬ ಕೂಗಿಗೆ ಮತ್ತೆ ಮರುಜೀವ ಬಂದಿದೆ. ಬನ್ನೂರಿನ ಕಾಳಮ್ಮ ದೇವಸ್ಥಾನದ ಸಮುದಾಯ ಭವನದಲ್ಲಿ ಶನಿವಾರ ವಿವಿಧ ಸಮುದಾಯದ ಮುಖಂಡರು ಮತ್ತು ಮಾಜಿ ಶಾಸಕರುಗಳ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲು ನಿರ್ಧರಿಸಲಾಯಿತು.

> 46 ಸಾವಿರ ಜನಸಂಖ್ಯೆ ಹೊಂದಿರುವ ಬನ್ನೂರು ಗ್ರಾಮದಲ್ಲಿ ರೈತಾಪಿ ವರ್ಗದವರೇ ಹೆಚ್ಚು, ತಾಲೂಕು ಕ್ಷೇತ್ರ ತಿ.ನರಸೀಪುರಕ್ಕೆ 15 ಕಿಮೀ ಅಂತರವಿದೆ. ಬನ್ನೂರು ಹೋಬಳಿಯ ದೊಡ್ಡಮುಲಗೂಡು ಗ್ರಾಮ ತಿ.ನರಸೀಪುರದಿಂದ 30 ಕಿ.ಮೀ ದೂರ ಇದ್ದು, ಗ್ರಾಮಸ್ಥರು ತೀವ್ರ ತೊಂದರೆ ಎದುರಿಸುವಂತಾಗಿದೆ.ಬನ್ನೂರು ಹೋಬಳಿ 60 ವರ್ಷಗಳ ಇತಿಹಾಸ ಇರುವ ಕ್ಷೇತ್ರ, ಹಾಗಾಗಿ ಎಲ್ಲಾ ಸರ್ಕಾರಿ ಕಚೇರಿಗಳನ್ನು ಇಲ್ಲೇ ತೆರೆಯುವುದರಿಂದ ಎಲ್ಲ ಜನರಿಗೂ ಅನುಕೂಲವಾಗಲಿದೆ.ಜಿಲ್ಲಾ ಉಸ್ತುವಾರಿ ಸಚಿವರು ಈ ನಿಟ್ಟಿನಲ್ಲಿ ದಿಟ್ಟ ಹೆಜ್ಜೆ ಇಟ್ಟಿದ್ದು ತಾಲೂಕು ಕೇಂದ್ರ ಮಾಡಿಕೊಡುವ ಭರವಸೆ ನೀಡಿದ್ದಾರೆ.ಈಗ ಎಲ್ಲ ಗ್ರಾಮಸ್ಥರು ಮುಖ್ಯಮಂತ್ರಿ ಸಿದ್ದರಾಮಯ್ಯರಿಗೆ ಮನವಿ ಸಲ್ಲಿಸುವ ಪ್ರಕ್ರಿಯೆಗೆ ಮುಂದಾಗಬೇಕು, ಮುಂದಿನ ದಿನಗಳಲ್ಲಿ ಕಾನೂನಾತ್ಮಕವಾಗಿ ಜಾತ್ಯಾತೀತವಾಗಿ, ಪಕ್ಷಾತೀತವಾಗಿ ಎಲ್ಲ ಮುಖಂಡರು ಒಗ್ಗಟ್ಟಾಗಿ ಹೋರಾಟ ಮಾಡುವ ಮೂಲಕ ಸರ್ಕಾರದ ಗಮನ ಸೆಳೆದು ಬನ್ನೂರು ಹೋಬಳಿಯನ್ನು ತಾಲೂಕು ಕೇಂದ್ರ ಮಾಡಲು ಪ್ರಾಮಾಣಿಕ ಪ್ರಯತ್ನ ಮಾಡೋಣ. – ಆರ್.ಚೆಲುವರಾಜು, ಮೈಮುಲ್ ಅಧ್ಯಕ್ಷರು.

ಬನ್ನೂರು ಹೋಬಳಿಯನ್ನು ತಾಲೂಕು ಕೇಂದ್ರ ಮಾಡುವಂತೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಒತ್ತಾಯಿಸುವ ಸಲುವಾಗಿ ಕರೆಯಲಾಗಿದ್ದ ವಿವಿಧ ಮುಖಂಡರು ಹಾಗೂ ಬನ್ನೂರು ಪಟ್ಟಣದ ಜನತೆಯ ಸಭೆಯಲ್ಲಿ ಹಲವಾರು ಮುಖಂಡರು ಬನ್ನೂರು ಪಟ್ಟಣ ತಾಲೂಕು ಕೇಂದ್ರವಾದರೆ ಜನತೆಗಾಗುವ ಅನುಕೂಲಗಳ ಬಗ್ಗೆ ಮಾಹಿತಿ ಮಂಡಿಸಿದರು.

ಬನ್ನೂರು ಪಟ್ಟಣದಿಂದ ದೂರವಿರುವ ತಾಲೂಕು ಕೇಂದ್ರವಾದ ತಿ.ನರಸೀಪುರಕ್ಕೆ ಹೋಗಲು ಜನರಿಗೆ ಕಷ್ಟವಾಗಿದೆ. ಹಾಗಾಗಿ ಬನ್ನೂರನ್ನೇ ತಾಲೂಕು ಮಾಡಲು ಮಾಜಿ ಶಾಸಕರು, ರಾಜಕೀಯ ಮುಖಂಡರು ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳನ್ನು ಒತ್ತಾಯಿಸಬೇಕಿದೆ. ಅಲ್ಲದೇ ಸಚಿವ ಮಹದೇವಪ್ಪನವರನ್ನು ಪಟ್ಟಣದ ಜನತೆ ನಿಯೋಗದೊಂದಿಗೆ ತೆರಳಿ ಭೇಟಿ ಮಾಡಿ ಮನವಿ ಸಲ್ಲಿಸಲು ಮುಂದಾಗಬೇಕೆಂದು ಹಲವು ಮುಖಂಡರು ಸಲಹೆ ನೀಡಿದರು.

ಹೊಸ ತಾಲೂಕು ಘೋಷಣೆಯಾಗಬೇಕಾದರೆ ಡಿಸೆಂಬರ್ 31ರೊಳಗಾಗಿ ಆಗಬೇಕು. ಇಲ್ಲದಿದ್ದರೆ 2030ರ ತನಕ ಹೊಸ ತಾಲೂಕು ರಚನೆ ಆಗುವುದಿಲ್ಲ. ಹಾಗಾಗಿ ಎಲ್ಲರೂ ಸೇರಿ ಪಟ್ಟು ಹಿಡಿದು ತಾಲೂಕು ಕೇಂದ್ರ ಘೋಷಣೆ ಮಾಡಿಸುವ ಕೆಲಸ ಮಾಡಬೇಕಿದೆ ಎಂಬ ಅಭಿಪ್ರಾಯ ಸಭೆಯಲ್ಲಿ ವ್ಯಕ್ತವಾಯಿತು.

ಈ ವೇಳೆ ಸಾರ್ವಜನಿಕರು ಮತ್ತು ಗ್ರಾಮಸ್ಥರ ಸಲಹೆ ಅಭಿಪ್ರಾಯ ಕ್ರೋಢೀಕರಿಸಿ ಮಾತನಾಡಿದ ಮಾಜಿ ಶಾಸಕಿ ಜೆ.ಸುನೀತಾ ವೀರಪ್ಪಗೌಡ ಬನ್ನೂರು ಪಟ್ಟಣವನ್ನು ತಾಲೂಕು ಕೇಂದ್ರ ಮಾಡುವ ಸಂಬಂಧ ಸಭೆ ಕರೆಯುತ್ತಿರುವ ಬಗ್ಗೆ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ ತಿಳಿಸಿದ್ದೆ. ಸಚಿವರು ತಾಲೂಕು ಕೇಂದ್ರ ಮಾಡಿಸಿಯೇ ತೀರುತ್ತೇನೆ ಎಂದು ಸಭೆಗೆ ಹೋಗಿ ತಿಳಿಸಮ್ಮ ಎಂದು ನನ್ನ ಬಳಿ ಹೇಳಿದ್ದರು.ಹಾಗಾಗಿ ಬನ್ನೂರು ಹೋಬಳಿ ತಾಲೂಕು ಕೇಂದ್ರ ಆಗಿಯೇ ಆಗುತ್ತೆ ಇದರಲ್ಲಿ ಯಾವುದೇ ಸಂಶಯ ಬೇಡ ಎಂದರು.

ಅವೈಜ್ಞಾನಿಕವಾಗಿ ಕ್ಷೇತ್ರ ಪುನರ್ ವಿಂಗಡಣೆ ಮಾಡಿದಾಗಲೇ ನಾವು ಹೋರಾಟ ಮಾಡಬೇಕಿತ್ತು ನರಸೀಪುರ ಹಾಗೂ ವರುಣ ಕ್ಷೇತ್ರದ ರಚನೆಯೇ ಅವೈಜ್ಞಾನಿಕ ಹಾಗಾಗಿ ಆಗ ನಾವು ಪ್ರತಿಭಟಿಸದೇ ತಪ್ಪು ಮಾಡಿದ್ದೆವು, ಆಗ ನಾವು ಬನ್ನೂರು ಕ್ಷೇತ್ರ ನರಸೀಪುರಕ್ಕೆ ಸೇರ್ಪಡೆಯಾದಾಗಲೇ ವಿರೋಧಿಸಿದ್ದರೆ ಈಗಾಗಲೇ ಬನ್ನೂರು ತಾಲೂಕು ಕೇಂದ್ರವಾಗುತ್ತಿತ್ತು, ನಮ್ಮಲ್ಲಿ ಹೋರಾಟದ ನೆಲೆಯಿಲ್ಲದ್ದರಿಂದ ಈಗೆಲ್ಲಾ ಆಯ್ತು ಎಂದರು.

ಪ್ರೊ.ಡಾ.ಬಿ.ಕೆ.ಜ್ಞಾನಪ್ರಕಾಶ್ ಮಾತನಾಡಿ, ನಮ್ಮ ನಾಯಕಿಯಾದ ಸುನೀತಾ ವೀರಪ್ಪ ಗೌಡರೊಟ್ಟಿಗೆ ಸಚಿವರೊಂದಿಗೆ ಚರ್ಚೆ ಮಾಡಿದ್ದೇವೆ. ಕಳೆದ 30 ವರ್ಷಗಳಿಂದ ತಾಲೂಕು ರಚನೆಯ ಕೂಗು ಕೇಳಿ ಬಂದಿದೆ. ನೀವು ಸಚಿವರಾಗಿದ್ದೀರಾ, ಈಗಲಾದರೂ ಬನ್ನೂರನ್ನು ತಾಲೂಕು ಕೇಂದ್ರ ಮಾಡಿ ಎಂದು ಮನವಿ ಮಾಡಿದ್ದೇವೆ ಎಂದ ಅವರು, ತಾಲೂಕು ಕೇಂದ್ರ ಮಾಡಿ ಎಂದು ಒತ್ತಾಯಿಸಿ ನಾವ್ಯಾರೂ ಸಚಿವರ ಬಳಿ ಹೋಗಬೇಕಿಲ್ಲ. ಮತ್ತೆ ಇದೇ ರೀತಿಯ ಸಭೆ ಮಾಡಿ ಸಚಿವರನ್ನು ಇಲ್ಲೇ ಕರೆಸಿ ಇಲ್ಲೇ ತಾಲೂಕು ಕೇಂದ್ರದ ಘೋಷಣೆ ಮಾಡಿಸೋಣ ಎಂದರು.

ನಂತರ ಬನ್ನೂರು ಹೋಬಳಿಯನ್ನು ತಾಲೂಕು ಕೇಂದ್ರ ಮಾಡಲು ಸಭೆಯಲ್ಲಿ ಸೇರಿದ್ದ ಮುಖಂಡರು ಸರ್ವಾನುಮತದ ಒಪ್ಪಿಗೆ ಸೂಚಿಸಿದರು. ಈ ಬಗ್ಗೆ ನಿರ್ಣಯ ಕೈಗೊಳ್ಳುವ ಜೊತೆಗೆ ಸಮಿತಿ ರಚನೆ ಮಾಡುವ ನಿರ್ಧಾರ ಕೈಗೊಳ್ಳಲಾಯಿತು. ಜೊತೆಗೆ ಉಸ್ತುವಾರಿ ಸಚಿವರು ಹಾಗೂ ಮುಖ್ಯಮಂತ್ರಿಗಳ ಬಳಿಗೆ ನಿಯೋಗ ತೆರಳಲು ಸಭೆಯಲ್ಲಿ ತೀರ್ಮಾನಿಸಲಾಯಿತು.

ಮಾಜಿ ಶಾಸಕ ಎಸ್.ಕೃಷ್ಣಪ್ಪ, ಬನ್ನೂರು ಪುರಸಭಾ ಮಾಜಿ ಅಧ್ಯಕ್ಷ ಪದ್ಮನಾಭ, ಮಾಜಿ ಉಪಾಧ್ಯಕ್ಷ ರಾಮಲಿಂಗೇಗೌಡ, ಸದಸ್ಯ ಶಿವಣ್ಣ, ವಿಶ್ವಕರ್ಮ ಸಮಾಜದ ಹಿರಿಯ ಮುಖಂಡ ಎ.ಎನ್.ಸ್ವಾಮಿ, ಒಕ್ಕಲಿಗ ಸಂಘದ ಹಿರಿಯ ಮುಖಂಡ ವೈ.ಎಸ್ ರಾಮಸ್ವಾಮಿ, ನುಗ್ಗಳ್ಳಿಕೊಪ್ಪಲು ರಾಮಚಂದ್ರ, ತಾ.ಪಂ. ಮಾಜಿ ಅಧ್ಯಕ್ಷರಾದ ಚಾಮೇ ಗೌಡ, ಕುಮಾರಸ್ವಾಮಿ, ಸತೀಶ್ ನಾಯ್ಕ, ಮಹೇಶ್, ಸ್ವಾಮಿ ಗೌಡ, ಸುರೇಶ್, ಸೋಮಶೇಖರ್, ಅತ್ತಹಳ್ಳಿ ಗ್ರಾ.ಪಂ. ಅಧ್ಯಕ್ಷ ಮಹೇಶ್, ಮಾಜಿ ಅಧ್ಯಕ್ಷ ಸುನಿಲ್, ತುರುಗನೂರು ಟಿ.ಎಸ್. ಲೋಕೇಶ್, ದೀಪು, ಸುಬ್ರಹ್ಮಣ್ಯ, ಬಸವನಹಳ್ಳಿ ಗ್ರಾ.ಪಂ. ಮಾಜಿ ಅಧ್ಯಕ್ಷ ರಾಜು, ಅತ್ತಹಳ್ಳಿ ಸತೀಶ್, ಯಾಚೇನಹಳ್ಳಿ ಅಶೋಕ್, ಡಾ.ಮಲ್ಲಿಕಾರ್ಜುನ, ಸಿದ್ದೇಗೌಡ, ಸೀಹಳ್ಳಿ ರಾಜುಗೌಡ ಸೇರಿದಂತೆ ಮತ್ತಿತರೆ ಮುಖಂಡರು ಹಾಜರಿದ್ದರು.



ತಿ.ನರಸೀಪುರ ತಾಲೂಕು ಬನ್ನೂರು ಹೋಬಳಿಯನ್ನು ತಾಲೂಕು ಕೇಂದ್ರ ಮಾಡುವಂತೆ ಒತ್ತಾಯಿಸುವ ಸಲುವಾಗಿ ಕರೆಯಲಾಗಿದ್ದ ಸರ್ವ ಜನಾಂಗದ ಮುಖಂಡರ ಸಭೆಯಲ್ಲಿ ಮಾಜಿ ಶಾಸಕಿ ಸುನೀತಾ ವೀರಪ್ಪಗೌಡ,ಎಸ್.ಕೃಷ್ಣಪ್ಪ,ಮೈಮುಲ್ ಅಧ್ಯಕ್ಷ ಚೆಲುವರಾಜು ಭಾಗಿಯಾಗಿದ್ದರು.

> ಮಹದೇವಪ್ಪರನ್ನು ನಾನು ಭೇಟಿ ಮಾಡಿದ್ದ ವೇಳೆ ಅವರು ನನಗೂ ಬನ್ನೂರು ಹೋಬಳಿ ತಾಲೂಕು ಆಗಬೇಕೆಂಬ ಆಸೆ ಇದೆ. ಈ ಸಂಬಂಧ ನಾನೀಗಾಗಲೇ ಸಿಎಂಗೆ ವಿಷಯ ತಿಳಿಸಿದ್ದೇನೆ, ಖಂಡಿತಾ ತಾಲೂಕು ಮಾಡಿಸೋಣ ಎಂದು ಭರವಸೆ ನೀಡಿದ್ದರು. ಹಾಗಾಗಿ ಮಹದೇವಪ್ಪರವರು ಬನ್ನೂರು ಹೋಬಳಿಯನ್ನು ತಾಲೂಕು ಮಾಡಲು ವಿಶೇಷ ಆಸಕ್ತಿ ವಹಿಸಿದ್ದು ಈ ಸರ್ಕಾರದ ಅವಧಿಯಲ್ಲಿ ಖಂಡಿತ ತಾಲೂಕು ಕೇಂದ್ರವಾಗಲಿದೆ. ಯಾರೂ ಈ ಬಗ್ಗೆ ಅನುಮಾನಪಡುವುದು ಬೇಡ. – ಸುನೀತಾ ವೀರಪ್ಪ ಗೌಡ

ಬ್ಯಾಂಕ್ ಚುನಾವಣೆಯಲ್ಲಿ ಗೆದ್ದ ಶಾಸಕ ಹರೀಶ್‌ಗೌಡರಿಗೆ ಸನ್ಮಾನ



ಎಂಸಿಡಿಸಿಸಿ ಬ್ಯಾಂಕ್ ನಿರ್ದೇಶಕರಾಗಿ ಆಯ್ಕೆಯಾದ ಹುಣಸೂರು ಶಾಸಕ ಜಿ.ಡಿ ಹರೀಶ್ ಗೌಡರನ್ನು ಜಯಪುರ ದೊಡ್ಡಪ್ರಮಾಣ ಪತ್ತಿನ ವ್ಯವಸಾಯ ಸೇವಾ ಸಹಕಾರ ಸಂಘದ ಅಧ್ಯಕ್ಷ ಮಾವಿನಹಳ್ಳಿ ಮರಿಸಿದ್ದೇಗೌಡ ಮತ್ತು ನಿರ್ದೇಶಕರು ಅಭಿನಂದಿಸಿದರು. ಜಯಪುರ ಗ್ರಾಪಂ ಅಧ್ಯಕ್ಷ ಮಾದೇವಯ್ಯ, ಸದಸ್ಯರಾದ ಎಂ.ನಾಗರಾಜು, ಬೈರೇಶ್, ಬಸವಣ್ಣ, ಅಬ್ದುಲ್ ಮುತಾಲಿಫ್, ರಂಗಸ್ವಾಮಿ, ಅಂಕಪ್ಪ ಲೋಕೇಶ್ ಉಪಸ್ಥಿತರಿದ್ದರು.

ಗ್ಯಾಸ್ ಸೋರಿ ಅಗ್ನಿ ಅನಾಹುತದಲ್ಲಿ ಮನೆಗೆ ಹಾನಿ

ಅದೃಷ್ಟವಶಾತ್ ಮನೆಯಲ್ಲಿದ್ದವರು ಅಪಾಯದಿಂದ ಪಾರು

ಹುಣಸೂರು, ಜು.5– ತಾಲೂಕಿನ ಬಿಳಿಕೆರೆ ಹೋಬಳಿಯ ವಡ್ಡರಗುಡಿ ಗ್ರಾಮದ ನಿವಾಸಿ ಶಾಂತಲಾ ಎಂಬುವರ ನೂತನ ಮನೆಯಲ್ಲಿ ಕಟ್ಟಡ ಕಾರ್ಮಿಕರಿಗೆ ಅಡುಗೆ ಮಾಡುವಾಗ ಆಕಸ್ಮಿಕವಾಗಿ ಗ್ಯಾಸ್ ಸೋರಿಕೆಯಿಂದ ಬೆಂಕಿ ಅನಾಹುತ ಸಂಭವಿಸಿದ್ದು, ಮನೆಯ ಚಾವಣಿ ಹಾನಿಗೊಳಗಾಗಿದೆ. ಅದೃಷ್ಟವಶಾತ್ ಘಟನೆಯಿಂದ ಮನೆಯಲ್ಲಿದ್ದ ಅತ್ತೆ–ಸೊಸೆ ಮತ್ತು ಕಾರ್ಮಿಕರು ಸೇರಿದಂತೆ ಯಾರಿಗೂ ಗಾಯವಾಗದೆ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ಸುದ್ದಿಗಾರರೊಂದಿಗೆ ಮಾತನಾಡಿದ ಬಿಳಿಕೆರೆ ಠಾಣೆ ಸಬ್ ಇನ್ಸ್‌ಪೆಕ್ಟರ್ ಪೂಜಾಶ್ರೀ, ಬೆಂಕಿಯಿಂದ ಮನೆಯಲ್ಲಿದ್ದ ಎಲ್ಲಾ ಪೀಠೋಪಕರಣಗಳು ಹಾಗೂ ಬಟ್ಟೆ ಬರೆಗಳು ಸಂಪೂರ್ಣವಾಗಿ ನಾಶಗೊಂಡಿದೆ ಎಂದರು. ಸುಮಾರು 20 ಲಕ್ಷಕ್ಕೂ ಹೆಚ್ಚು ನಷ್ಟ ಆಗಿದೆ ಎಂದು ದೂರು ನೀಡಿದ್ದಾರೆ.

ಸ್ಥಳಕ್ಕೆ ಅಗ್ನಿಶಾಮಕ ದಳದವರು ತುರ್ತಾಗಿ ಬಂದು ಮನೆಗೆ ತಗಲಿದ ಬೆಂಕಿಯನ್ನು ಅಕ್ಕ ಪಕ್ಕದ ಮನೆಗಳಿಗೆ ಹರಡದಂತೆ ನಂದಿಸಿದ್ದಾರೆ. ಗ್ಯಾಸ್ ಸಂಸ್ಥೆಯ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಿ ರೆಗ್ಯುಲೇಟರ್‌ನಿಂದ ಸಂಭವಿಸಿರುವ ಘಟನೆ ಎಂದು ಮಾಹಿತಿ ನೀಡಿದ್ದಾರೆ. ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.



ಸಾಲದ ಬಾಧೆ ತಾಳಲಾರದೆ ವಿಷ ಕುಡಿದು ರೈತ ಆತ್ಮಹತ್ಯೆ

ಹುಣಸೂರು, ಜು.5– ತಾಲೂಕು ಬಿಳಿಕೆರೆ ಹೋಬಳಿ ಶ್ರವಣಹಳ್ಳಿ ಗ್ರಾಮದ ರೈತ ಪುಟ್ಟಸ್ವಾಮಾಚಾರಿ (50) ಸಾಲದ ಬಾಧೆ ತಾಳಲಾರದೆ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಶನಿವಾರ ಸಂಭವಿಸಿದೆ. ಹೊಗೆಸೊಪ್ಪು ಹಾಗೂ ಇನ್ನಿತರೆ ಬೆಳೆ ಬೆಳೆಯಲು ಒಟ್ಟು 20 ಲಕ್ಷಕ್ಕೆ ಸಾಲ, ಮೈಕ್ರೋ ಫೈನಾನ್ಸ್ ಮತ್ತು ಚೋಳಮಂಡಲ ಫೈನಾನ್ಸ್‌ನಿಂದ ಸುಮಾರು 9 ಲಕ್ಷ ಸಾಲ ಪಡೆದಿದ್ದರು. ಕಳೆದ ಕೆಲವು ದಿನಗಳಿಂದ ಸಾಲ ಮರುಪಾವತಿಸುವಂತೆ ಬ್ಯಾಂಕ್‌ನವರು ಮನೆಯ ಬಳಿ ಬಂದು ಗಲಾಟೆ ಮಾಡಿದ್ದರಿಂದ ಸಾಲದ ಬಾಧೆ ತಾಳಲಾರದೆ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದರು. ಕೂಡಲೇ ಇವರನ್ನು ಕೆ.ಆರ್.ನಗರ ಆಸ್ಪತ್ರೆಗೆ ದಾಖಲಿಸಿ, ಚಿಕಿತ್ಸೆ ಕೊಡಿಸಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಮೃತ ಪಟ್ಟಿದ್ದಾರೆ. ಬಿಳಿಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ವಾರಸುದಾರರಿಗೆ ದೇಹವನ್ನು ಒಪ್ಪಿಸಲಾಯಿತು. ಇವರು ಪತ್ನಿ, ಇಬ್ಬರು ಮಕ್ಕಳನ್ನು ಅಗಲಿದ್ದಾರೆ.



ಜನ್ಮ ಕೊಟ್ಟವರು ಪೋಷಕರು, ಜೀವನ ರೂಪಿಸುವವರು ಶಿಕ್ಷಕರು

ನಂಜನಗೂಡು, ಜು.5– ಜನ್ಮ ಕೊಟ್ಟವರು ಪೋಷಕರಾದರೆ, ಜೀವನ ರೂಪಿಸುವವರು ಶಿಕ್ಷಕರು. ವಿದ್ಯಾರ್ಥಿಗಳು ಶಿಕ್ಷಕರ ಮೇಲೆ ಗೌರವ ಹೊಂದಿರಬೇಕು ಎಂದು ಕಾರ್ಮಿಕರ ನಿರೀಕ್ಷಕಿ ವೈ.ಆರ್.ಅಂಬಿಕಾ ತಿಳಿಸಿದರು.

ನಗರದ ಎಸ್‌ಎನ್‌ಎಸ್ ಕಲ್ಯಾಣ ಮಂಟಪದಲ್ಲಿ ಶನಿವಾರ ತಾಲೂಕು ಹೋಟೆಲ್ ಮಾಲೀಕರ ಸಂಘ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಮೊಬೈಲ್ ಗೀಳಿಗೆ ಒಳಗಾಗದೆ ಪಾಠದ ಕಡೆಗೆ ಹೆಚ್ಚಿನ ಗಮನ ನೀಡಬೇಕು, ಶಿಕ್ಷಣ ಪ್ರತಿಯೊಬ್ಬ ಪ್ರಜೆಯ ಮೂಲಭೂತ ಹಕ್ಕು, ಒಳ್ಳೆಯ ವಿದ್ಯಾವಂತರಾಗಿ ಸಮಾಜದ ಋಣ ತೀರಿಸಬೇಕು, ಹೋಟೆಲ್ ಮಾಲೀಕರ ಸಂಘ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನಗದು ಪುರಸ್ಕಾರ ನೀಡಿ ಪ್ರೋತ್ಸಾಹಿಸುತ್ತಿರುವ ಕಾರ್ಯ ಶ್ಲಾಘನೀಯ ಎಂದು ಹೇಳಿದರು.


ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಗುರುಪ್ರಸನ್ನ ಮಾತನಾಡಿ, 46 ವರ್ಷಕ್ಕೆ ಕಾಲಿಡುತ್ತಿರುವ ಹೋಟೆಲ್ ಮಾಲೀಕರ ಸಂಘ ಕಳೆದ 25 ವರ್ಷಗಳಿಂದ ತಾಲೂಕಿನ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸುವ ಕೆಲಸ ಮಾಡುತ್ತಿದೆ, ವಿದ್ಯಾರ್ಥಿಗಳ ಜೀವನ ಉಜ್ವಲವಾಗಿರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳಿಗೆ ಪುಸ್ತಕ, ಬ್ಯಾಗ್‌ಗಳನ್ನು ವಿತರಿಸಲಾಯಿತು, ಹೆಚ್ಚಿನ ಅಂಕ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ಎನ್.ಎಮ್.ಮಂಜುನಾಥ್, ಜಿ.ಎನ್.ಬಾಲಕೃಷ್ಣರಾವ್, ರಾಮಕೃಷ್ಣ, ರಾಜೇಂದ್ರ, ನಂಜುಂಡಸ್ವಾಮಿ, ಶೇಖರ್, ಸಂದೀಪ್, ನಕುಲ್ ಧನ್ಯ ಉಪಸ್ಥಿತರಿದ್ದರು.



ಹೋಟೆಲ್ ಮಾಲೀಕರ ಸಂಘ ಆಯೋಜಿಸಿದ್ದ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ನಾಳೆಯಿಂದ ಹುಲ್ಲಹಳ್ಳಿ ಸುತ್ತಮುತ್ತ ವಿದ್ಯುತ್ ವ್ಯತ್ಯಯ



ನಂಜನಗೂಡು, ಜು.5– ತಾಲೂಕಿನ ಹುಲ್ಲಹಳ್ಳಿ ಟೌನ್ ವ್ಯಾಪ್ತಿಯಲ್ಲಿ ರಸ್ತೆ ಅಗಲೀಕರಣ ಕಾಮಗಾರಿಯ ಅಂಗವಾಗಿ ವಿದ್ಯುತ್ ಕಂಬಗಳನ್ನು ಸ್ಥಳಾಂತರಿಸುವ ಕಾಮಗಾರಿಗಳನ್ನು ಹಮ್ಮಿಕೊಂಡಿರುವ ಕಾರಣ ಜು.7 ರಿಂದ 13ರವರೆಗೆ ಬೆಳಗ್ಗೆ 10ರಿಂದ ಸಂಜೆ 7 ಗಂಟೆಯವರೆಗೆ ವಿದ್ಯುತ್ ವ್ಯತ್ಯಯಗೊಳ್ಳಲಿದೆ, ಸಾರ್ವಜನಿಕರು ಸಹಕಾರ ನೀಡಬೇಕು ಎಂದು ಚೆಸ್ಕಾಂ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ದೇವರಾಜಯ್ಯ ಪ್ರಕಟಣೆಯಲ್ಲಿ ಕೋರಿದ್ದಾರೆ.

ಹೆಚ್.ಡಿ.ಕೋಟೆಯಲ್ಲಿ ವಾರಾಹಿ, ಮಾರಮ್ಮನವರಿಗೆ ತಂಪಿನ ಪೂಜೆ

ಹೆಚ್.ಡಿ.ಕೋಟೆ, ಜು.5– ಪಟ್ಟಣದ ವಾರಾಹಿ ಮತ್ತು ಮಾರಮ್ಮನವರ ಜಾತ್ರಾ ಮಹೋತ್ಸವದ ಅಂಗವಾಗಿ ಬುಧವಾರ ಕೊಂಡೋತ್ಸವ ಜರುಗಿದ ಬಳಿಕ ಪಟ್ಟಣದ ವೀರಶೈವ ಮತ್ತು ಆರಾಧ್ಯ ಸಮುದಾಯದವರು ವಾರಾಹಿ ಮತ್ತು ಮಾರಮ್ಮ ತಾಯಿಗೆ ತಂಪಿನ ಪೂಜೆ ನೆರವೇರಿಸಿದರು.

ಪಟ್ಟಣ ಸೇರಿದಂತೆ ವಡ್ಡರಗುಡಿ, ಚಾಕಹಳ್ಳಿ, ಗ್ರಾಮಗಳಿಂದ ಬಂದಿದ್ದ ಸಮುದಾಯದವರು ಪಟ್ಟಣದಲ್ಲಿರುವ ಗಣೇಶ ದೇವಾಲಯದಿಂದ ಮಂಗಳವಾದ್ಯ, ವೀರಗಾಸೆಯೊಂದಿಗೆ ಮೆರವಣಿಗೆ ಹೊರಟು ಬಸ್ ನಿಲ್ದಾಣದ ಮೂಲಕ ತೆರಳಿ ಮೊದಲನೇ ಮುಖ್ಯ ರಸ್ತೆಯಲ್ಲಿರುವ ಮಾರಮ್ಮ ದೇವಾಲಯಕ್ಕೆ ತಲುಪಿದರು. ಆ ಬಳಿಕ ದೇವಾಲಯದಲ್ಲಿ ಪೂಜೆಯನ್ನು ನೆರವೇರಿಸಿದರು. ನಂತರ ಪ್ರಸಾದ ವಿನಿಯೋಗ ನಡೆಯಿತು.

ತಂಪಿನ ಪೂಜೆಯ ವಿಶೇಷ: ಮಹಿಳೆಯರು ಅಕ್ಕಿ ತಂಬಿಟ್ಟು, ಎಳ್ಳು ತಂಬಿಟ್ಟು, ಗಣಗಲೆ ಹೂವಿನಿಂದ ಮಾಡಿದ ಹಾರ, ಬಣ್ಣ ಬಣ್ಣದ ಹೂಗಳನ್ನು ತಂದು ತಾಲೂಕಿನಲ್ಲಿ ಮಳೆ ಬೆಳೆ ಉತ್ತಮವಾಗಿರಲಿ, ಎಲ್ಲರೂ ಸೌಖ್ಯದಿಂದಿರಲಿ ಎಂದು ವಿಶೇಷವಾಗಿ ಪೂಜೆ ಸಲ್ಲಿಸಿದರು. ನಂತರ ದೇವಾಲಯದ ಬಳಿ ಪೂಜೆ ಸಲ್ಲಿಸಿ, ಆ ಬಳಿಕ ತಂಬಿಟ್ಟನ್ನು ಭಕ್ತಾದಿಗಳಿಗೆ ಹಂಚಿ ಸಂಭ್ರಮಿಸಿದರು.

ಮೆರವಣಿಗೆಯಲ್ಲಿ ವಿಶೇಷವಾಗಿ ಮಕ್ಕಳಿಗೆ ವಿವಿಧ ವೇಷಭೂಷಣಗಳಾದ ಬಸವಣ್ಣ, ಈಶ್ವರ, ಗಣೇಶ, ಸುಬ್ರಹ್ಮಣ್ಯ, ಆಂಜನೇಯ, ಲಕ್ಷ್ಮಿ, ಪಾರ್ವತಿ, ಸರಸ್ವತಿ, ಚಾಮುಂಡೇಶ್ವರಿಯ ಛದ್ಮವೇಷ ತೊಡಿಸಿ ಗಮನ ಸೆಳೆದರು.

ಕಾರ್ಯಕ್ರಮದಲ್ಲಿ ಮುಖಂಡರಾದ ವೈ.ಟಿ.ಮಹೇಶ್, ಸಿ.ಎನ್.ನಾಗಣ್ಣ, ವೀರಪ್ಪ, ಶಿವರಾಜಪ್ಪ ಉದಯಕುಮಾರ್, ನಾಗಭೂಷಣಾರಾಧ್ಯ, ಚಂದ್ರಶೇಖರಾಧ್ಯ, ನಿಜಗುಣ, ಉಮೇಶ್, ಸ್ವಾಮಿ, ಪ್ರಕಾಶ್ ಶಿವಕುಮಾರ್, ಮಹೇಶ್, ರೇವಣ್ಣ, ರಾಜಣ್ಣ ಆನಂದ, ಆದರ್ಶ, ರಘು ಇದ್ದರು.



ತಂಪಿನ ಪೂಜೆಗೆ ತೆರಳುತ್ತಿರುವ ಗ್ರಾಮಸ್ಥರು

ಸರ್ಕಾರಿ ಪ್ರೌಢಶಾಲೆ ಶಿಕ್ಷಕಿ ರೇಣುಕಾರವರಿಗೆ ಬೀಳ್ಕೊಡುಗೆ



ನಂಜನಗೂಡು ತಾಲೂಕಿನ ಹೆಡತಲೆ ಸರ್ಕಾರಿ ಪ್ರೌಢಶಾಲೆಯಲ್ಲಿ ಹತ್ತು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತಿಯಾದ ಕನ್ನಡ ಶಿಕ್ಷಕಿ ರೇಣುಕಾ ಅವರನ್ನು ಗ್ರಾಮಸ್ಥರು ಹಾಗೂ ವಿದ್ಯಾರ್ಥಿಗಳು, ಶಿಕ್ಷಕ ವೃಂದದವರು ಬೀಳ್ಕೊಟ್ಟರು. ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ವೃಷಬೇಂದ್ರಪ್ಪ, ಮುಖ್ಯ ಶಿಕ್ಷಕ ಬೆಳ್ಳೇಗೌಡ ಹಾಜರಿದ್ದರು.

ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘಕ್ಕೆ ಆಯ್ಕೆ


ಬನ್ನೂರು, ಜು.5– ಪಟ್ಟಣದ ಸಮೀಪದ ತುರಗನೂರು ಗ್ರಾಮದಲ್ಲಿರುವ ಹೋಬಳಿ ಮಟ್ಟದ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಗೆ ಅಧ್ಯಕ್ಷರಾಗಿ ಸ್ವಾಮಿಗೌಡ ಮತ್ತು ಉಪಾಧ್ಯಕ್ಷರಾಗಿ ಬೀರಯ್ಯ ಅವಿರೋಧವಾಗಿ ಆಯ್ಕೆಯಾದರು.

ತುರಗನೂರು ಗ್ರಾಮದ ಹಾಲು ಉತ್ಪಾದಕ ಸಹಕಾರ ಸಂಘದ ಆವರಣದಲ್ಲಿರುವ ಕುರಿ ಮತ್ತು ಉಣ್ಣೆ ಉತ್ಪಾದಕರ ಸಹಕಾರ ಸಂಘದಲ್ಲಿ 12 ಜನ ನಿರ್ದೇಶಕರಿದ್ದು, ಅಧ್ಯಕ್ಷ ಮತ್ತು ಉಪಾಧ್ಯಕ್ಷ ಆಯ್ಕೆಗಾಗಿ ನಡೆದ ಚುನಾವಣೆಯಲ್ಲಿ ಅಂಕನಹಳ್ಳಿ ಸ್ವಾಮಿಗೌಡ ಮತ್ತು ಉಪಾಧ್ಯಕ್ಷ ಸ್ಥಾನಕ್ಕೆ ಬೀರಯ್ಯ ನಾಮಪತ್ರ ಸಲ್ಲಿಸಿದರು. ಉಳಿದಂತೆ ಯಾರು ನಾಮಪತ್ರ ಸಲ್ಲಿಸದ ಹಿನ್ನೆಲೆಯಲ್ಲಿ ಅವಿರೋಧವಾಗಿ ಅಧ್ಯಕ್ಷರಾಗಿ ಸ್ವಾಮಿಗೌಡ ಮತ್ತು ಉಪಾಧ್ಯಕ್ಷರಾಗಿ ಬೀರಯ್ಯ ಆಯ್ಕೆಯನ್ನು ಚುನಾವಣಾಧಿಕಾರಿ ಪ್ರಕಟಿಸಿದರು.

ನಿರ್ದೇಶಕರಾದ ಬಿ.ಎಸ್.ರಾಮಲಿಂಗೇಗೌಡ, ನಾಗೇಂದ್ರ ಕುನ್ನಯ್ಯ, ಹೊಂಬೇಗೌಡ, ಎಸ್.ಕೆ.ರಾಜುಗೌಡ, ಎಂ.ಲೋಕೇಶ್, ಡಿ.ನಾಗೇಶ್, ಟಿ.ಸಿ.ಸಂದೀಪ್, ರಾಜಮ್ಮ, ಪಾರ್ವತಮ್ಮ, ತುರಗನೂರು ಡೈರಿ ಅಧ್ಯಕ್ಷ ರವಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಚನ್ನಕೇಶವ, ನಂದೀಶ್ ಇತರರು ಉಪಸ್ಥಿತರಿದ್ದರು.



ಡಾ.ಮಹದೇವಪ್ಪ, ಬಸವರಾಜುಗೆ ಸನ್ಮಾನ



ಮೂಗೂರಿನ ಕರ್ನಾಟಕ ಪಬ್ಲಿಕ್ ಶಾಲೆ ಆವರಣದಲ್ಲಿ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿದ ಬಳಿಕ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಕೆಪಿಎಸ್ ಶಾಲೆಯ ಉಪಾಧ್ಯಕ್ಷ ಎಂ.ಎನ್.ಸೋಮಣ್ಣ ಹಾಗೂ ತಾಲೂಕು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು ಅವರನ್ನು ಸನ್ಮಾನಿಸಿದರು. ಈ ಸಂದರ್ಭದಲ್ಲಿ ನರಸಿಂಹಮಾದನಾಯಕ, ಕಾಲೇಜು ಪ್ರಾಂಶುಪಾಲ ರಾಚಯ್ಯ, ಉಪ ಪ್ರಾಂಶುಪಾಲ ಸಿ.ಪುಟ್ಟಸ್ವಾಮಿ, ಸಮಿತಿ ಸದಸ್ಯ ಎಂ.ನಾಗರಾಜು, ಕುಮಾರಸ್ವಾಮಿ ಸುಂದ್ರಪ್ಪ ಇತರರು ಉಪಸ್ಥಿತರಿದ್ದರು.

ಪ್ರೀತಿಯ ನಾಟಕವಾಡಿ ಯುವತಿಗೆ ವಂಚನೆ ಪ್ರಕರಣ

ತಿ.ನರಸೀಪುರದಲ್ಲಿ ಬಿಜೆಪಿ ಮುಖಂಡನ ಪುತ್ರನ ಸೆರೆ

ಮಂಗಳೂರು, ಜು.5–ಪ್ರೀತಿಯ ನಾಟಕವಾಡಿ ಮದುವೆಯಾಗುವುದಾಗಿ ನಂಬಿಸಿ ಯುವತಿ ಜತೆ ದೈಹಿಕ ಸಂಪರ್ಕ ಬೆಳೆಸಿ ನಂತರ ವಿವಾಹ ನಿರಾಕರಿಸಿ ಪರಾರಿಯಾಗಿದ್ದ, ಬಿಜೆಪಿ ಮುಖಂಡನ ಪುತ್ರ ಕೃಷ್ಣ ಜೆ.ರಾವ್‌ನನ್ನು (21) ಬಂಧಿಸುವಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರಿನ ಮಹಿಳಾ ಠಾಣೆ ಪೊಲೀಸರು ಕೊನೆಗೂ ಯಶಸ್ವಿಯಾಗಿದ್ದಾರೆ.

ಆರೋಪಿಯನ್ನು ಮೈಸೂರು ಜಿಲ್ಲೆಯ ಟಿ.ನರಸೀಪುರದಲ್ಲಿ ವಶಕ್ಕೆ ಪಡೆದ ಪೊಲೀಸರು ಪುತ್ತೂರಿಗೆ ಕರೆದುಕೊಂಡು ಬಂದಿದ್ದಾರೆ. ಪುತ್ತೂರಿನ ಪ್ರಭಾವಿ ಮುಖಂಡ, ನಗರಸಭಾ ಸದಸ್ಯ ಜಗನ್ನಿವಾಸ ರಾವ್ ಅವರ ಪುತ್ರ ಕೃಷ್ಣ ಜೆ.ರಾವ್ ಎಫ್‌ಐಆರ್ ದಾಖಲಾದ ಬೆನ್ನಲ್ಲೇ ನಾಪತ್ತೆಯಾಗಿದ್ದ. ಆತನನ್ನು ವಶಕ್ಕೆ ಪಡೆಯಲು ಕಳೆದ ಕೆಲವು ದಿನಗಳಿಂದ ಪೊಲೀಸರು ಹುಡುಕಾಟ ನಡೆಸುತ್ತಿದ್ದರು.

ಬಿಜೆಪಿ ಮುಖಂಡ ಜಗನ್ನಿವಾಸ ರಾವ್ ಮಗ ಕೃಷ್ಣ ಜೆ.ರಾವ್ ಹೈಸ್ಕೂಲ್‌ನಿಂದಲೇ ಪರಿಚಿತ. ಸದ್ಯ ಎಂಜಿನಿಯರಿಂಗ್ ಓದುತ್ತಿರುವ ಆರೋಪಿ ಕೃಷ್ಣ ಜೆ.ರಾವ್ ಮದುವೆಯಾಗುವುದಾಗಿ ಭರವಸೆ ನೀಡಿ ಹಲವು ಬಾರಿ ಸಂತ್ರಸ್ತೆ ಜತೆ ದೈಹಿಕ ಸಂಪರ್ಕ ಬೆಳೆಸಿದ್ದ.

ಆದರೆ, ಆರೋಪಿ ಶ್ರೀಕೃಷ್ಣ ಮದುವೆಯಾಗಲು ನಿರಾಕರಿಸಿದ್ದ. ಈ ಹಿನ್ನೆಲೆ ಪುತ್ತೂರು ಮಹಿಳಾ ಠಾಣೆಗೆ ದೂರು ನೀಡಲು ಸಂತ್ರಸ್ತೆ ಮುಂದಾಗಿದ್ದಳು. ಆದರೆ, ಆರೋಪಿ ಯುವಕನ ಮನೆಯವರು ಯುವತಿ ಮನೆಯವರ ಜತೆ ಮಾತನಾಡಿ, ಮದುವೆ ಮಾಡಿಸುವುದಾಗಿ ಭರವಸೆ ನೀಡಿದ್ದರು.

ಆರೋಪಿ ಯುವಕನಿಗೆ 21 ವರ್ಷ ವಯಸ್ಸಾಗಿಲ್ಲ. ಆದ ಕೂಡಲೇ ರಿಜಿಸ್ಟರ್ ಮ್ಯಾರೇಜ್ ಮಾಡುವುದಾಗಿ ಯುವಕನ ಮನೆಯವರು ಭರವಸೆ ನೀಡಿದ್ದರು. ಹೀಗಾಗಿ ದೂರು ಹಿಂಪಡೆಯಲಾಗಿತ್ತು. ಆದರೆ, ಯುವತಿಯ ಹೆರಿಗೆ ಸಮಯ ಸಮೀಪಿಸುತ್ತಿದ್ದಂತೆಯೇ ಆರೋಪಿ ಮದುವೆಗೆ ನಿರಾಕರಿಸಿದ್ದ. ಹೀಗಾಗಿ ಸಂತ್ರಸ್ತೆ ದೂರು ನೀಡಿದ್ದಳು. ಅಷ್ಟರಲ್ಲಿ, ಆರೋಪಿ ಪರಾರಿಯಾಗಿದ್ದ. ಜೂನ್ 23 ಕ್ಕೆ ಆರೋಪಿಗೆ ವಿವಾಹದ ವಯಸ್ಸು ಭರ್ತಿಯಾಗಿದೆ. ನಂತರ ಮದುವೆಗೆ ಹಿಂದೇಟು ಹಾಕಿದ್ದ ಆತ, ಪಿತೃತ್ವ ಒಪ್ಪಿಕೊಳ್ಳುವುದಿಲ್ಲ ಎಂದು ಹೇಳಿದ್ದ.

ಎಂಎಲ್‌ಸಿ ರವಿಕುಮಾರ್ ವಿರುದ್ಧ ಕೋಟೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲು

ಹೆಚ್.ಡಿ.ಕೋಟೆ, ಜು.5– ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಆಕ್ಷೇಪಾರ್ಹ ಪದಗಳನ್ನು ಬಳಸಿರುವ ವಿಧಾನಪರಿಷತ್ ಸದಸ್ಯ ಎನ್.ರವಿಕುಮಾರರ ವಿರುದ್ಧ ಮಹಿಳಾ ಸಾಂತ್ವನ ಕೇಂದ್ರದ ಆಪ್ತ ಸಹಾಯಕಿ ಜಶೀಲ ಪಟ್ಟಣ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಸರ್ಕಲ್ ಇನ್‌ಸ್ಪೆಕ್ಟರ್ ಗಂಗಾಧರ ಅವರಿಗೆ ಜಶೀಲಾ ಮತ್ತು ಸ್ತ್ರೀಶಕ್ತಿ ಮಹಿಳಾ ಸಂಘದ ಶೈಲ ಸುಧಾಮಣಿರವರು ದೂರು ಸಲ್ಲಿಸಿದ್ದಾರೆ.

ಈ ವೇಳೆ ಮಾತನಾಡಿದ ಅವರು, ಜು.1ರಂದು ವಿಧಾನಸೌಧದ ಬಳಿ ಇರುವ ಮಹಾತ್ಮ ಗಾಂಧಿ ಪ್ರತಿಮೆ ಬಳಿ ಪ್ರತಿಭಟನೆ ನಡೆಸಿದ ನಂತರ ವಿಧಾನಪರಿಷತ್ತಿನ ವಿರೋಧ ಪಕ್ಷದ ನಾಯಕರಾದ ಛಲವಾದಿ ನಾರಾಯಣಸ್ವಾಮಿ ಅವರು ಮಾತನಾಡುತ್ತಿದ್ದ ವೇಳೆಯಲ್ಲಿ ವಿಧಾನಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರಾದ ರವಿಕುಮಾರ್ ಆಕ್ಷೇಪಾರ್ಹ ಪದಗಳನ್ನು ಬಳಸಿ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ವಿರುದ್ಧ ಮಾತನಾಡಿದ್ದಾರೆ. ಆದ್ದರಿಂದ ಎನ್.ರವಿಕುಮಾರ್ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಬೇಕು ಎಂದರು.

50 ವರ್ಷದ ಹಿಂದೆ ಓದಿದ ಶಾಲೆಗೆ ಭೇಟಿ ನೀಡಿದ್ದ 75ರ ಹಿರಿಯ ಜೀವಗಳು

● ಕಲಿತ ಶಾಲೆ, ಓದಿದ ತರಗತಿ, ಆಡಿದ ಮೈದಾನದಲ್ಲಿ ಓಡಾಟ ● ಪಾಠ ಕಲಿಸಿದ ಗುರುಗಳ ನೆನೆದು ಕೃತಜ್ಞತೆ ಸಲ್ಲಿಕೆ

ನಂಜನಗೂಡು, ಜು.5–50 ವರ್ಷದ ಹಿಂದೆ ತಾವು ಓದಿದ ಶಾಲೆಗೆ 75 ವರ್ಷದ ಹಿರಿಯ ಜೀವಗಳು ಭೇಟಿ ನೀಡಿ ಹಳೆಯ ನೆನಪುಗಳನ್ನು ಮೆಲುಕು ಹಾಕಿದರು. ತಾವು ಓದಿದ ಶಾಲೆ, ಪಾಠ ಕಲಿತ ತರಗತಿ, ಓಡಾಡಿದ ಸ್ಥಳ, ಆಟವಾಡಿದ ಮೈದಾನದಲ್ಲಿ ಓಡಾಡಿ, ವಿದ್ಯೆ ಕಲಿಸಿದ ಗುರುಗಳನ್ನು ನೆನೆದು ನೆನಪಿನ ಬುತ್ತಿ ಬಿಚ್ಚಿಟ್ಟರು.

ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಹಿರಿಯ ವಿದ್ಯಾರ್ಥಿಗಳಾದ ಕೆ.ಎನ್.ವಾಸುದೇವ ಶಾಸ್ತ್ರಿ, ಶ್ರೀಧರ್, ನರಸಿಂಹಮೂರ್ತಿ, ಡಾ.ಎಸ್.ಸುಂದರೇಶ್, ಕುಮಾರಸ್ವಾಮಿ, ಶ್ಯಾಮ್‌ಸುಂದರ್, ಸೋಮ ನಾರಾಯಣ್, ನಾಗರಾಜ್, ಆದಿಶೇಷ, ಕೃಷ್ಣಮೂರ್ತಿ, ಯತಿರಾಜ್, ಥಾಮಸ್ ಅವರುಗಳು ಇತ್ತೀಚೆಗೆ ಶಾಲೆಗೆ ಭೇಟಿ ನೀಡಿ ತಮ್ಮ ಕಾಲದಲ್ಲಿ ನಡೆಯುತ್ತಿದ್ದ ಪಾಠ–ಪ್ರವಚನಗಳನ್ನು ಸ್ಮರಿಸಿದರು.

ಈ ಹಿಂದೆ ಬಾಲಕರ ಶಾಲೆಯಾಗಿದ್ದ ಈ ಶಾಲೆ ಈಗ ಬಾಲಕರ ಸರ್ಕಾರಿ ಪದವಿಪೂರ್ವ ಕಾಲೇಜಾಗಿ ಮಾರ್ಪಾಡಾಗಿದೆ. ಬಾಲಕರ ಶಾಲೆಯಲ್ಲಿ ಎಸ್‌ಎಸ್‌ಎಲ್‌ಸಿ ವಿದ್ಯಾಭ್ಯಾಸ ಮಾಡಿ ತೇರ್ಗಡೆಯಾದ ನಂತರ ಇವರುಗಳು ವಿವಿಧ ಕಡೆ ಕಲಿತು, ವಿವಿಧೆಡೆ ಕೆಲಸ ಮಾಡುತ್ತಿದ್ದರೂ ಒಬ್ಬರಿಗೊಬ್ಬರಿಗೂ ಒಡನಾಟವಿತ್ತು ಈ ಒಡನಾಟ ಇವರನ್ನು ಒಂದೆಡೆ ಸೇರಿ ತಮ್ಮ ಅನುಭವ ಹಂಚಿಕೊಳ್ಳುವಂತೆ ಮಾಡಿತು. ಈಗ ಇವರುಗಳಿಗೆ 75 ವರ್ಷ ತುಂಬಿದ್ದರೂ ತಮ್ಮ ಹರೆಯದ ದಿನಗಳನ್ನು ಮಾತ್ರ ಮರೆತಿಲ್ಲ.

ತಮಗೆ ಬೋಧಿಸಿದ ಶಿಕ್ಷಕರಾದ ಕೃಷ್ಣ ಅಯ್ಯಂಗಾರ್ ಮತ್ತು ಪ್ರಭಾಕರ್, ದೈಹಿಕ ಶಿಕ್ಷಕರಾದ ರಾಮಯ್ಯ ಅವರನ್ನು ನೆನೆದು ಇಂದು ನಾವು ಈ ಮಟ್ಟಕ್ಕೆ ತಲುಪಬೇಕಾದರೆ ಅವರೇ ಕಾರಣೀಭೂತರು ಎಂದು ಸ್ಮರಿಸಿಕೊಂಡು ಅವರಿಗೆ ಕೃತಜ್ಞತೆ ಸಲ್ಲಿಸಿದರು.

ಕಾಲೇಜಿನ ಎಲ್ಲ ಉಪನ್ಯಾಸಕರಿಗೆ ಸಿಹಿ ನೀಡಿ ವಿದ್ಯಾರ್ಥಿಗಳಿಗೆ ಸೂಕ್ತ ಮಾರ್ಗದರ್ಶನ ನೀಡುವ ಮೂಲಕ ಮುಂದಿನ ವ್ಯಾಸಂಗ ಮತ್ತು ಜೀವನಕ್ಕೆ ಸಹಾಯಕವಾಗುವ ರೀತಿಯಲ್ಲಿ ಪಾಠ ಪ್ರವಚನಗಳನ್ನು ಕಲಿಯಿರಿ ಎಂದು ಸಲಹೆಯನ್ನು ನೀಡಿದರಲ್ಲದೆ ಶಿಕ್ಷಕರು ಸಹ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿಕೊಳ್ಳುವ ಶಿಕ್ಷಣ ನೀಡುವಂತೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕಾಲೇಜಿನ ಪ್ರಾಂಶುಪಾಲ ಸಿ.ಆರ್.ದಿನೇಶ್, ಉಪನ್ಯಾಸಕರಾದ ಲಿಂಗಣ್ಣಸ್ವಾಮಿ, ನಾಗರಾಜು, ಮಾಲತಿ ಟಿ.ಕೆ, ರವಿ, ಆದಿಲ್ ಹುಸೇನ್, ನಾಗರಾಜ ರೆಡ್ಡಿ ಇತರರು ಉಪಸ್ಥಿತರಿದ್ದರು.



ಓದಿದ ಶಾಲೆಗೆ ಭೇಟಿ ನೀಡಿದ್ದ ಹಳೆಯ ಹಿರಿಯ ವಿದ್ಯಾರ್ಥಿಗಳು.

ಕೇಂದ್ರದ ಯೋಜನೆಗಳ ಜನರಿಗೆ ತಲುಪಿಸಿ

ದಿಶಾ ಸಭೆಯಲ್ಲಿ ಅಧಿಕಾರಿಗಳಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೂಚನೆ

ಮೈಸೂರು, ಜು. 5(ಆರ್‌ಕೆ)– ಕೇಂದ್ರದ ಯೋಜನೆಗಳ ಸೌಲಭ್ಯಗಳನ್ನು ಜನರಿಗೆ ಸಮರ್ಪಕವಾಗಿ ತಲುಪಿಸುವಂತೆ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಇಂದಿಲ್ಲಿ ಅಧಿಕಾರಿಗಳಿಗೆ ಸೂಚಿಸಿದರು.

ಮೈಸೂರು ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ, ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಲೋಕಸಭಾ ಕ್ಷೇತ್ರಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ನೀಡುತ್ತಿರುವ ಅನುದಾನವನ್ನು ಆಯಾ ಇಲಾಖೆ ಅಧಿಕಾರಿಗಳು ಸಮರ್ಪಕವಾಗಿ ಬಳಕೆ ಮಾಡಿ ಫಲಾನುಭವಿಗಳಿಗೆ ಪಾರದರ್ಶಕವಾಗಿ ಸೌಲಭ್ಯ ತಲುಪಿಸಬೇಕು ಎಂದರು.


ಅಗತ್ಯವಿರುವ ಯೋಜನೆಗಳಿಗೆ ಇಲಾಖೆಯಿಂದ ಅಂದಾಜುಪಟ್ಟಿ ತಯಾರಿಸಿ ಪ್ರಸ್ತಾವನೆ ಸಲ್ಲಿಸಿದಲ್ಲಿ ತಡ ಮಾಡದೇ ಅನುಮೋದನೆ ಮತ್ತು ಅನುದಾನ ಬಿಡುಗಡೆ ಮಾಡಿಸುವುದಾಗಿ ತಿಳಿಸಿದ ಹೆಚ್‌ಡಿಕೆ, ಸ್ಥಳೀಯ ಸಂಸದರು, ಜನಪ್ರತಿನಿಧಿಗಳ ಸಲಹೆ ಪಡೆದು ಅನುಷ್ಠಾನಗೊಳಿಸಬೇಕು, ಎಲ್ಲಿಯೂ ಲೋಪವಾಗದಂತೆ ಎಚ್ಚರ ವಹಿಸಿ ಎಂದು ತಾಕೀತು ಮಾಡಿದರು.

ಶಾಸಕ ಟಿ.ಎಸ್. ಶ್ರೀವತ್ಸ ಮಾತನಾಡಿ, ತಮ್ಮ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ಸಾಕಷ್ಟು ಕೆಲಸಗಳಾಗಬೇಕು. ಎಷ್ಟು ಅನುದಾನ, ಯೋಜನೆಗಳು ಅನುಮೋದನೆಯಾಗಿವೆ, ಯಾವ ಕೆಲಸ ಕೈಗೆತ್ತಿಕೊಳ್ಳಲಾಗಿದೆ ಎಂಬುದನ್ನು ಅಧಿಕಾರಿಗಳು ಹೇಳಿಲ್ಲ. ಪಾರ್ಕ್‌ಗಳ ಅಭಿವೃದ್ಧಿ ಬಗ್ಗೆಯೂ ತಮಗೆ ತಿಳಿದೇ ಇಲ್ಲ ಎಂದರು.

ಈ ವೇಳೆ ಉತ್ತರಿಸಿದ ಜಿಲ್ಲಾಧಿಕಾರಿಗಳು, ಯಾವುದೇ ಕೇಂದ್ರ ಪುರಸ್ಕೃತ ಯೋಜನೆಗಳ ಅನುದಾನ ವಾಪಸ್ ಹೋಗದಂತೆ ಬಳಸಿಕೊಳ್ಳಲಾಗುತ್ತಿದೆ. ಮೈಸೂರು–ಕುಶಾಲನಗರ ರಾಷ್ಟ್ರೀಯ ಹೆದ್ದಾರಿ 275ಗೆ ಶೇ. 90ರಷ್ಟು ಭೂಮಿ ಸ್ವಾಧೀನಪಡಿಸಿಕೊಂಡು ಎನ್‌ಹೆಚ್‌ಎಐಗೆ ಹಸ್ತಾಂತರಿಸಲಾಗಿದೆ. ಮೈಸೂರು ವಿಮಾನ ನಿಲ್ದಾಣದ ರನ್‌ವೇ ವಿಸ್ತರಣೆಗೆ ಅಗತ್ಯವಿದ್ದ 240 ಎಕರೆ ಭೂಮಿ ಪೈಕಿ ಬಹುತೇಕ ಸ್ವಾಧೀನಪಡಿಸಲಾಗಿದ್ದು, ನಾಲೆ, ಸೇತುವೆ, ವಿದ್ಯುತ್ ಮಾರ್ಗಗಳಂತಹ ಕೆಲ ಯುಟಿಲಿಟಿ ಸ್ಥಳಾಂತರಿಸುವುದಷ್ಟೇ ಬಾಕಿ ಇದೆ ಎಂದು ಸಭೆಗೆ ಮಾಹಿತಿ ನೀಡಿದರು.

ಈ ಸಂದರ್ಭ ಪವರ್ ಪಾಯಿಂಟ್ ಪ್ರೆಸೆಂಟೇಷನ್ ಮೂಲಕ ಸಚಿವರು, ಸಂಸದರಿಗೆ ಮಾಹಿತಿ ನೀಡಿದ ಅಧಿಕಾರಿಗಳು, ಮೈಸೂರು ಜಿಲ್ಲೆಯಲ್ಲಿ ಜಲಜೀವನ್ ಮಿಷನ್ ಯೋಜನೆಯಡಿ ಶೇ. 82ರಷ್ಟು ಕಾಮಗಾರಿಯನ್ನು ಪೂರ್ಣಗೊಳಿಸಲಾಗಿದೆ. ಸ್ವಚ್ಛ ಭಾರತ ಮಿಷನ್ ಅಡಿ ಶೇ. 100 ಪ್ರಗತಿ ಸಾಧಿಸಿದ್ದು ನರೇಗಾದಲ್ಲಿ ಉತ್ತಮ ಪ್ರಗತಿಯಾಗುತ್ತಿದೆ. ಗ್ರಾಮ ಪಂಚಾಯ್ತಿವಾರು ಘನತ್ಯಾಜ್ಯ ವಿಲೇವಾರಿ ಘಟಕ ಸ್ಥಾಪಿಸಲಾಗಿದೆ ಎಂದರು.

ರಾಷ್ಟ್ರೀಯ ಆರೋಗ್ಯ ಅಭಿಯಾನವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದ್ದು, ಈ ಬಾರಿ ವಾಡಿಕೆಗಿಂತಲೂ ಹೆಚ್ಚು ಮಳೆಯಾಗಿರುವುದರಿಂದ ಜಿಲ್ಲೆಯಲ್ಲಿ ಶೇಕಡಾ 53ರಷ್ಟು ಬಿತ್ತನೆ ಕಾರ್ಯ ಮುಗಿದಿದೆ ಹಾಗೂ ತಂಬಾಕು ಬೆಳೆಗೆ ಪರ್ಯಾಯವಾಗಿ ತೋಟಗಾರಿಕಾ ಹಾಗೂ ಇನ್ನಿತರ ಲಾಭದಾಯಕ ಬೆಳೆಗೆ ಪ್ರೋತ್ಸಾಹ ನೀಡಿ ಧನ ಸಹಾಯವನ್ನೂ ಮಾಡಲಾಗುತ್ತಿದೆ ಎಂದು ಅಧಿಕಾರಿಗಳು ವಿವರಿಸಿದರು.


ಮೈಸೂರು ಜಿಪಂ ಕಚೇರಿ ಸಭಾಂಗಣದಲ್ಲಿ ನಡೆದ ದಿಶಾ ಸಭೆಯ ಅಧ್ಯಕ್ಷತೆ ವಹಿಸಿ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಮಾತನಾಡಿದರು.

ಕ್ಷೇತ್ರ ವ್ಯಾಪ್ತಿ ನಡೆಯುತ್ತಿರುವ ಕೇಂದ್ರ ಪುರಸ್ಕೃತ ಯೋಜನೆಗಳ ಮಾಹಿತಿಯೇ ಇಲ್ಲ

ಅಧಿಕಾರಿಗಳ ವಿರುದ್ಧ ಮೈಸೂರು-ಕೊಡಗು, ಚಾ.ನಗರ ಸಂಸದರ ಆರೋಪ

ಮೈಸೂರು, ಜು. 5(ಆರ್‌ಕೆ)– ತಮ್ಮ ಕ್ಷೇತ್ರಗಳಲ್ಲಿ ನಡೆಯುತ್ತಿರುವ ಕೇಂದ್ರ ಪುರಸ್ಕೃತ ಅಭಿವೃದ್ಧಿ ಯೋಜನೆಗಳ ಪ್ರಗತಿ ಕುರಿತು ತಮಗೆ ಮಾಹಿತಿಯನ್ನೇ ನೀಡುತ್ತಿಲ್ಲ ಎಂದು ಮೈಸೂರು–ಕೊಡಗು ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಹಾಗೂ ಚಾಮರಾಜನಗರ ಸಂಸದ ಸುನಿಲ್ ಬೋಸ್ ಅಧಿಕಾರಿಗಳ ವಿರುದ್ಧ ಇಂದಿಲ್ಲಿ ಗಂಭೀರ ಆರೋಪ ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯ್ತಿ ಕಚೇರಿ ಸಭಾಂಗಣದಲ್ಲಿ ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಅಭಿವೃದ್ಧಿ ಸಮನ್ವಯ ಮತ್ತು ಉಸ್ತುವಾರಿ ಸಮಿತಿ (ದಿಶಾ) ಸಭೆಯಲ್ಲಿ ಅಧಿಕಾರಿಗಳ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದ ಯದುವೀರ್ ಅವರು, ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ಸ್ವದೇಶಿ ದರ್ಶನ ಮತ್ತು ಪ್ರಸಾದ ಯೋಜನೆಯಡಿ ಚಾಮುಂಡಿಬೆಟ್ಟದ ಅಭಿವೃದ್ಧಿ ಯೋಜನೆ ಜಾರಿ ಕುರಿತು ಸಂಬಂಧಪಟ್ಟ ಅಧಿಕಾರಿಗಳು ತಮಗೆ ಮಾಹಿತಿ ನೀಡಿಲ್ಲ ಎಂದು ದೂರಿದರು.

ಕೇಂದ್ರ ಸರ್ಕಾರದ ಅನುದಾನದಡಿ ಕೈಗೊಂಡಿರುವ ಯಾವುದೇ ಕಾಮಗಾರಿ, ಪ್ರಗತಿ ಕುರಿತಂತೆ ತಮಗೆ ಮಾಹಿತಿ ನೀಡಿದರೆ ಆಗ ಚರ್ಚಿಸಿ ಮತ್ತಷ್ಟು ಪರಿಣಾಮಕಾರಿಯಾಗಿ ಯೋಜನೆಗಳನ್ನು ಅನುಷ್ಠಾನ ಮಾಡಬಹುದು ಎಂದು ಅವರು ಇದೇ ಸಂದರ್ಭ ತಿಳಿಸಿದರು.

ಯದುವೀರ್ ಅವರ ಆಕ್ಷೇಪಣೆಗೆ ಧ್ವನಿಗೂಡಿಸಿದ ಚಾಮರಾಜನಗರ ಸಂಸದ ಸುನಿಲ್ ಬೋಸ್, ಗುಂಡ್ಲುಪೇಟೆಯಲ್ಲಿ ಕೇಂದ್ರ ಸರ್ಕಾರದ ಯೋಜನೆಯಡಿ ನಡೆಸುತ್ತಿರುವ ಅಭಿವೃದ್ಧಿ ಕಾಮಗಾರಿ ಬಗ್ಗೆ ಅಧಿಕಾರಿಗಳು ನನ್ನ ಗಮನಕ್ಕೆ ತಂದಿಲ್ಲ. ತಮಗಿಷ್ಟ ಬಂದಂತೆ ಕೆಲಸ ಮಾಡುವುದಾದರೆ ಅವರನ್ನು ನಿಯಂತ್ರಿಸುವುದೇಗೆ? ಜನಪರ ಕೆಲಸಗಳನ್ನು ಅನುಷ್ಠಾನ ಮಾಡುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಜಿಲ್ಲಾಧಿಕಾರಿ ಜಿ. ಲಕ್ಷ್ಮೀಕಾಂತ ರೆಡ್ಡಿ, ಕೇಂದ್ರ ಪುರಸ್ಕೃತ ಯೋಜನೆ ಹಾಗೂ ಅಭಿವೃದ್ಧಿ ಕುರಿತು ಸ್ಥಳೀಯ ಸಂಸದರ ಗಮನಕ್ಕೆ ತಂದು, ಅವರಿಗೆ ಪೂರ್ಣ ಮಾಹಿತಿ ನೀಡಿ ಸಲಹೆ, ಅವರ ಮಾರ್ಗದರ್ಶನದಂತೆ ಕಾರ್ಯರೂಪಕ್ಕೆ ತರಬೇಕು. ಶಿಷ್ಟಾಚಾರದಂತೆ ಕಾರ್ಯಕ್ರಮಕ್ಕೆ ಆಹ್ವಾನಿಸಬೇಕು ಎಂದು ಅಧಿಕಾರಿಗಳಿಗೆ ತಾಕೀತು ಮಾಡಿದರು.

ಅದಕ್ಕೆ ಪೂರಕವಾಗಿ ಮಾತನಾಡಿದ ಸಚಿವ ಹೆಚ್.ಡಿ. ಕುಮಾರಸ್ವಾಮಿ, ಯಾವುದೇ ಯೋಜನೆ ಅಥವಾ ಕಾರ್ಯಕ್ರಮದ ಉದ್ಘಾಟನೆಗೂ ಮುನ್ನ ಸಂಸದರು, ಶಾಸಕರು, ಸ್ಥಳೀಯ ಜನಪ್ರತಿನಿಧಿಗಳನ್ನು ಆಹ್ವಾನಿಸಿ ಎಂದು ಹೇಳುವ ಮೂಲಕ ಚರ್ಚೆಗೆ ಅಂತ್ಯ ಹಾಡಿದರು.

ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿಗಳಲ್ಲಿ 8 ಕಡೆ 'ಬ್ಲಾಕ್‌ಸ್ಪಾಟ್' ಎಂದು ಗುರುತಿಸಿದ್ದು, ಅಪಘಾತಗಳನ್ನು ತಪ್ಪಿಸುವ ಸಲುವಾಗಿ ಇಂಜಿನಿಯರ್‌ಗಳ ಸಲಹೆ ಮೇರೆಗೆ ದುರಸ್ತಿ ಮಾಡಲಾಗುತ್ತಿದೆ. ಹಾಗೆಯೇ ಎಲ್ಲೆಲ್ಲಿ ಬ್ಲಾಕ್‌ಸ್ಪಾಟ್‌ಗಳಿವೆ ಎಂಬುದನ್ನು ಪರಿಶೀಲಿಸಿ ತೊಂದರೆ ನಿವಾರಣೆಗೆ ಕ್ರಮ ವಹಿಸಿ ಎಂದು ಸಂಸದ ಯದುವೀರ್ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಸಿದ್ದಲಿಂಗಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ಕಸ ನಿರ್ವಹಣೆ, ಸ್ವಚ್ಛತಾ ಕಾರ್ಯ ಸಮಂಜಸವಾಗಿ ಮಾಡದೇ ಸಮಸ್ಯೆಯಾಗುತ್ತಿವೆ ಎಂಬ ದೂರುಗಳು ಬರುತ್ತಿವೆ. ಮೈಸೂರು ರಿಂಗ್ ರಸ್ತೆ ಬದಿ ಯಲ್ಲೂ ಕಟ್ಟಡ ತ್ಯಾಜ್ಯ ಸುರಿಯುತ್ತಿರುವ ಕುರಿತು ಮಾಹಿತಿ ಬರುತ್ತಿವೆ. ಆ ಬಗ್ಗೆ ಗಮನಹರಿಸಿ ಎಂದು ಸಂಸದರು ಇದೇ ವೇಳೆ ಸೂಚಿಸಿದರು.

ಶಾಸಕರಾದ ಟಿ.ಎಸ್. ಶ್ರೀವತ್ಸ, ಜಿ.ಡಿ. ಹರೀಶ್‌ಗೌಡ, ದಿಶಾ ಸಮಿತಿ ಸದಸ್ಯರಾದ ಅಶ್ವಿನ್‌ಕುಮಾರ್, ಜಿಲ್ಲಾ ಪಂಚಾಯ್ತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಎಸ್ಪಿ ಎನ್. ವಿಷ್ಣುವರ್ಧನ, ನಾಮನಿರ್ದೇಶಿತ ಸದಸ್ಯೆ ಪ್ರೇಮಾ ಶಂಕರೇಗೌಡ ಹಾಗೂ ಎಲ್ಲಾ ಇಲಾಖೆ ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಫಿನಿಕ್ಸ್ (ತ) + ಮಾರ್ಗನ್ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಮಾದೇವ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಸಿತಾರೆ ಜಮೀನ್ ಪರ್ (ಹಿಂ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕುಲದಲ್ಲಿ ಕೀಳ್ಯಾವುದೋ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮಾದೇವ (ಕ)	4 ಪ್ರದರ್ಶನಗಳು
ರಾಜಕಮಲ್	
3ಬಿಹೆಚ್‌ಕೆ (ತ)	4 ಪ್ರದರ್ಶನಗಳು
ಸಂಗಂ	
ಪೆನ್‌ಡ್ರೈವ್ (ಕ)	4 ಪ್ರದರ್ಶನಗಳು
ಲಿಡೋ	
ಕುಬೇರ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಭಗೀರಥ (ಕ) + ನವಗ್ರಹ (ಕ)	1+3 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	28 ಇಯರ್ಸ್ ಲೇಟರ್ (ಇಂ): ಬೆ.10.40ಕ್ಕೆ, ರಾ.7.55ಕ್ಕೆ, ಡಿಎನ್‌ಎ (ತ): ಮ.1.10ಕ್ಕೆ, ಕುಬೇರಾ (ತೆ): ಸಂ.4.05ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ರಾ.10.25ಕ್ಕೆ.
ಸ್ಕ್ರೀನ್ 2	ಇಲಿಯೋ (3ಡಿ)(ಇಂ): ಬೆ.11.30ಕ್ಕೆ, ಮ.1.45ಕ್ಕೆ, ಸಿತಾರೆ ಜಮೀನ್ ಪರ್ (ಹಿಂ): ಸಂ.4ಕ್ಕೆ, ರಾ.7.10ಕ್ಕೆ, ಯುನೈಟೆಡ್ ಕಿಂಗ್‌ಡಮ್ ಆಫ್ ಕೇರಳ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಮಾದೇವ (ಕ): ಬೆ.10.30ಕ್ಕೆ, ರಾ.7.10ಕ್ಕೆ, ಮಾತೊಂದ ಹೇಳುವೆ (ಕ): ಮ.1.15ಕ್ಕೆ, 28 ಇಯರ್ಸ್ ಲೇಟರ್ (ಇಂ): ಸಂ.4.30ಕ್ಕೆ, ವ್ಯಾಸನಸಮೇತಂ

ಐನಾಕ್ಸ್ ಮೂವೀಸ್
INOX LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಎಡಗೈಯೇ ಅಪಘಾತಕ್ಕೆ ಕಾರಣ (ಕ): ಮ.1.45ಕ್ಕೆ, ಸಂ.4.25ಕ್ಕೆ, ಸಂ.6.50ಕ್ಕೆ, ಮಾದೇವ (ಕ): ರಾ.9.15ಕ್ಕೆ.
ಸ್ಕ್ರೀನ್ 2	ಮಾದೇವ (ಕ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.30ಕ್ಕೆ.
ಸ್ಕ್ರೀನ್ 3	ಯುದ್ಧಕಾಂಡ 2 (ಕ): ಸಂ.6.50ಕ್ಕೆ.
ಸ್ಕ್ರೀನ್ 4	ಹೌಸ್‌ಫುಲ್ 5ಎ (ಹಿಂ): ಮ.1.15ಕ್ಕೆ, ಸಂ.4.30ಕ್ಕೆ, ರಾ.7.44ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS
ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಕುವೆಂಪು ಒಕ್ಕಲಿಗ ಕ್ಷೇಮಾಭಿವೃದ್ಧಿ ಟ್ರಸ್ಟ್‌ನಿಂದ ಪ್ರತಿಭಾ ಪುರಸ್ಕಾರ

ಮೈಸೂರು, ಜು.5– ಮೈಸೂರಿನ 'ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್' ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನಿಸಿದ್ದು, ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿಯಲ್ಲಿ ಕನಿಷ್ಠ ಅಂಕಗಳೊಂದಿಗೆ ತೇರ್ಗಡೆಯಾದ ವಿದ್ಯಾರ್ಥಿಗಳಿಗೂ ಪುರಸ್ಕಾರ ನೀಡಿ, ಉತ್ತೇಜಿಸಲು ನಿರ್ಧರಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.95ಕ್ಕಿಂತ ಹೆಚ್ಚು ಅಂಕ ಪಡೆದಿರುವ ವಿದ್ಯಾರ್ಥಿಗಳು, ಪದವಿ ಹಾಗೂ ಸ್ನಾತಕೋತ್ತರ ಪದವಿಯಲ್ಲಿ ಶೇ.85ಕ್ಕಿಂತ ಹೆಚ್ಚು ಅಂಕ ಗಳಿಸಿರುವ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುವುದು. ಜೊತೆಗೆ ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ.35ರಿಂದ 45ರಷ್ಟು ಅಂಕ ಗಳಿಸಿರುವ ವಿದ್ಯಾರ್ಥಿಗಳನ್ನೂ ಪುರಸ್ಕರಿಸಿ, ಪ್ರೋತ್ಸಾಹಿಸಲಾಗುವುದು.

ಒಕ್ಕಲಿಗ ಸಮುದಾಯದ ಮೈಸೂರು ನಗರ ಹಾಗೂ ಜಿಲ್ಲೆಯ ವಿದ್ಯಾರ್ಥಿಗಳು ಅಂಕಪಟ್ಟಿ ನಕಲು, ವಿಳಾಸ, ಪೋಷಕರು ಹಾಗೂ ಶಾಲಾ/ಕಾಲೇಜು ವಿವರಗಳೊಂದಿಗೆ ಜು.27ರೊಳಗೆ 'ಕುವೆಂಪು ಒಕ್ಕಲಿಗರ ಕ್ಷೇಮಾಭಿವೃದ್ಧಿ ಟ್ರಸ್ಟ್, ಕೆಂಪೀರೇಗೌಡ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆ ಕಟ್ಟಡ, ಆದಿಚುಂಚನಗಿರಿ ರಸ್ತೆ, 'ಐ' ಬ್ಲಾಕ್, ಕುವೆಂಪುನಗರ, ಮೈಸೂರು–23' ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು.

ಆ.15ಕ್ಕೆ ಪುರಸ್ಕಾರ ಪ್ರದಾನ: ನಗರದ ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪದಲ್ಲಿ ಆ.15ರಂದು ಸಂಜೆ 4ಕ್ಕೆ ಟ್ರಸ್ಟ್ ಉದ್ಘಾಟನೆಯೊಂದಿಗೆ ಪ್ರತಿಭಾ ಪುರಸ್ಕಾರ ಸಮಾರಂಭ ನಡೆಯಲಿದೆ. ಅದೇ ವೇಳೆ ವಿವಿಧ ಕ್ಷೇತ್ರದ ಪ್ರತಿನಿಧಿಗಳಿಗೆ ರಾಷ್ಟ್ರಕವಿ ಕುವೆಂಪು ಹಾಗೂ ಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯವರ ಹೆಸರಿನಲ್ಲಿ ಪ್ರಶಸ್ತಿ ನೀಡಿ ಅಭಿನಂದಿಸಲಾಗುವುದು. ಶ್ರೀ ಆದಿಚುಂಚನಗಿರಿ ಸಂಸ್ಥಾನದ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ, ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶ್ರೀ ರಾಮಕೃಷ್ಣ ಆಶ್ರಮದ ಶ್ರೀ ಮುಕ್ತಿದಾನಂದ ಸ್ವಾಮೀಜಿ, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಸೇರಿದಂತೆ ಸಚಿವರು, ಸಂಸದರು, ಶಾಸಕರು, ವಿಧಾನಪರಿಷತ್ ಸದಸ್ಯರು, ಇನ್ನಿತರ ಗಣ್ಯರು ಭಾಗವಹಿಸಲಿದ್ದಾರೆ. ಹೆಚ್ಚಿನ ವಿವರಗಳಿಗೆ ಸಂಘದ ಪ್ರಧಾನ ಕಾರ್ಯದರ್ಶಿ ರಘುರಾಮ್‌ಗೌಡ(94809–39152) ಹಾಗೂ ಸಂಚಾಲಕ ಬೂಕನಕೆರೆ ವಿಜೇಂದ್ರ(94480–26186) ಅವರನ್ನು ಸಂಪರ್ಕಿಸುವಂತೆ ಟ್ರಸ್ಟ್ ಅಧ್ಯಕ್ಷ ಹೆಚ್.ಕೆ.ರಾಮು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪ್ರಕಾಶ್ ಜ್ಯುವೆಲರ್ಸ್‌ನಲ್ಲಿ 'ಸ್ವರ್ಣ ಉತ್ಸವ'ಕ್ಕೆ ಉತ್ತಮ ಪ್ರತಿಕ್ರಿಯೆ



ಮೈಸೂರು, ಜು.5– ಮೈಸೂರಿನ ಶಿವರಾಮಪೇಟೆಯಲ್ಲಿನ ಪ್ರಕಾಶ್ ಜ್ಯುವೆಲರ್ಸ್‌ನಲ್ಲಿ ಆಯೋಜಿಸಿರುವ ಆಷಾಢ ಮಾಸದ ಮೆಗಾ ಸೇಲ್ 'ಸ್ವರ್ಣ ಉತ್ಸವ'ಕ್ಕೆ ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿದೆ.

ಶ್ರೇಷ್ಠ ಸಂಸ್ಕೃತಿ, ಪರಂಪರೆ ಹಾಗೂ ವೈಶಿಷ್ಟ್ಯಪೂರ್ಣ ಕರಕುಶಲತೆಯನ್ನು ಸಾರುವಂತಹ ಈ 'ಸ್ವರ್ಣ ಉತ್ಸವ' ಜು.9 ರವರೆಗೆ ಮುಂದುವರೆಯಲಿದ್ದು, ಗ್ರಾಹಕರು ಎಲ್ಲಾ ಚಿನ್ನಾಭರಣಗಳ ಖರೀದಿ ಮೇಲೆ ಪ್ರತಿ ಗ್ರಾಂಗೆ 555 ರೂ. ವಿಶೇಷ ರಿಯಾಯ್ತಿ ಪಡೆಯಬಹುದಾಗಿದೆ. ಪ್ರೀತಿಪಾತ್ರರಿಗೆ ಸುಂದರ ಹಾಗೂ ಮೌಲ್ಯಯುತ ಕೊಡುಗೆ ನೀಡುವುದರ ಜೊತೆಗೆ ಉತ್ತಮ ಹೂಡಿಕೆಗೆ ಈ ಮೆಗಾ ಸೇಲ್ ಅಪರೂಪದ ಅವಕಾಶ ಕಲ್ಪಿಸಿಕೊಟ್ಟಿದೆ.

ಮೈಸೂರಿನಲ್ಲಿ 1964ರಿಂದಲೂ ಅತ್ಯಂತ ವಿಶ್ವಾಸಾರ್ಹ ಚಿನ್ನಾಭರಣ ಮಳಿಗೆಯಾಗಿರುವ ಪ್ರಕಾಶ್ ಜ್ಯುವೆಲರ್ಸ್, ಇದೀಗ ಆಷಾಢ ಮಾಸದ ಮೆಗಾ ಸೇಲ್‌ನೊಂದಿಗೆ ವಧುವಿನಂತೆ ಸಿಂಗಾರಗೊಂಡಿದೆ. ಅತ್ಯಾಕರ್ಷಕ ಹಾಗೂ ಪಾರಂಪರಿಕ ಶೈಲಿಯ ಆಭರಣಗಳಿಂದ ಕಂಗೊಳಿಸುತ್ತಿದೆ. ಗ್ರಾಹಕರ ಅನುಕೂಲಕ್ಕಾಗಿ ಭಾನುವಾರವೂ ಮಳಿಗೆ ತೆರೆಯಲಾಗುತ್ತಿದ್ದು, ಕುಟುಂಬದೊಂದಿಗೆ ಭೇಟಿ ನೀಡುವಂತೆ ಪ್ರಕಟಣೆಯಲ್ಲಿ ಕೋರಲಾಗಿದೆ.

ಮಾಧ್ಯಮಗಳ ವರದಿಯಿಂದ ಆತಂಕಿತರಾಗಬೇಡಿ!

ಅಗತ್ಯವಿದ್ದರಷ್ಟೇ ಜಯದೇವ ಆಸ್ಪತ್ರೆಗೆ ಬನ್ನಿ

- ಜಯದೇವ ಸಂಸ್ಥೆ ನಿರ್ದೇಶಕ ಡಾ.ರವೀಂದ್ರನಾಥ್ ಸಲಹೆ
- 34 ಹಾಸಿಗೆಗಳ ನೂತನ ಕೊಠಡಿ ಉದ್ಘಾಟನೆ


ಮೈಸೂರಿನ ಜಯದೇವ ಆಸ್ಪತ್ರೆಯಲ್ಲಿ 34 ಹಾಸಿಗೆಗಳ ನೂತನ ಕೊಠಡಿಯನ್ನು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ್ ಶನಿವಾರ ಉದ್ಘಾಟಿಸಿದರು. ಮೈಸೂರು ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ ಸೇರಿದಂತೆ ಹಲವು ವೈದ್ಯರು ಉಪಸ್ಥಿತರಿದ್ದರು.

ಮೈಸೂರು, ಜು.5– ಹೃದಯಾಘಾತ ಪ್ರಕರಣ ಸಂಬಂಧಿತ ಮಾಧ್ಯಮಗಳ ವರದಿಯಿಂದ ಆತಂಕಗೊಳ್ಳಬೇಡಿ. ಮೊದಲು ಸ್ಥಳೀಯ ವೈದ್ಯರ ಬಳಿ ತಪಾಸಣೆ ಮಾಡಿಸಿದ ನಂತರ ಅಗತ್ಯವಿದ್ದರಷ್ಟೇ ಜಯದೇವ ಆಸ್ಪತ್ರೆಗೆ ಬನ್ನಿ ಎಂದು ಜಯದೇವ ಹೃದ್ರೋಗ ಮತ್ತು ವಿಜ್ಞಾನ ಸಂಸ್ಥೆಯ ನಿರ್ದೇಶಕ ಡಾ.ಕೆ.ಎಸ್.ರವೀಂದ್ರನಾಥ್ ಸಲಹೆ ನೀಡಿದರು.

ಹಾಸನದಲ್ಲಿ ಹೃದಯಾಘಾತದಿಂದ ಸಂಭವಿಸಿರುವ ಸಾವಿನ ಪ್ರಕರಣಗಳ ಅಧ್ಯಯನಕ್ಕೆ ಸರ್ಕಾರಕ್ಕೆ ನೇಮಿಸಿರುವ ತಾಂತ್ರಿಕ ಸಲಹಾ ಸಮಿತಿಯ ನೇತೃತ್ವ ವಹಿಸಿರುವ ಡಾ.ಕೆ.ಎಸ್.ರವೀಂದ್ರನಾಥ್, ಶನಿವಾರ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಗೆ ಭೇಟಿ ನೀಡಿ 34 ಹಾಸಿಗೆಗಳ ನೂತನ ಕೊಠಡಿಯನ್ನು ಉದ್ಘಾಟಿಸಿ ಮಾತನಾಡಿದರು.

ಹಾಸನ ಜಿಲ್ಲೆಯಲ್ಲಿ ಹೃದಯಾಘಾತದಿಂದ ಹೆಚ್ಚು ಜನ ಸಾವನ್ನಪ್ಪುತ್ತಿದ್ದಾರೆ ಎಂದು ಮಾಧ್ಯಮಗಳಲ್ಲಿ ನಿರಂತರ ವರದಿ ಬಿತ್ತರವಾಗುತ್ತಿರುವುದರಿಂದ ಜನ ಗಾಬರಿಗೊಂಡು ಜಯದೇವ ಆಸ್ಪತ್ರೆಗಳಿಗೆ ಧಾವಿಸುತ್ತಿದ್ದಾರೆ. ಮೈಸೂರಿನ ಜಯದೇವ ಆಸ್ಪತ್ರೆಗೆ ದಿನನಿತ್ಯ ಹೆಚ್ಚುವರಿಯಾಗಿ 400 ಜನ ತಪಾಸಣೆಗೆಂದು ಬರುತ್ತಿದ್ದಾರೆ. ಬೆಂಗಳೂರು ಹಾಗೂ ಕಲಬುರ್ಗಿ ಆಸ್ಪತ್ರೆಗಳಲ್ಲೂ ರೋಗಿಗಳ ಸಂಖ್ಯೆ ಜಾಸ್ತಿಯಾಗಿದೆ. ಇದರಿಂದ ವೈದ್ಯರು ಹಾಗೂ ಸಿಬ್ಬಂದಿ ಕಾರ್ಯದೊತ್ತಡ ಹೆಚ್ಚಾಗಿದೆ ಎಂದು ತಿಳಿಸಿದರು.

ಹೃದಯಾಘಾತದಿಂದ ಸಾವು ಎಂದು ಮಾಧ್ಯಮಗಳಲ್ಲಿ ನಿರಂತರ ವರದಿಯಾಗುತ್ತಿದೆ. ಆದರೆ ವಾಸ್ತವವಾಗಿ ಸಾವಿನ ಸಂಖ್ಯೆ ಹೆಚ್ಚಾದಂತೆ ಕಂಡುಬಂದಿಲ್ಲ. ಎಲ್ಲರೂ ಹೃದಯಾಘಾತದಿಂದಲೇ ಮೃತಪಟ್ಟಿದ್ದಾರೆ ಎಂಬ ನಿರ್ಧಾರಕ್ಕೆ ಬರಲಾಗುವುದಿಲ್ಲ. ಬೇರೆ ಕಾರಣಗಳಿಂದಲೂ ಸಾವು ಸಂಭವಿಸಿರಬಹುದು. ಈ ಬಗ್ಗೆ ಅಧ್ಯಯನಕ್ಕೆ ಸರ್ಕಾರ ಸೂಚಿಸಿದೆ. ಹೆಚ್ಚಿನ ರಕ್ತದೊತ್ತಡ, ಮಧುಮೇಹ, ಧೂಮಪಾನ, ಮದ್ಯಪಾನ, ಮಾನಸಿಕ ಒತ್ತಡದಿಂದ ಹೃದಯಾಘಾತ ಸಂಭವಿಸಬಹುದು. ಆದರೆ ನೀವೇ ನಿರ್ಧರಿಸಿಕೊಂಡು ಗಾಬರಿಯಿಂದ ಜಯದೇವ ಆಸ್ಪತ್ರೆಗೆ ಬರುವ ಬದಲು, ಸ್ಥಳೀಯ ವೈದ್ಯರ ಬಳಿ ತಪಾಸಣೆ ಮಾಡಿಸಿಕೊಂಡು, ಅಗತ್ಯವಿದ್ದರಷ್ಟೇ ಜಯದೇವ ಆಸ್ಪತ್ರೆಗೆ ಬನ್ನಿ. 30 ವರ್ಷ ಮೇಲ್ಪಟ್ಟವರು ವರ್ಷಕ್ಕೊಮ್ಮೆ ಹೃದಯ ತಪಾಸಣೆ ಮಾಡಿಕೊಂಡರೆ ಒಳ್ಳೆಯದು ಎಂದು ಸಲಹೆ ನೀಡಿದರು.

ಈ ಸಂದರ್ಭದಲ್ಲಿ ಮೈಸೂರು ಜಯದೇವ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಕೆ.ಎಸ್.ಸದಾನಂದ, ಆರ್‌ಎಂಓ ಡಾ.ಪಶುಪತಿ, ಡಾ.ಸಂತೋಷ್, ಡಾ.ವೀಣಾ ನಂಜಪ್ಪ, ಡಾ.ಶಿವಸ್ವಾಮಿ ಸೋಸಲೆ, ಡಾ.ಜಯಪ್ರಕಾಶ್, ಡಾ.ವಿಶ್ವನಾಥ್, ಡಾ.ದೇವರಾಜ್, ಡಾ.ಕುಮಾರ್, ಡಾ.ಶ್ರೀನಿಧಿ ಹೆಗ್ಗಡೆ, ಡಾ.ಭಾರತಿ, ಡಾ.ಮಂಜುನಾಥ್, ಡಾ.ಜಯಶೀಲನ್, ಡಾ.ನಂಜಪ್ಪ, ಡಾ.ರಶ್ಮಿ, ಡಾ.ವಿನಾಯಕ್, ನರ್ಸಿಂಗ್ ಅಧೀಕ್ಷಕಿ ಯೋಗಲಕ್ಷ್ಮೀ, ಗುರುಮೂರ್ತಿ, ಪಿಆರ್‌ಓ ವಾಣಿ ಮೋಹನ್ ಹಾಜರಿದ್ದರು.

ಭಾರತದ ಆಪರೇಷನ್ ಸಿಂಧೂರ್ ಕಾರ್ಯಾಚರಣೆ

ಪಾಕಿಸ್ತಾನವನ್ನು ಪ್ರಯೋಗಾಲಯ ರೀತಿಯಲ್ಲಿ ಬಳಸಿದ ಚೀನಾ

ಹಿರಿಯ ಪತ್ರಕರ್ತ ವಿಷ್ಣು ಸೋಮ್ ವಿಶ್ಲೇಷಣೆ

ಮೈಸೂರು,ಜು.5(ಪಿಎಂ)– ನಮ್ಮ ರಾಷ್ಟ್ರ ನಡೆಸಿದ ಆಪರೇಷನ್ ಸಿಂಧೂರ್ ಕಾರ್ಯಾಚರಣೆ ಸಂಬಂಧ ಚೀನಾ ತನ್ನ ನಾಲ್ಕನೇ ತಲೆಮಾರಿನ ಯುದ್ಧ ವಿಮಾನಗಳ ದಕ್ಷತೆ ಅಳೆಯಲು ಪಾಕಿಸ್ತಾನವನ್ನು ಪ್ರಯೋಗಾಲಯದ ರೀತಿಯಲ್ಲಿ ಬಳಸಿಕೊಂಡಿದೆ ಎಂದು ರಾಷ್ಟ್ರಮಟ್ಟದ ಸುದ್ದಿವಾಹಿನಿಯ ಹಿರಿಯ ಪತ್ರಕರ್ತ ವಿಷ್ಣು ಸೋಮ್ ಹೇಳಿದರು.

ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಮೈಸೂರು ಸಾಹಿತ್ಯ ಸಂಭ್ರಮದ 9ನೇ ಆವೃತ್ತಿಯ ಆಂಗ್ಲಾ (ಇಂಗ್ಲೀಷ್) ಗೋಷ್ಠಿಯಲ್ಲಿ ಶನಿವಾರ 'ಆಪರೇಷನ್ ಸಿಂಧೂರ್ ಅಂಡ್ ಎಸಲೇಕಷನ್ ಮ್ಯಾಟ್ರಿಕ್ಸ್ ; ಹೌ ಕ್ಲೋಸ್ ವರ್ ಇಂಡಿಯಾ ಅಂಡ್ ಪಾಕಿಸ್ತಾನ್ ಟು ಫುಲ್–ಬ್ಲೌನ್ ವಾರ್' ಕುರಿತು ಅವರು ಮಾತನಾಡಿದರು.

ಚೀನಾದ ಶಸ್ತ್ರಾಸ್ತ್ರಗಳ ಸಾಮರ್ಥ್ಯವನ್ನು ಎಂದಿಗೂ ತಳ್ಳಿಹಾಕಲಾಗದು. ಚೀನಾ ವಿಷಯದಲ್ಲಿ ನಮ್ಮ ರಾಷ್ಟ್ರ ದೊಡ್ಡ ಮಟ್ಟದ ಸಮಸ್ಯೆ ಎದುರಿಸುವಂತಾಗಿದೆ. ಚೀನಾ ತನ್ನ ನಾಲ್ಕನೇ ತಲೆಮಾರಿನ ವಿಮಾನಗಳ ದಕ್ಷತೆ ಅಳೆಯಲು ಪಾಕಿಸ್ತಾನವನ್ನು ಪ್ರಯೋಗಾಲಯ ರೀತಿಯಲ್ಲಿ ಬಳಸಿದೆ. ವಿವಿಧ ಕ್ಷಿಪಣಿ ವ್ಯವಸ್ಥೆಗಳು ಮತ್ತು ತಾವು ಸಂಗ್ರಹಿಸಬಹುದಾದ ದತ್ತಾಂಶ, ತಮ್ಮ ಶಸ್ತ್ರಾಸ್ತ್ರಗಳ ಕಾರ್ಯಕ್ಷಮತೆ ದೃಷ್ಟಿಯಿಂದ ಪಾಕಿಸ್ತಾನವನ್ನು ಬಳಸಿಕೊಂಡಿದ್ದು, ಇಷ್ಟು ಮಾತ್ರವಲ್ಲದೆ, ಭಾರತ ಹೇಗೆ ಪ್ರತಿಕ್ರಿಯೆ ನೀಡಿತು ಎಂಬ ಆಯಾಮದಲ್ಲೂ ಚೀನಾ ಇದೀಗ ವಿಶ್ಲೇಷಣೆ ಮಾಡಿಕೊಳ್ಳಲಿದೆ ಎಂದು ಹೇಳಿದರು.

ಪಾಕಿಸ್ತಾನದಲ್ಲಿ ಚೀನಾ ಬಳಸಿದ ಶಸ್ತ್ರಾಸ್ತ್ರಗಳು ವಿಫಲವಾಯಿತು ಎಂದು ಭಾರತೀಯ ಸೇನೆ ಕೈಚೆಲ್ಲಿಲ್ಲ. ಆ ರೀತಿಯ ಭ್ರಮೆ ಹೊಂದಿಲ್ಲ ಎಂದು ನಾನು ಭಾವಿಸುತ್ತೇನೆ. ಪಾಕಿಸ್ತಾನದಲ್ಲಿ ಚೀನಾ ಶಸ್ತ್ರಾಸ್ತ್ರಗಳ ಬಳಕೆ ವಿಚಾರದಲ್ಲಿ ಆಪರೇಟರ್‌ಗಳ ಗುಣಮಟ್ಟ ಸಹ ಅವಲೋಕಿಸಬೇಕಿದೆ. ಆಪರೇಟರ್ ಕಳಪೆಯಾಗಿದ್ದರೆ, ತರಬೇತಿ ಪಡೆಯದೇ ಇದ್ದರೆ ಶಸ್ತ್ರಾಸ್ತ್ರಗಳ ಸಮರ್ಥ ಬಳಕೆ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲೂ ನಾವು ಆಲೋಚನೆ ಮಾಡಬೇಕಿದೆ ಎಂದರು.

ಇದಕ್ಕೂ ಮುನ್ನ ಮಾತನಾಡಿದ ಹಿರಿಯ ಪತ್ರಕರ್ತ ಶಿವ್ ಅರೂರ್, ನಾವು ಚೀನಾದ ಶಸ್ತ್ರಾಸ್ತ್ರಗಳು ವಿಫಲವಾಗಿವೆ ಎಂದು ಸುಲಭವಾಗಿ ಹೇಳುತ್ತಿದ್ದೇವೆ. ಆದರೆ ಖಂಡಿತ ಅದೇ ನಿಜವಲ್ಲ. ಚೀನಾದ ಶಸ್ತ್ರಾಸ್ತ್ರಗಳು ನಾವು ಅಂದುಕೊಂಡಷ್ಟು ಸುಲಭವಲ್ಲ. ಅವುಗಳೆಲ್ಲಾ ಕಸದಂತೆ ಅಲ್ಲ. ಕೆಲವು ಆ ರೀತಿಯಲ್ಲಿ ಆಗಿರಬಹುದು. ಭಾರತದ ಸೇನಾ ಸಿಬ್ಬಂದಿ ಉಪಮುಖ್ಯಸ್ಥರು ನಿನ್ನೆ ಮಾಡಿದ ಭಾಷಣದಲ್ಲಿ ಪಾಕಿಸ್ತಾನವು ಮೂಲತಃ ಚೀನಾಗೆ ಶಸ್ತ್ರಾಸ್ತ್ರ ಪ್ರಯೋಗಾಲಯ ಆಗಿದೆ ಎಂದು ಹೇಳಿದ್ದಾರೆ. ಹಾಗಾದರೆ ಚೀನಾ ಶಸ್ತ್ರಾಸ್ತ್ರಗಳು ಎಷ್ಟು ಗುಣಮಟ್ಟದಿಂದ ಕೂಡಿವೆ ಎಂದು ವಿಷ್ಣು ಸೋಮ್ ಅವರನ್ನು ಪ್ರಶ್ನಿಸಿದರು.


ಮೈಸೂರಿನ ಹೋಟೆಲ್ ಸದರನ್ ಸ್ಟಾರ್‌ನ ಜ್ಯೋತಿ ಹಾಲ್‌ನಲ್ಲಿ ಶನಿವಾರ ಆಪರೇಷನ್ ಸಿಂಧೂರ್ ಕುರಿತು ವಿವರಿಸುತ್ತಿರುವ ಪತ್ರಕರ್ತರಾದ (ಎಡದಿಂದ) ಶಿವ್ ಅರೂರ್, ವಿಷ್ಣು ಸೋಮ್ ಅವರನ್ನು ಚಿತ್ರದಲ್ಲಿ ಕಾಣಬಹುದು.

12ನೇ ವರ್ಷದ ಸವಿನೆನಪು



ಚೆನ್ನಮ್ಮ

(06–07–2013)

ನೀವು ನಮ್ಮನ್ನಗಲಿ ಇಂದಿಗೆ 12 ವರ್ಷ ಕಳೆದರೂ ನಿಮ್ಮ ನೆನಪು ನಮ್ಮ ಹೃದಯದಲ್ಲಿ ಸದಾ ಹಚ್ಚಹಸಿರಾಗಿದೆ. ನಿಮ್ಮ ಮಾರ್ಗದರ್ಶನದಲ್ಲಿ ನಡೆಯುತ್ತಿರುವ,

ಇಂತಿ ನಿಮ್ಮ ಮಕ್ಕಳು
ನರಸಿಂಹ ಮತ್ತು ಕುಟುಂಬ ವರ್ಗ
ಮೊ.: 9845196544



ONLY ONE WAY **TAXI CHARGE**

MYSORE to BANGALORE
City drop or Pick up

BANGALORE to MYSORE MYSURU
Airport drop or Pick up

9611177599

DUBAI PACKAGE

5 Night 6 Days
Group Departure

- Roundtrip Airfare
- Dubai VISA
- Transport
- Meals
- Stay
- Sight Seeing
- Photography
- Tour Guide

02nd August 2025
Rs. 79,999/-
Call: 9945175354 / 9844245453
GOKLY TOURS & TRAVELS, Mysore


2ನೇ ವರ್ಷದ ಸವಿನೆನಪು



ಸದಾ ನಿಮ್ಮ ನೆನಪಿನಲ್ಲಿರುವ
ಪತಿ: ಜಿ.ಎನ್ ನಾರಾಯಣ (ಕೆ.ಎಸ್.ಆರ್.ಟಿ.ಸಿ)
ಮಗ: ಎನ್.ದೀಪಕ್ ಹಾಗೂ ಸಹೋದರರು, ಸೊಸೆಯಂದಿರು, ಅಳಿಯಂದಿರು ಮತ್ತು ನಲ್ಮೆಯ ಮೊಮ್ಮಕ್ಕಳು, ನಗುವನಹಳ್ಳಿ

ಶ್ರೀಮತಿ ಎಂ.ಸುಮಿತ್ರ
ನಿಧನ: 06.07.2023

ಭಾವಪೂರ್ಣ ಶ್ರದ್ಧಾಂಜಲಿ



ಹೆಚ್. ಚಂದ್ರಯ್ಯ
(RTO Office, Mandya. Rtd.,)
ಜನನ: 20–5–1944 ನಿಧನ: 30–6–2025

ಇವರ 11ನೇ ದಿನದ ಕಾರ್ಯವನ್ನು ದಿನಾಂಕ: 11–07–2025 ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಇವರ ಸ್ವಗೃಹ **ಚಾಮರಾಜನಗರ, ರಾಮಸಮುದ್ರದಲ್ಲಿ ಏರ್ಪಡಿಸಲಾಗಿದೆ.** ಆಹ್ವಾನ ಪತ್ರಿಕೆ ತಲುಪದವರು ಇದನ್ನೇ ಆಹ್ವಾನವೆಂದು ತಿಳಿದು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿ ಕೋರಬೇಕಾಗಿ ವಿನಂತಿ.


ಇಂತಿ ಮಕ್ಕಳಾದ ಸತೀಶ್‌ಚಂದ್ರ, ರಶ್ಮಿಚಂದ್ರ, ದಿವ್ಯಚಂದ್ರ ಹಾಗೂ ಪತ್ನಿ ಎನ್.ಎಸ್. ಜಯಲಕ್ಷ್ಮೀ, ಮೈಸೂರು. Mob: 7259759607

ಪೂಜೆ ದಿ. 11.7.2025 ಶುಕ್ರವಾರ ಮಧ್ಯಾಹ್ನ 12 ಗಂಟೆಗೆ
ಭೋಜನ : ದಿ. 12.7.2025 ಶನಿವಾರ ಮಧ್ಯಾಹ್ನ 12 ಗಂಟೆಗೆ



NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

ಉತ್ತರ ಕ್ರಿಯಾದಿ ಭೂಶಾಂತಿ ಆಹ್ವಾನ ಪತ್ರಿಕೆ



ಶ್ರೀಮತಿ ಲಕ್ಷ್ಮಮ್ಮರವರು
ನಿಧನ : 27–06–2025

ಇವರು ದಿನಾಂಕ : 27–06–2025 ಶುಕ್ರವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ತತ್ಸಂಬಂಧವಾಗಿ ದಿನಾಂಕ : 07–07–2025ನೇ ಸೋಮವಾರ ಬೆಳಿಗ್ಗೆ 11.30 ಗಂಟೆಗೆ ಉತ್ತರ ಕ್ರಿಯಾದಿ ಭೂಶಾಂತಿ ಕಾರ್ಯವನ್ನು" ನಮ್ಮ ಸ್ವಗೃಹ ಮೆಲ್ಲಹಳ್ಳಿ ಗ್ರಾಮ, ವರುಣ ಹೋ॥, ಮೈಸೂರು ತಾ॥ ಇಲ್ಲಿ ಏರ್ಪಡಿಸಿರುವುದರಿಂದ ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು :ಮೃತರ ಪತಿ ಶ್ರೀ ಎಂ.ಬಿ ಬೋರೆಗೌಡ ಮತ್ತು ಮಕ್ಕಳು, ಸೊಸೆಯಂದಿರು, ಅಳಿಯಂದಿರು ಮತ್ತು ಮೊಮ್ಮಕ್ಕಳು ಕುಟುಂಬವರ್ಗದವರು ಹಾಗೂ ಮೆಲ್ಲಹಳ್ಳಿ, ಹಳ್ಳಿಕೆರೆಹುಂಡಿ ಮತ್ತು ಹಾರೋಹಳ್ಳಿ ಗ್ರಾಮಸ್ಥರು

ಭೋಜನ : ಮಧ್ಯಾಹ್ನ 1.00 ರಿಂದ

ಹರಿಕಥೆ : ರಾತ್ರಿ 7.30 ರಿಂದ ನಾಗಲಿಂಗೇಗೌಡರ ತಂಡದವರಿಂದ ಪಾಂಡವಪುರ

The Best WATER PROOF Plywood



9148991267 | 9901291267

JOB OPPORTUNITY

Only for Retired, Fifty Plus and highly educated home makers and business opportunity only for Forty Plus

Contact: 9972187247

ಮೈಸೂರು ಮಿತ್ರ
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

ಸಾರ್ವಜನಿಕ ತಿಳುವಳಿಕೆ ಪತ್ರ


ನಮ್ಮ ಕಕ್ಷೀದಾರರಾದ ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ಟೌನ್, 1ನೇ ವಿಭಾಗ, 6ನೇ ವಾರ್ಡ್, ನಜೀರ್‌ಸಾಬ್ ಬಡಾವಣೆ, ಮನೆ ನಂ.913 ರಲ್ಲಿ ವಾಸವಾಗಿರುವ ಸುಮಾರು 48 ವರ್ಷ ವಯಸ್ಸುಳ್ಳ, 1ನೇ ಎಂ.ಮಾದೇಶ ಬಿನ್ ಲೇಟ್ ಮಹಾಲಿಂಗು ಮತ್ತು ಸದರಿ ಗುಂಡ್ಲುಪೇಟೆ ಟೌನ್, 4ನೇ ವಿಭಾಗ, 17ನೇ ವಾರ್ಡ್, ಕಾಂಪೌಂಡರ್ ಬೀದಿ, ಕುರುಬಗೇರಿಯಲ್ಲಿ ವಾಸವಾಗಿರುವ ಸುಮಾರು 48 ವರ್ಷ ವಯಸ್ಸುಳ್ಳ, 2ನೇ ಡಿ.ಭಾರ್ಗವ ಬಿನ್ ಲೇಟ್ ಜಿ.ಡಿ ದೊಡ್ಡಯ್ಯ ರವರ ಇರಾದೆಯ ಮೇರೆಗೆ ನಾವು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ತಿಳುವಳಿಕೆ ಪತ್ರದ ಷೆಡ್ಯೂಲ್ ಸ್ವತ್ತು ಮೇಲ್ಕಂಡ ಗುಂಡ್ಲುಪೇಟೆ ಟೌನ್‌ನ ದುಂದಾಸನಪುರ, 21ನೇ ವಾರ್ಡ್‌ನ ನಿವಾಸಿಗಳಾದ ಹಾಲಿ ಗುಂಡ್ಲು ಪೇಟೆ ಟೌನ್, ಗುಂಡ್ಲುಪೇಟೆ–ಊಟಿ ಮುಖ್ಯರಸ್ತೆ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಮತ್ತು ಕೆ.ಪಿ.ಟಿ ಹೋಟೆಲ್ ಹಿಂಭಾಗದಲ್ಲಿರುವ ಆಶೀರ್ವಾದ ಲೇಔಟ್‌ನಲ್ಲಿ ವಾಸವಾಗಿರುವ ಸುಮಾರು 47 ವರ್ಷ ವಯಸ್ಸುಳ್ಳ, ಶ್ರೀಮತಿ ಸುಧಾಮಣಿ ಕೆ.ಎಂ ಕೋಂ ಲೇಟ್ ಶಿವಪ್ಪ ಮತ್ತು ಅವರ ಮಕ್ಕಳಾದ ಸುಮಾರು 28 ವರ್ಷ ವಯಸ್ಸುಳ್ಳ, ಡಿ.ಎಸ್ ಸೋಮಶೇಖರ್ ಮತ್ತು ಸುಮಾರು 25 ವರ್ಷ ವಯಸ್ಸುಳ್ಳ ಡಿ.ಎಸ್ ಅರುಣ್‌ಕುಮಾರ್ ರವರಿಗೆ ಸೇರಿದ ಸ್ವತ್ತಾಗಿರುತ್ತದೆ. ಷೆಡ್ಯೂಲ್ ಸ್ವತ್ತಿನ ಮೇಲೆ ಸದರಿಯವರನ್ನು ಮತ್ತು ದಿನಾಂಕ: 25–01–2021ರ ಜಂಟಿ ಅಭಿವೃದ್ಧಿ ಕರಾರು ಪತ್ರದ ಉಪಸ್ಥಿತಿಯಲ್ಲಿ ನಮ್ಮ ಕಕ್ಷೀದಾರರನ್ನು ಹೊರತುಪಡಿಸಿ ಬೇರೆ ಯಾರಿಗೇ ಆಗಲಿ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ ಮತ್ತು ಸ್ವಾಧೀನ ವಗೈರೆ ಇರುವುದಿಲ್ಲ. ಸದರಿ ಶ್ರೀಮತಿ ಸುಧಾಮಣಿ ಕೆ.ಎಂ ಮತ್ತು ಅವರ ಮಕ್ಕಳು ಷೆಡ್ಯೂಲ್ ಸ್ವತ್ತಿನಲ್ಲಿ ನಿಯಮಾನುಸಾರ ಬಡಾವಣೆ ಯನ್ನು ನಿರ್ಮಾಣ ಮಾಡಿ ಆ ಮೂಲಕ ನಿವೇಶನಗಳನ್ನು ರಚಿಸಿ ಅಭಿವೃದ್ಧಿಗೊಳಿಸಿ ಮಾರಾಟ ಮಾಡುವ ಸಂಬಂಧ ನಮ್ಮ ಕಕ್ಷೀದಾರ ರೊಂದಿಗೆ ದಿನಾಂಕ: 25–01–2021 ರಂದು ಜಂಟಿ ಅಭಿವೃದ್ಧಿ ಕರಾರು ಪತ್ರವನ್ನು ಮಾಡಿಕೊಂಡಿರುತ್ತಾರೆ. ಮುಂದುವರೆದು, ಸದರಿ ಜಂಟಿ ಅಭಿವೃದ್ಧಿ ಕರಾರುಪತ್ರದ ಅಂಶಗಳ ಅನುಷ್ಠಾನದ ಭದ್ರತೆಗಾಗಿ, ಸದರಿ ಜಂಟಿ ಅಭಿವೃದ್ಧಿ ಕರಾರುಪತ್ರ ಮತ್ತು ದಿನಾಂಕ: 02–09–2021ರ ಹಣಸಂದಾಯ ರಶೀತಿ ಮೂಲಕ ಮರುಪಾವತಿ ಮಾಡುವ ನಿಭಂದನೆಯೊಂದಿಗೆ ರೂ.12,00,000/– ಗಳನ್ನು ನಮ್ಮ ಕಕ್ಷೀದಾರರಿಂದ ಚೆಕ್ ಮೂಲಕ ಮತ್ತು ನಗದಾಗಿ ಪಡೆದುಕೊಂಡಿರುತ್ತಾರೆ. ನಮ್ಮ ಕಕ್ಷೀದಾರರು ಸದರಿ ಜಂಟಿ ಅಭಿವೃದ್ಧಿ ಕರಾರು ಪತ್ರದನ್ವಯ ಷೆಡ್ಯೂಲ್ ಸ್ವತ್ತಿನಲ್ಲಿ ಸಂಬಂಧಪಟ್ಟ ಇಲಾಖೆಗಳಿಂದ ಅನುಮತಿ ಪಡೆದು ನಿಯಮಾನುಸಾರ ಬಡಾವಣೆ ನಿರ್ಮಾಣ ಮಾಡಿ ಆ ಮೂಲಕ ವಿವಿಧ ಅಳತೆಯ 37 ನಿವೇಶನಗಳನ್ನು ರಚಿಸಿರುತ್ತಾರೆ, ಪ್ರಸ್ತುತ ಸದರಿ ಬಡಾವಣೆಯಲ್ಲಿ ನೀರಿನ ಕೊಳವೆ ಅಳವಡಿಕೆ, ಒಳಚರಂಡಿ(ಸ್ಯೆನ್ಮಾಲ್ಕು), ಹೊರಚರಂಡಿಯ ಭಾಗಶಃ ಕೆಲಸ ಮತ್ತು ರಸ್ತೆ ಕಾಮಗಾರಿ, ವಿದ್ಯುತ್ ಮತ್ತು ನೀರಿನ ಸಂಪರ್ಕ, ವಿದ್ಯುತ್ ಕಂಬಗಳ ಸ್ಥಾಪನೆಯ ಕೆಲಸಗಳು ಮಾತ್ರ ಬಾಕಿ ಇರುತ್ತವೆ. ಷೆಡ್ಯೂಲ್ ಸ್ವತ್ತಿನಲ್ಲಿ ನಿಯಮಾನುಸಾರ ನಿರ್ಮಾಣ ಹಂತದಲ್ಲಿರುವ ಬಡಾವಣೆಯಲ್ಲಿನ ಸದರಿ 37 ನಿವೇಶನಗಳು ನಿಯಮಾನುಸಾರ ರೇರಾ ಕಾಯಿದೆಗೆ ಒಳಪಟ್ಟಿದ್ದು ಸದರಿ ಕಾಯಿದೆಯಿಂದ ಈವರೆವಿಗೂ ಮುಕ್ತಿಯಾಗಿರುವುದಿಲ್ಲ. ಸದರಿ ಜಂಟಿ ಅಭಿವೃದ್ಧಿ ಕರಾರುಪತ್ರದನ್ವಯ ಸದರಿ 37 ನಿವೇಶನಗಳ ಪೈಕಿ ಶೇಕಡ 60 ಭಾಗದಷ್ಟು ನಿವೇಶನಗಳು ಸದರಿ ಶ್ರೀಮತಿ ಕೆ.ಎಂ ಸುಧಾಮಣಿ ಮತ್ತು ಅವರ ಮಕ್ಕಳಿಗೆ ಸೇರತಕ್ಕದ್ದಾಗಿರುತ್ತದೆ, ಅದೇ ರೀತಿ ಉಳಿಕೆ ಶೇಕಡ 40 ಭಾಗದಷ್ಟು ನಿವೇಶ ನಗಳು ನಮ್ಮ ಕಕ್ಷೀದಾರರಿಗೆ ಸೇರತಕ್ಕದ್ದಾಗಿರುತ್ತದೆ. ಸದರಿ ಜಂಟಿ ಅಭಿವೃದ್ಧಿ ಕರಾರು ಪತ್ರದನ್ವಯ ಸದರಿ ಶ್ರೀಮತಿ ಕೆ.ಎಂ ಸುಧಾಮಣಿ ಮತ್ತು ಅವರ ಮಕ್ಕಳು, ಸದರಿ 37 ನಿವೇಶನಗಳ ಪೈಕಿ ನಮ್ಮ ಕಕ್ಷೀದಾರರ ಬಾಬ್ತು ಶೇಕಡ 40 ಭಾಗದಷ್ಟು ನಿವೇಶನಗಳ ಪರಬಾರೆ ವಗೈರೆ ಸಂಬಂಧ ನಮ್ಮ ಕಕ್ಷೀದಾರರ ಹೆಸರಿಗೆ ಸಾಮಾನ್ಯ ಅಧಿಕಾರ ಮುಕ್ತಿಯಾರು ಬರೆಯಿಸಿ ನೋಂದಾಯಿಸಿ ಕೊಡಬೇಕಾಗಿರುತ್ತದೆ. ಷೆಡ್ಯೂಲ್ ಸ್ವತ್ತಿನಲ್ಲಿ ನಿರ್ಮಾಣ ಮಾಡಿರುವ ಬಡಾವಣೆಯು ಮೂಖಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೊಳಪಟ್ಟಿರುತ್ತದೆ. ಮೂಖಹಳ್ಳಿ ಗ್ರಾಮ ಪಂಚಾಯತಿಯು ಈಗಾಗಲೇ ಸದರಿ 37 ನಿವೇಶನಗಳ ಪೈಕಿ ವಿವಿಧ ಅಳತೆಯ 20 ನಿವೇಶನಗಳನ್ನು, ರೇರಾ ಕಾಯಿದೆಯ ಉಪಸ್ಥಿತಿಯಲ್ಲಿ, ಪರಬಾರೆಗಾಗಿ ಬಿಡುಗಡೆಗೊಳಿಸಿರುತ್ತದೆ. ಈ ಮಧ್ಯೆ ಸದರಿ ಶ್ರೀಮತಿ ಸುಧಾಮಣಿ ಕೆ.ಎಂ ಮತ್ತು ಅವರ ಮಕ್ಕಳು ಸದರಿ ಜಂಟಿ ಅಭಿವೃದ್ಧಿ ಕರಾರಿನಲ್ಲಿನ ಅಂಶಗಳಿಗೆ ವಿರುದ್ಧವಾಗಿ ವರ್ತಿಸುತ್ತಿದ್ದ ಕಾರಣದಿಂದಾಗಿ, ಷೆಡ್ಯೂಲ್ ಸ್ವತ್ತಿನಲ್ಲಿನ ವಸತಿ ಬಡಾವಣೆಯ ನಮ್ಮ ಕಕ್ಷೀದಾರರ ಉಳಿಕೆ ಕಾಮಗಾರಿಗೆ ತೀವ್ರ ರೂಪದಲ್ಲಿ ತೊಂದರೆಯುಂಟಾಗಿದ್ದು ಆ ಸಂಬಂಧ ಅವರ ಮತ್ತು ನಮ್ಮ ಕಕ್ಷೀದಾರರ ನಡುವೆ ವಿವಾದ ಉದ್ಭವಿಸಿರುತ್ತದೆ, ಸದರಿ ವಿವಾದದ ಸಂಬಂಧ ನಮ್ಮ ಕಕ್ಷೀದಾರರ ಸದರಿಯವರುಗಳ ಮೇಲೆ ಸಂಬಂಧಪಟ್ಟ ನ್ಯಾಯಾಲಯದಲ್ಲಿ ಸೂಕ್ತ ರೀತಿಯ ಕಾನೂನಿನ ಕ್ರಮ ಕೈಗೊಳ್ಳುವ ಸಂಬಂಧ ಅಗತ್ಯ ಕ್ರಮಗಳನ್ನು ಕೈಗೊಂಡಿರುತ್ತಾರೆ. ವಸ್ತುಸ್ಥಿತಿ ಹೀಗಿರುವಲ್ಲಿ, ಸದರಿಯವರುಗಳು ಈಗಾಗಲೇ ಬಿಡುಗಡೆಯಾಗಿರುವ 20 ನಿವೇಶನಗಳನ್ನು, ಸದರಿ ಜಂಟಿ ಅಭಿವೃದ್ಧಿ ಕರಾರು ಪತ್ರದ ಅಂಶಗಳ ಮತ್ತು ರೇರಾ ಕಾಯಿದೆಯ ಉಪಸ್ಥಿತಿಯಲ್ಲಿ ಅಕ್ರಮವಾಗಿ ಪರಬಾರೆ ಮಾಡುವ ತೀವ್ರ ಪ್ರಯತ್ನದಲ್ಲಿರುತ್ತಾರೆಂಬ ವಿಚಾರವು ದಿನಾಂಕ: 04–07–2025 ರಂದು ನಮ್ಮ ಕಕ್ಷೀದಾರರ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ, ಸಾರ್ವಜನಿಕರಾರು ಷೆಡ್ಯೂಲ್ ಸ್ವತ್ತಿನಲ್ಲಿ ನಿರ್ಮಾಣ ಹಂತದಲ್ಲಿರುವ ವಸತಿ ಬಡಾವಣೆಯಲ್ಲಿನ ಸದರಿ 37 ನಿವೇಶನಗಳಿಗೆ ಸಂಬಂಧಿಸಿದಂತೆ ಸದರಿ ಶ್ರೀಮತಿ ಸುಧಾಮಣಿ ಕೆ.ಎಂ ಮತ್ತು ಅವರ ಮಕ್ಕಳೊಂದಿಗೆ ಯಾವುದೇ ರೀತಿಯಲ್ಲಿಯೂ ವ್ಯವಹರಿಸಬಾರದೆಂದು, ಒಂದು ವೇಳೆ ವ್ಯವಹರಿಸಿದಲ್ಲಿ ಸದರಿ ವ್ಯವಹಾರವು ಸದರಿ ಜಂಟಿ ಅಭಿವೃದ್ಧಿ ಕರಾರು ಪತ್ರದ ಮತ್ತು ಮೇಲ್ಕಂಡ ಅಂಶಗಳ ಉಪಸ್ಥಿತಿಯಲ್ಲಿ ಅಸಿಂಧುವಾಗುವುದಲ್ಲದೆ ಸದರಿ ವ್ಯವಹಾರವು ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ನಮ್ಮ ಕಕ್ಷೀದಾರರನ್ನು ಯಾವುದೇ ರೀತಿಯಲ್ಲಿಯೂ ಬದ್ಧಪಡಿಸುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತಿನ ಮೇಲಿನ ನಮ್ಮ ಕಕ್ಷೀದಾರರ ಹಕ್ಕಿಗೆ ಯಾವುದೇ ರೀತಿಯಲ್ಲಿಯೂ ಚ್ಯುತಿ ಉಂಟುಮಾಡುವುದಿಲ್ಲ ಮುಂದುವರೆದು, ಸದರಿ ವ್ಯವಹಾರದ ಸಂಬಂಧ ಮುಂದೆ ಉದ್ಭವಿಸುವ ಸಕಲ ರೀತಿಯ ತೊಂದರೆ ಮತ್ತು ಖರ್ಚುಗಳಿಗೂ ಮೇಲ್ಕಂಡವರೊಂದಿಗೆ ವ್ಯವಹರಿಸಿದವರು ಮಾತ್ರ ಸಂಪೂರ್ಣವಾಗಿ ಜವಾಬ್ದಾರರಾಗುತ್ತಾರೆಂದು ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸಲಾಗಿದೆ.


ಷೆಡ್ಯೂಲ್

ಚಾಮರಾಜನಗರ ಜಿಲ್ಲೆ, ಗುಂಡ್ಲುಪೇಟೆ ತಾಲ್ಲೂಕು, ಕಸಬ ಹೋಬಳಿ, ದುಂದಾಸನಪುರ ಗ್ರಾಮದ ಸರ್ವೇ ನಂ.22/4 ರಲ್ಲಿನ 1 ಎಕರೆ 38 ಗುಂಟೆ ಜಮೀನಿನಲ್ಲಿ ನಿರ್ಮಾಣ ಹಂತದಲ್ಲಿರುವ ವಿವಿಧ ಅಳತೆಯ 37 ನಿವೇಶನಗಳನ್ನು ಒಳಗೊಂಡಿರುವ ಪ್ರಸ್ತುತ ನೀರಿನ ಕೊಳವೆ ಅಳವಡಿಕೆ, ಒಳಚರಂಡಿ(ಸ್ಯೆನ್ಮಾಲ್ಕು), ಹೊರಚರಂಡಿಯ ಭಾಗಶಃ ಕೆಲಸ ಮತ್ತು ರಸ್ತೆ ಕಾಮಗಾರಿ, ವಿದ್ಯುತ್ ಮತ್ತು ನೀರಿನ ಸಂಪರ್ಕ, ವಿದ್ಯುತ್ ಕಂಬಗಳ ಸ್ಥಾಪನೆಯ ಕೆಲಸಗಳು ಮಾತ್ರ ಬಾಕಿ ಇರುವ ವಸತಿ ಬಡಾವಣೆಗೆ ಚಕ್ಕುಬಂದಿ:– ಪೂರ್ವಕ್ಕೆ: ಬಾಲಸುಬ್ರಮಣ್ಯರವರ ಜಮೀನು, ಪಶ್ಚಿಮಕ್ಕೆ: ವೆಂಕಟರಮಣಶೆಟ್ಟರವರ ಜಮೀನು, ಉತ್ತರಕ್ಕೆ: ದ್ರಾಕ್ಷಾಯಣಮ್ಮರವರ ಜಮೀನು, ದಕ್ಷಿಣಕ್ಕೆ : ಸರ್ಕಾರಿ ರಸ್ತೆ.

ವಕೀಲರು: ವಿಜಯಶ್ರೀ–ಲಾ ಅಸೋಸಿಯೇಟ್ಸ್, ಎಂ.ಸಿ ದೀಲಿಪ್ ಕುಮಾರ್, ಬಿ.ಕಾಂ., ಎಲ್.ಎಲ್.ಬಿ., ವಕೀಲರು. ನಂ. ಕೆ–8/1, ಮತ್ತು ಕೆ–8/1ಎ, 2ನೇ ಮಹಡಿ ವಾಣಿವಿಲಾಸ ಮುಖ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಮೈಸೂರು–570024.
ಸ್ಥಳ: ಮೈಸೂರು ದಿನಾಂಕ: 05–07–2025







ಸೈಟ್ ಮಾರಾಟಕ್ಕಿದೆ

40x56
ಸೌತ್ ಫೇಸ್ ಬೋಗಾದಿ ಮುಖ್ಯ ರಸ್ತೆ. ಬೋಗಾದಿ ಗದ್ದಿಗೆ ರಸ್ತೆ ಸಂಪರ್ಕಿಸಿ
8277585900

SITE FOR SALE

EASTERN HILLS RAI ESTATE
Mahadevapura Malavalli Road
(St. Arnolds Center School road)
30x40 West facing
Owner No.
6361884588, 9845267878

ಮಾರಾಟಕ್ಕಿವೆ

ಮೈಸೂರು ತಾಲೂಕು ಜಯಪುರ ಹೋಬಳಿ ಹಾಗೂ ಹಂಪಾಪುರ ಹೋಬಳಿಗಳಲ್ಲಿ 1 ಎಕರೆ 9 ಗುಂಟೆ 32 ಗುಂಟೆ, 35 ಗುಂಟೆ ಮತ್ತು ತೆಂಗಿನತೋಟ ಹಾಗೂ ಮಾವಿನ ತೋಟಗಳು ಮಾರಾಟಕ್ಕಿವೆ.

ಸಂಪರ್ಕಿಸಿ: 9945661696

FOR SALE

Fully developed residential sites for sale ready for Construction 80% Bank loan available in middle of Vasanthnagara MUDA Layout. Starts from 3799 per sqft.
20x 30, 30x40, 30x50, 40x50, 40x75, 46x83 dimension.

Contact :
8310602522 / 9141555998

MUDA SITE FOR SALE

140x62 Sq.ft.,
WEST FACING, 80ft. Road, JP Nagar,
Near Emerald Clarks Hotel.
Suitable for Industries, Hotel, PG, Service Apts
Genuine Buyers only,
4.25 CRS.

NELE PROPERTIES
Call : 70265 00097
Brokers Excuse

SRINIVASA LANDSCAPES

Your One-Stop Solution for All Things Green!

Transform your space into a lush paradise with our expert services:

1) Garden Design & Maintenance
2) Professional Landscaping, Tree & Plant Planting
3) Terrace & Vertical Gardens
4) Lawn Maintenance
5) Organic Manure & Soil Supply
6) 365 Seasonal Plant Care

Residential, Commercial. Industrial

Mobile: 97432-70299

ರತ್ನ ಪ್ಯಾರ ಮೆಡಿಕಲ್ ಕಾಲೇಜು
ಕುವೆಂಪುನಗರ, ಮೈಸೂರು

ADMISSION OPEN

- Bachelor's in Medical Lab technology
- Bachelor's in cardiac care Technology, OT, Dialysis & X-Ray
- Diploma in Medical Lab Technology
- B.Com (Digital Marketing)
- Direct PUC (Science, Commerce & Arts)

SSLC/PUC Pass/Fail

9886654463

GSSS GEETHA SHISHU SHIKSHANA SANGHA(R) INSTITUTE OF ENGINEERING AND TECHNOLOGY FOR WOMEN

NBA | Accredited by NAAC

(Affiliated to Visvesvaraya Technological University, Belagavi, Approved by AICTE New Delhi & Govt. of Karnataka)
KRS Road, Metagalli, Mysuru - 570016



VISVESVARAYA TECHNOLOGICAL UNIVERSITY, BELAGAVI
GSSS IETW RANK HOLDERS 2025

Management GSSS(R) commends Principal, HoD's , faculty and students for this achievement!!



ಬೆಂಗಳೂರು ಎಫ್‌ಕೆಸಿಸಿಐ, ಮಾಜಿ ಅಧ್ಯಕ್ಷರಾದ
ಸುಧಾಕರ್.ಎಸ್.ಶೆಟ್ಟಿ ಅವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು:



ಕೆ.ಬಿ.ಲಿಂಗರಾಜು	ಆರ್.ಆನಂದ್	ಶಿವಾಜಿ ರಾವ್	ವಿನೋದ್ ಜೈನ್	ಅಶೋಕ್.ಎಸ್.ಜೆ
ಅಧ್ಯಕ್ಷರು	ಉಪಾಧ್ಯಕ್ಷರು	ಗೌ.ಕಾರ್ಯದರ್ಶಿ	ಗೌ.ಜಂಟಿ ಕಾರ್ಯದರ್ಶಿ	ಗೌ. ಖಜಾಂಚಿ

ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ

VISHVAKSHEMA TRUST®
SHREE PARASHARA GURUKULAM

Experienced or Fresh Trimatastha Brahmins Candidates are required to teach following subjects for grades 5th to 10th (Central Syllabus / N.I.O.S Syllabus)

Sl.No.	Subject	Qualification	Essentials
1.	English	BA/MA with B.Ed.,	Major English in B.A. and B.Ed.
2.	Social Science	BA/MA with B.Ed.,	History, Geography & Economics/Political science in BA., History/ Geography in B.Ed.
3.	Computer Science	BCA / MCA	

Fluency in English is mandatory for all posts. Interested Candidates may please forward your Resume to the e-mail address given below within 7days from the date of advertisement.

vishvakshema@yahoo.com / parasharagurukulam@gmail.com

ಕರ್ನಾಟಕ ಸರ್ಕಾರ
ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳ ಕಛೇರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ

#342, ಮೂರನೇ ಮಹಡಿ, ಜಿಲ್ಲಾಡಳಿತ ಭವನ, ಶ್ರೀ ಬಿ.ರಾಚಯ್ಯ ಜೋಡಿ ರಸ್ತೆ, ಚಾಮರಾಜನಗರ – 571313
Email Id: dmochamarajanagar@gmail.com ದೂರವಾಣಿ ಸಂಖ್ಯೆ : 08226-222629

ಸಂಖ್ಯೆ: ಜಿರೋಆರೋನಿ/ಚಾನ/13/2025–26 ದಿ: 05/07/2025

ಪ್ರಕಟಣೆ

ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣ ಅಧಿಕಾರಿಗಳ ಕಛೇರಿ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ಒಬ್ಬರು ಕೀಟಸಂಗ್ರಹಕರ ಅವಶ್ಯಕತೆ ಇರುವುದರಿಂದ ಗುತ್ತಿಗೆ ಆಧಾರದ ಮೇಲೆ ಸರ್ಕಾರದ ನಿಯಮಾನುಸಾರ ನಿಶ್ಚಯ ಮಾಡಿಕೊಳ್ಳಲು ದಾಖಲಾತಿ ಪರಿಶೀಲನೆ ಮತ್ತು ನೇರ ಸಂದರ್ಶನವನ್ನು, ದಿನಾಂಕ: 16–07–2025 ರಂದು ಸಮಯ: ಬೆಳಿಗ್ಗೆ 11:00 ರಿಂದ ಸಾಯಂಕಾಲ 4:00 ರವರೆಗೆ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಕಾರ್ಯಾಲಯ, ಕೊಠಡಿ ಸಂಖ್ಯೆ: 312 3ನೇ ಮಹಡಿ, ಜಿಲ್ಲಾಡಳಿತ ಭವನ, ಚಾಮರಾಜನಗರ ಜಿಲ್ಲೆ, ಚಾಮರಾಜನಗರ ಇಲ್ಲಿ ಏರ್ಪಡಿಸಲಾಗಿದೆ.

ಕ್ರ.ಸಂ	ಹುದ್ದೆಯ ಹೆಸರು	ಹುದ್ದೆಗಳ ಸಂಖ್ಯೆ	ವಯೋಮಿತಿ	ವೇತನ	ವಿದ್ಯಾರ್ಹತೆ
1.	ಕೀಟಸಂಗ್ರಾಹಕ	01	ನೇರ ಸಂದರ್ಶನದ ದಿನಾಂಕಕ್ಕೆ 40 ವರ್ಷ ಮೀರಿರಬಾರದು	ರೂ/– 15114.22/– ಪ್ರತಿ ಮಾಹೆಗೆ	Should have passed 2nd PUC/12th Std. in Science Stream

ಷರತ್ತು ನಿಬಂಧನೆಗಳು:

1) ಒಂದು ವರ್ಷದ ಅವಧಿಗೆ ತಾತ್ಕಲಿಕ ನಿಟ್ಟಿನಲ್ಲಿ ನಿಶ್ಚಯ ಮಾಡಲಾಗುವುದು, ಹಾಗೂ ಕಾರ್ಯಕ್ಷಮತೆಯು ತೃಪ್ತಿಕರವಾಗಿದ್ದಲ್ಲಿ ಮುಂದಿನ ಆರ್ಥಿಕ ವರ್ಷದ ಅವಧಿಗೆ ಸೇವೆಯನ್ನು ಮುಂದುವರೆಸಲಾಗುವುದು.
2) ನೇಮಕಾತಿಯನ್ನು ಮೆರಿಟ್ ಆಧಾರದ ಮೇಲೆ ಮಾಡಲಾಗುತ್ತದೆ.
3) ಆಯ್ಕೆಯಾದ ಅಭ್ಯರ್ಥಿಗಳು ಸಂಚಿತ ವೇತನವನ್ನು ಹೊರತುಪಡಿಸಿ. ಇತರೆ ಭತ್ಯೆಗಳಾದ ಪ್ರಯಾಣ ಭತ್ಯೆ ಮತ್ತು ದಿನ ಭತ್ಯೆಗಳಿಗೆ ಅರ್ಹರಿರುತ್ತಾರೆ.
4) ಕಂಪ್ಯೂಟರ್ ಪ್ರಮಾಣ ಪತ್ರ ಲಗತ್ತಿಸಬೇಕು.
5) ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮವಾಗಿರುತ್ತದೆ.
6) Kamataka State Health & HFW Unit TRCH, SBI MADHAVANAGAR, Bangalore ಹೆಸರಲ್ಲಿ ರೂ. 50/- ರೂ. ಗಳ Registration Fee. DD ಯನ್ನು ಸಲ್ಲಿಸಿ, ನೇರ ಸಂದರ್ಶನಕ್ಕೆ ಹಾಜರಾಗುವುದು. (ಡಿಡಿ ಎಸ್.ಬಿ.ಐ. ಬ್ಯಾಂಕ್‌ನಿಂದ ಪಡೆದಿರಬೇಕು)
7) ಆಸಕ್ತ ಅಭ್ಯರ್ಥಿಗಳು ಮೂಲ ದಾಖಲಾತಿಗಳು ಹಾಗೂ ಅವುಗಳ ನಕಲು ಪ್ರತಿಗಳನ್ನು ಗೆಜೆಟೆಡ್ ಅಧಿಕಾರಿಗಳಿಂದ ದೃಢೀಕರಿಸಿ ಸಂದರ್ಶನ ಸಮಯದಲ್ಲಿ ಕಡ್ಡಾಯವಾಗಿ ಹಾಜರುಪಡಿಸುವುದು. (ಎಸ್ ಎಸ್ ಎಲ್ ಸಿ ಅಂಕಪಟ್ಟಿ, ಬೋರ್ಡ್‌ನಿಂದ ಪಡೆದಿರುವ 2nd PUC / 12th std. ಉತ್ತೀರ್ಣವಾಗಿರುವುದರ ಅಂಕಪಟ್ಟಿ, ಚುನಾವಣೆ ಗುರುತಿನ ಚೀಟಿ / ಆಧಾರ್ ಕಾರ್ಡ್)
8) ರಾಷ್ಟ್ರೀಯ ಆರೋಗ್ಯ ಅಭಿಯಾನ(ಎನ್.ಹೆಚ್.ಎಮ್) ಷರತ್ತು ಮತ್ತು ನಿಬಂಧನೆಗಳು ಅನ್ವಹಿಸುತ್ತವೆ.
9) ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಛೇರಿಯನ್ನು ಕರ್ತವ್ಯದ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ಸದಸ್ಯ ಕಾರ್ಯದರ್ಶಿಗಳು ಹಾಗೂ
ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ
ಚಾಮರಾಜನಗರ ಜಿಲ್ಲೆ, ಚಾಮರಾಜನಗರ.

ಸಂ: ವಾಸಾಸಂಇ.ಚಾನಗರ/186: 2025–26